ರಂಜನೆ ಬೋಧನೆ ಪ್ರಚೋದನೆ

ಗೌರಿ ಲಂಕೇಶ್

ಡಿಸೆಂಬರ್ 26, 2007 ರೂ. 10/-



BSP ನಿಗೂಢ ಶಕ್ತಿ!



ಹುಬ್ಬಳ್ಳಿ: ಗಂಡನನ್ನೇ ಕೊಲ್ಲಲು ಸುಪಾರಿ ಕೊಟ್ಟಳೆ ಚಂದನರಾಣಿ?

ICICI ಬ್ಯಾಂಕಿನ ಗೂಂಡಾಗಿರಿ

ಎರಡು ಸಾಹಿತ್ಯ ಸಮ್ಮೇಳನಗಳ ಕತೆ

ನಿಮ್ಮ ಶಾಸಕರು ಕಡಿದಿದ್ದೇನು?


ಚರಂತಿಮಠ ಎಂಬ ಶನಿ

ಲೂಟಿಯೇ ಖಂಡ್ರೆ ಸಾಧನೆ

ಚಾರ್ವಾಕ

- ಶಿವಸುಂದರ್-

'ಹೈಟೆಕ್ ವೇಶ್ಯೆ'ಗೆ ಲೈಂಗಿಕ ಸ್ವಾತಂತ್ರ್ಯವಿರಕೂಡದೆ?



ಬೆಂಗಳೂರಿನಲ್ಲಿ ಪ್ರವಾಸಿ ಮಹಿಳೆಯೋರ್ವಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಗಿದೆ ಎಂಬ ಸುದ್ದಿ ಇತ್ತೀಚೆಗೆ ದಿನಪತ್ರಿಕೆಗಳಲ್ಲಿ ವರದಿಯಾಯಿತು. ಆಕೆಯನ್ನು ಏರ್‌ಪೋರ್ಟ್‌ನಿಂದ ಖಾಸಗಿ ವಸತಿಗೃಹಕ್ಕೆ ಕರೆದುಕೊಂಡು ಬಂದ ಟ್ಯಾಕ್ಸಿ ಚಾಲಕ ಆಕೆಗೆ ಮತ್ತು ಬರುವ ಔಷಧ ನೀಡಿ ಆಮೇಲೆ ತನ್ನ ನಾಲ್ವರು ಸ್ನೇಹಿತರೊಂದಿಗೆ ಸತತ ನಾಲ್ಕು ದಿನಗಳ ಕಾಲ ಸಾಮೂಹಿಕ ಅತ್ಯಾಚಾರ ನಡೆಸಿದರೆಂದು ಆಕೆ ಪೊಲೀಸ್ ಕಮಿಷನರ್‌ಗೆ ದೂರು ನೀಡಿದಳು. ಆದರ ಬಗ್ಗೆ ಮಾಜಿ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನೇಸರ್ಗಿ ಮಾನವ ಹಕ್ಕು ಆಯೋಗಕ್ಕೆ ಮಾಧ್ಯಮದವರೆದುರು ದೂರು ನೀಡಿ ಪುಕ್ಕಟೆ ಪ್ರಚಾರವನ್ನೂ ಗಿಟ್ಟಿಸಿಕೊಂಡರು. ಆದರೆ ಮರುದಿನ ಮಾನವ ಹಕ್ಕು ಆಯೋಗ ಮತ್ತು ಪೊಲೀಸರು ಆಕೆಯನ್ನು ಕಾಣಲು ಬೌರಿಂಗ್ ಆಸ್ಪತ್ರೆಗೆ ಹೋದರೆ ಆಕೆ ಅಲ್ಲಿಂದ ಮಾಯವಾಗಿದ್ದಳು.

ಆಮೇಲೆ ಆಕೆಯ ಬಗ್ಗೆ ಅನುಕಂಪಕ್ಕಿಂತ ಅನುಮಾನವನ್ನೇ ಬೆಳೆಸಿಕೊಂಡ ಪೊಲೀಸರು ಆಕೆ ಯಾರು ತನ್ನನ್ನು ಅತ್ಯಾಚಾರ ಮಾಡಿದರು ಎಂದು ದೂರುತ್ತಿದ್ದಾಳೋ ಅವರೆಲ್ಲರ ಜೊತೆ ಅದಕ್ಕೆ ಮುನ್ನ ಮತ್ತು ಆ ನಂತರ ಮೊಬೈಲ್ ಸಂಪರ್ಕ ಹೊಂದಿದ್ದಳು ಎಂದು ತನಿಖೆಯಿಂದ ಗೊತ್ತಾಗಿದೆಯೆಂದೂ, ಆಕೆ ವೃತ್ತಿಪರ ವೇಶ್ಯೆಯೂ ಆಗಿರುವ ಸಾಧ್ಯತೆ ಇದ್ದು ಹಣಕಾಸು ವ್ಯವಹಾರದಲ್ಲಿ ಸಮ್ಮತಿ ಮೂಡದೆ ಆಕೆ ಅವರ ಮೇಲೆ ಸೇಡು ತೀರಿಸಿಕೊಳ್ಳಲು ಸುಳ್ಳು ದೂರನ್ನು ನೀಡಿರಬಹುದು ಎಂದೂ ಪೊಲೀಸರು ಮರುದಿನ ಪತ್ರಿಕಾಗೋಷ್ಠಿಯಲ್ಲಿ ತಮ್ಮ "ತನಿಖೆಯಿಂದ ಗೊತ್ತಾದ ಸತ್ಯ"ಗಳನ್ನು ಬಯಲುಪಡಿಸಿದರು.

ನಂತರದ ದಿನಗಳಲ್ಲಿ ಪತ್ರಿಕೆಗಳು ಸಹ ಆಕೆ 'ಹೈಟೆಕ್ ವೇಶ್ಯೆ' ಎಂದೇ ಬರೆಯತೊಡಗಿದವು ಹಾಗು ವಿಷಯದ ಬಗೆಗಿನ ಚರ್ಚೆಯಲ್ಲಿ ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆಯೋ ಇಲ್ಲವೋ ಎಂಬ ಅಂಶ ಮರೆಯಾಗಿ ಆಕೆ ಎಲ್ಲರನ್ನೂ ವಂಚಿಸಿದ 'ಹೈಟೆಕ್ ವೇಶ್ಯೆ' ಎಂಬ ಅಂಶವೇ ಪ್ರಾಧಾನ್ಯತೆ ಪಡೆಯತೊಡಗಿವೆ.

ಈ ಪ್ರಕರಣದಿಂದ ಉದ್ಭವಿಸಿರುವ ಹಲವು ಪ್ರಶ್ನೆಗಳಿಗೆ ನಮ್ಮ ಸಮಾಜ, ಮಾಧ್ಯಮಗಳು, ಸರ್ಕಾರ ಹಾಗೂ ಪೊಲೀಸರು ಉತ್ತರಿಸಬೇಕಿದೆ. ಸರಿ, ಆಕೆ 'ಹೈಟೆಕ್ ವೇಶ್ಯೆ'ಯೆಂದೇ ಇಟ್ಟುಕೊಳ್ಳೋಣ. ಆಗ ಆಕೆಗೆ ಲೈಂಗಿಕ ಸ್ವಾತಂತ್ರ್ಯವಿರುವುದಿಲ್ಲವೇ? ಅದು ಆಕೆಯ ವೃತ್ತಿಯೇ ಆಗಿದ್ದರೂ ಅದನ್ನು ತಾನು ಮಾಡಲು ನಿರಾಕರಿಸಿದಾಗ ಆಕೆಯನ್ನು ಆ ವೃತ್ತಿಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು ಆಕೆಯ ಮಾನವ ಹಕ್ಕು ಉಲ್ಲಂಘನೆಯಾಗುವುದಿಲ್ಲವೇ? ಆಕೆ 'ವೇಶ್ಯೆ'ಯಾದ ತಕ್ಷಣ ಆಕೆಗೆ ಮಾನವ ಹಕ್ಕುಗಳು ಅನ್ವಯವಾಗುವುದಿಲ್ಲವೇ? ಒಂದು ವೇಳೆ ಆಕೆ 'ವೇಶ್ಯೆ'ಯೇ ಆಗಿದ್ದು ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದ್ದರೆ ಅದು ಕ್ರಿಮಿನಲ್ ಅಪರಾಧವಾಗುವುದಿಲ್ಲವೇ?

ಈ ಎಲ್ಲಾ ಪ್ರಶ್ನೆಗಳು ಏಕೆ ಮುಖ್ಯವಾಗುತ್ತವೆ ಎಂದರೆ ಎಲ್ಲಾ ರೇಪ್ ಕೇಸುಗಳಲ್ಲೂ ಅಪರಾಧಿಗಳು ಮತ್ತು ಅವರಿಗೆ ಪೂರಕವಾಗಿ ಕೆಲಸ ಮಾಡುವ ಪೊಲೀಸರು ಬಳಸುವ ತಂತ್ರವೇ ಅಪರಾಧಕ್ಕೆ ಗುರಿಯಾದ ಹೆಣ್ಣಿನ ಹಿನ್ನೆಲೆಯನ್ನು ಪ್ರಶ್ನಾರ್ಹಗೊಳಿಸುವುದು. ಇದರಲ್ಲಿ ಮಾತ್ರವಲ್ಲ, ಪ್ರತಿ ಬಾರಿ ಮಹಿಳೆಯರು ನ್ಯಾಯ ಕೇಳಿಕೊಂಡು ಬಂದಾಗಲೂ ಆಕೆಗೆ ಏನಾಯಿತು? ಮತ್ತು ಅನ್ಯಾಯ ಮಾಡಿದವರು ಯಾರು? ಎಂಬ ಪ್ರಶ್ನೆಯೇ ಅಮುಖ್ಯವಾಗಿ ಆಕೆ ಯಾರು ಯಾವ ಹಿನ್ನೆಲೆಯುಳ್ಳವಳು ಎಂಬುದೇ ನ್ಯಾಯಾಲಯಗಳಲ್ಲಿ ಮತ್ತು ಪೊಲೀಸ್ ಸ್ಟೇಷನ್‌ಗಳಲ್ಲಿ ಮುಖ್ಯವಾಗಿಬಿಡುತ್ತದೆ. ಹಲವಾರು ಬಾರಿ ಆಕೆ ಸನ್ನಡತೆಯುಳ್ಳವಳಲ್ಲ ಎಂಬುದೇ ಆಕೆಯ ಮೇಲೆ ಬಲಾತ್ಕಾರ ಮಾಡಿದ ಅತ್ಯಾಚಾರಿಗಳಿಗೆ ಮಾಫಿ ಕೊಡುವ ಅಂಶವೂ ಆಗಿಬಿಡುತ್ತದೆ.

ಮಹಿಳೆ ಸಹ ವ್ಯಕ್ತಿಯಾಗಿ ತನ್ನ ದೇಹದ ಮೇಲೆ ಪರಮಾಧಿಕಾರ ಹೊಂದಿರುವ ಮತ್ತು ತನ್ನ ವೃತ್ತಿಯ ಬಗ್ಗೆ ಸಂಪೂರ್ಣ ಸ್ವಾತಂತ್ರ್ಯ ಹೊಂದಿರುವ ಪರಿಪೂರ್ಣ ನಾಗರಿಕಳೆಂಬ ಅಂಶವನ್ನೇ ನಗಣ್ಯ ಮಾಡಿಬಿಡುವಂತೆ ನಮ್ಮ ಸಮಾಜದಲ್ಲಿ ಮತ್ತು ಸರ್ಕಾರದಲ್ಲಿ ಬೇರು ಬಿಟ್ಟಿರುವ ಪುರುಷ ಪ್ರಧಾನ ಮೌಲ್ಯಗಳು ಮತ್ತು ಪೂರ್ವಗ್ರಹಗಳ ವಿರುದ್ಧ ಭಾರತದ ಮಹಿಳಾ ಚಳವಳಿಗಳು ಹೋರಾಡುತ್ತಾ ಬಂದಿವೆ. ವಾಸ್ತವವಾಗಿ 1872ರ ಸಾಕ್ಷಿ ಪುರಾವೆ ಕಾಯಿದೆಯ 155(4)ರ ಪ್ರಕಾರ ಬಲಾತ್ಕಾರದಂತಹ ಪ್ರಕರಣದಲ್ಲಿ ಅತ್ಯಾಚಾರದ ಮೊಕದ್ದಮೆ ಹೂಡುವ ಮಹಿಳೆಯ ಹಿನ್ನೆಲೆ ಏನೆಂಬುದೂ ಸಹ ಸಾಕ್ಷಿಯಾಗಿ ಪರಿಗಣಿಸುವಲ್ಲಿ ಮುಖ್ಯವಾದ ಅಂಶವಾಗಿತ್ತು. ಆದರೆ 1947ರ ನಂತರ ಮಹಿಳಾ ಮತ್ತು ಇತರ ಪ್ರಜಾತಾಂತ್ರಿಕ ಚಳವಳಿಯ ಕಾರಣದಿಂದ ಸಾಕ್ಷಿ ಕಾಯಿದೆಯಲ್ಲಿ ಈ ಅಂಶವನ್ನು ಕೈಬಿಡಲಾಗಿದೆ. ಆ ನಂತರದಲ್ಲಿ ಇತ್ತೀಚೆಗೆ ಸುಪ್ರೀಂಕೋರ್ಟು ರೇಪ್ ಪ್ರಕರಣಗಳಲ್ಲಿ ಬಲಿಯಾದ ಹೆಂಗಸಿನ ಹಿನ್ನೆಲೆ ಯಾವ ಕಾರಣಕ್ಕೂ ಅಪರಾಧದ ಸ್ವರೂಪವನ್ನು ನಿರ್ಧರಿಸುವಲ್ಲಿ ಯಾವುದೇ ಪಾತ್ರ ವಹಿಸುವಂತಿಲ್ಲ ಎಂದೇ ನಿರ್ದೇಶನ ನೀಡಿದೆ. ಬಲಾತ್ಕಾರಕ್ಕೆ ಗುರಿಯಾದ ಮಹಿಳೆ ದೂರು ನೀಡಿದ ತಕ್ಷಣ ಆಕೆಯ ದೂರನ್ನು ದಾಖಲಿಸಿ ಮೆಡಿಕಲ್ ಪರೀಕ್ಷೆಗೆ ಕಳಿಸಿ ಮೆಡಿಕಲ್ ವರದಿಯನ್ನು ತರಿಸಿಕೊಂಡು ತನಿಖೆ, ಬಂಧನ ಇನ್ನಿತ್ಯಾದಿ ಕಾನೂನು ಕ್ರಮಗಳನ್ನು ಪೊಲೀಸರು ಪ್ರಾರಂಭಿಸಬೇಕು.

ಸುಪ್ರೀಂಕೋರ್ಟ್ ಸಹ ನಿರ್ದಿಷ್ಟ ಪ್ರಕರಣವೊಂದು ರೇಪ್ ಅಲ್ಲವೆಂದೂ, ಪರಸ್ಪರ ಸಮ್ಮತಿಯೊಂದಿಗೆ ನಡೆದಿರುವ ಲೈಂಗಿಕ ಕ್ರಿಯೆಯೆಂದೂ ತೀರ್ಮಾನಕ್ಕೆ ಬರುವಾಗ ಹೆಂಗಸಿನ ವೃತ್ತಿಯನ್ನಾಗಲೀ, ಆಕೆ ಗಂಡಸನ್ನು ಪ್ರಚೋದನೆ ಮಾಡುತ್ತಿದ್ದಳೇ ಇಲ್ಲವೇ ಎಂಬುದನ್ನಾಗಲೀ ಆರೋಪಿಯ ಪರವಾದ ವಾದಗಳನ್ನಾಗಿ ಪರಿಗಣಿಸುವಂತಿಲ್ಲವೆಂದು ಸ್ಪಷ್ಟವಾಗಿ ನಿರ್ದೇಶನ ನೀಡಿದೆ. ಹೀಗಿದ್ದರೂ ಬಹುಪಾಲು ರೇಪ್ ಪ್ರಕರಣಗಳಲ್ಲಿ ನ್ಯಾಯಾಲಯಗಳು ಹೆಂಗಸಿನ ಕಡೆಯಿಂದ ಇದ್ದಿರಬಹುದಾದ ಪ್ರಚೋದನೆಯ ಅಂಶಗಳನ್ನು ಹುಡುಕುವ ಮತ್ತು ಅದನ್ನು ಹೆಂಗಸಿನ ಪ್ರಚೋದನೆಯ ಎದುರಿಗಿನ ಗಂಡಸಿನ ಅಸಹಾಯಕತೆ ಎಂದು ಪರಿಗಣಿಸಿ ಗಂಡಸಿನ ಕಾಮುಕತೆಯನ್ನು ಮುಚ್ಚಿಹಾಕಲು ಬಳಸಿರುವ ಪ್ರಕರಣಗಳೆ ಹೆಚ್ಚಿವೆ. ಹೀಗಾಗಿಯೇ ರೇಪ್ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಅತ್ಯಂತ ಕಡಿಮೆ.

ಬೆಂಗಳೂರಿನಲ್ಲಿ ನಡೆದಿರುವ ಈ ಮೇಲಿನ ಪ್ರಕರಣದಲ್ಲಿ ಆಕೆ 'ಹೈಟೆಕ್ ವೇಶ್ಯೆ' ಎಂದು ತೀರ್ಮಾನಿಸಲು ಪೊಲೀಸರಿಗೆ ಸಿಕ್ಕಿರುವ ಪುರಾವೆಯೆಷ್ಟು ಮತ್ತು ಆಕೆಯ ಹೇಳಿಕೆಯಲ್ಲಿರುವ ಗೊಂದಲ ಹಾಗೂ ಆಕೆಯ "ವರ್ತನೆಯನ್ನು" ನೋಡಿ ಮೂಡಿರುವ ಪೂರ್ವಾಗ್ರಹದಿಂದ ಬಂದಿರುವ ತೀರ್ಮಾನಗಳೆಷ್ಟು ಎಂಬುದನ್ನು ನೋಡಬೇಕಿದೆ. ಆಕೆ ಏಕಾಏಕಿ ಮಾಯವಾಗಿರುವುದು ಮತ್ತು ಆಕೆಯೇ ತನ್ನನ್ನು ಬಲಾತ್ಕಾರ ಮಾಡಿದರು ಎಂದು ಹೇಳಿದ ಆ ದಿನಗಳಲ್ಲಿ ಆಕೆ ಅದೇ ವ್ಯಕ್ತಿಗಳೊಂದಿಗೆ ಫೋನ್ ಸಂಪರ್ಕದಲ್ಲಿರುವುದನ್ನು ಬಿಟ್ಟರೆ ಪೊಲೀಸರ ಬಳಿ ಆಕೆಯ ವಿಳಾಸವೂ ಇಲ್ಲ, ಪುರಾವೆಗಳು ಇಲ್ಲ. ದೆಹಲಿ ಮೂಲದವಳಾದ ಆಕೆ ನಿಜಕ್ಕೂ ಅಲ್ಲಿ ದಂಧೆ ನಡೆಸುತ್ತಿದ್ದಳೇ ಎಂಬ ಬಗ್ಗೆಯೂ ಮಾಹಿತಿಯೂ ಇಲ್ಲ. ಎಲ್ಲಕಿಂತ ಹೆಚ್ಚಾಗಿ ಒಬ್ಬ ಹೆಂಗಸು ತನ್ನ ಮೇಲೆ ಸಾಮೂಹಿಕ ಅತ್ಯಾಚಾರವಾಗಿದೆ ಎಂದು ದೂರು ಕೊಟ್ಟಾಗ ಆಕೆಗೆ ರಕ್ಷಣೆ ಕೊಟ್ಟು ವೈದ್ಯಕೀಯ ವರದಿ ಪಡೆದುಕೊಳ್ಳುವ ವ್ಯವಸ್ಥೆ ಮಾಡದೆ ಪೊಲೀಸರು ಈ ಪ್ರಕರಣವನ್ನು ಅಷ್ಟೊಂದು ಹಗುರವಾಗಿ ಏಕೆ ತೆಗೆದುಕೊಂಡರು ಎಂಬುದೇ ತುರ್ತು ತನಿಖಾ ವಿಷಯವಾಗಬೇಕಿದೆ.

ಆದರಲ್ಲೂ ಒಮ್ಮೆ ಆಕೆ ಕಣ್ಮರೆಯಾದಳು ಎಂಬುದು ಬಯಲಿಗೆ ಬಂದೊಡನೆ ಆಕೆಯ ವೃತ್ತಿಯೇ ವೇಶ್ಯಾವಾಟಿಕೆಯದ್ದು ಎಂಬ ತೀರ್ಮಾನಕ್ಕೆ ಧುಮುಕಿ ಆಕೆಯ ದೂರಿನ ಬಗ್ಗೆಯೇ ಅನುಮಾನ ಮೂಡುವಂತೆ ಮಾಡಿರುವುದು ಪೊಲೀಸರ ಬಗ್ಗೆ ಅನುಮಾನ ಮೂಡಿಸುತ್ತದೆಯಲ್ಲದೆ ಮಹಿಳೆಯರ ಬಗ್ಗೆ ಅವರಿಗಿರುವ ಪೂರ್ವಗ್ರಹಗಳನ್ನು ಬಯಲಿಗೆಳೆಯುತ್ತದೆ.

ಅದೇರೀತಿ ಈ ಪ್ರಕರಣದಲ್ಲಿ ಅತ್ಯಂತ ಹೆಚ್ಚು ಮೈಲೇಜು ಪಡೆದ ಟಿವಿ 9 ಚಾನೆಲ್ಲಿನ ಅಪಾಢಭೂತಿತನ ಮತ್ತು ಹೀನಾಯ ಅವಕಾಶವಾದ. ಪ್ರಾರಂಭದಲ್ಲಿ ತಾನೇ ಆಕೆಯನ್ನು ಪೊಲೀಸ್ ಕಮಿಷನರ್ ಬಳಿ ಕರೆದುಕೊಂಡು ಹೋಗಿ ಅನ್ಯಾಯವಾದ ಮಹಿಳೆಗೆ ನ್ಯಾಯ ಕೊಡಿಸಲು ಹೋರಾಡಿದ ಕಥನವನ್ನು ಬಿತ್ತಿದ ಈ ಚಾನೆಲ್ಲು ಮರುದಿನ ಆಕೆ ಫ್ರಾಡ್ ಮತ್ತು 'ಹೈಟೆಕ್ ವೇಶ್ಯೆ' ಇರಬಹುದೆಂಬ ಕಥೆ ಬಿಚ್ಚಿಕೊಳ್ಳತೊಡಗಿದೊಡನೆ ಪ್ಲೇಟನ್ನೇ ಬದಲಾಯಿಸಿ ತನಗೆ ಆದರ ಬಗ್ಗೆ ಮೊದಲೇ ಅನುಮಾನ ಇತ್ತೆಂದು ಅದಕ್ಕೆ ಪೂರಕವಾದ ಚಿತ್ರಗಳನ್ನು ಬಿತ್ತರಿಸಲಾರಂಭಿಸಿತು. ಸುದ್ದಿ ಮಾಧ್ಯಮಗಳು ಸುದ್ದಿಯನ್ನು ಮಾತ್ರವಲ್ಲ, ಈ ಪೈಪೋಟಿ ಯುಗದಲ್ಲಿ ಸೆನ್ಸೇಷನಲ್ ಸುದ್ದಿಯನ್ನು ಅರಸುತ್ತವೆ.

ಅದರಲ್ಲೂ 24x7 ಸುದ್ದಿ ಚಾನೆಲ್‌ಗಳು ಬಂದ ಮೇಲೆ ಯಾವುದೇ ನೀತಿಸಂಹಿತೆಯಿಲ್ಲದೆ ಪ್ರತಿಯೊಂದು ಸುದ್ದಿಯನ್ನೂ ಸೆನ್ಸೇಷನಲ್ ಮಾಡಿಯೇ ತೋರಿಸುವ ನೈಚ್ಯಾನುಸಂಧಾನಕ್ಕಿಳಿದಿವೆ. ಅದರಲ್ಲಿ ಸದ್ಯಕ್ಕೆ ಟಿವಿ 9ಗೆ ಅಗ್ರಸ್ಥಾನ. ಅದರಲ್ಲೂ ಅನುಮಾನಾಸ್ಪದವಾಗಿ ಕಂಡು ಬರುವ ಹೆಣ್ಣುಮಕ್ಕಳ ಸುದ್ದಿ ಇತ್ತೆಂದರೆ ಕೆಲವು ಕನ್ನಡ ಟ್ಯಾಬ್ಲಾಯ್ಡ್‌ಗಳು ಮಾಡುವಂತೆ ಇದೂ ಸಹ ಹಸಿ ಮಾಂಸದ ಮಾರಾಟಕ್ಕೇ ತೊಡಗಿಬಿಡುತ್ತದೆ. ಈ ಕೀರ್ತಿ ಕೇವಲ ಇದೊಂದರದ್ದೆ ಅಲ್ಲ, ಪ್ರತಿಷ್ಠಿತ ಇಂಗ್ಲಿಷ್ ದಿನಪತ್ರಿಕೆಗಳಾದ ಟೈಮ್ಸ್, ಹಿಂದೂಗಳು ಸಹ ಇದೇ ರೀತಿಯ ವರದಿಗಳನ್ನು ಪ್ರಕಟಿಸಿದವು. ಟೈಮ್ಸ್ ಇರುವುದೇ ಹಾಗೆ. ಆದರೆ ಹಿಂದೂ ಸಹ ಇದೇದಾರಿ ಹಿಡಿದದ್ದು?

ಇವೆಲ್ಲವೂ ಈ ಪ್ರಕರಣವನ್ನೇ ತಿರುವುಮುರುವು ಮಾಡಿಬಿಟ್ಟಿದೆ. ಸರಿಯಾಗಿ ಪ್ರಕರಣವನ್ನು ಫಾಲೋ ಅಪ್ ಮಾಡದೆ ಕರ್ತವ್ಯಲೋಪ ಮಾಡಿರುವ ಪೊಲೀಸರು, ಅತ್ಯಾಚಾರದ ಆರೋಪ ಹೊತ್ತಿರುವ ಆ ಪ್ರಭಾವಿ ಮನೆತನದ ಗಣ್ಯರ ಮತ್ತು ಇವೆಲ್ಲವನ್ನು ವಿಚಕ್ಷಣೆ ಇಲ್ಲದೆ ಒಪ್ಪಿಕೊಳ್ಳುವ ನಮ್ಮ ಸುಶಿಕ್ಷಿತ ಸಮಾಜದ ನೈತಿಕತೆಯು ಆಕೆಯ ತಥಾಕಥಿತ ವೇಶ್ಯಾವಾಟಿಕೆಯ ಹಿಂದೆ ಬಚ್ಚಿಟ್ಟುಕೊಂಡುಬಿಟ್ಟಿದೆ. ಹೀಗಾಗಿ ಆಕೆ 'ಹೈಟೆಕ್ ವೇಶ್ಯೆ'ಯೋ ಅಲ್ಲವೋ ನಮ್ಮ ಸಮಾಜ ಮತ್ತು ಪೊಲೀಸರ ನೈತಿಕ ಶ್ರೇಷ್ಠತೆ ಉಳಿಯಬೇಕೆಂದರೆ ಆಕೆ 'ಹೈಟೆಕ್ ವೇಶ್ಯೆ' ಆಗಿರಲೇಬೇಕಿದೆ.

ಇದೇ ಈ ಪ್ರಕರಣದಲ್ಲಿರುವ ದೊಡ್ಡ ನೈತಿಕ ಅಪಾಯ. ನಾಳೆ ಆಕೆ ವೇಶ್ಯಾವೃತ್ತಿಯಲ್ಲೇ ಇದ್ದಳೆಂದು ಸಾಬೀತಾದರೂ ಆಕೆಯ ಮೇಲೆ ನಡೆಯಿತೆನ್ನಲಾದ ಸಾಮೂಹಿಕ ಅತ್ಯಾಚಾರವನ್ನು ಆಕೆ ವೇಶ್ಯೆ ಎಂಬ ಕಾರಣಕ್ಕೆ ಅಪರಾಧವೆಂದು ಪರಿಗಣಿಸದ ನಮ್ಮ ಸಮಾಜದ ಅಪಾಢಭೂತಿತನವೇನೂ ಸುಳ್ಳೆಂದಾಗುವುದಿಲ್ಲ.

✱

ಹರಕು ಬಟ್ಟೆಯವನೇ ಕಳ್ಳ!

"ಕನ್ನಡ ಮತ್ತು ಕನ್ನಡಿಗರ ಮೇಲೆ ಗಂಭೀರ ಪರಿಣಾಮ ಉಂಟುಮಾಡುತ್ತಿರುವ ವಲಸೆ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸ್ಪಷ್ಟ ನೀತಿ ಅನುಸರಿಸಬೇಕು."

-ಡಾ.ಸಿದ್ದಲಿಂಗಯ್ಯ

ನೇಮಕ ಮಾಡಿದ್ದು ಅಮೆರಿಕ!

"ಪಾಕಿಸ್ತಾನದ ಅಧ್ಯಕ್ಷ ಮುಷರಫ್ ಅಣ್ವಸ್ತ್ರ ನಿಯಂತ್ರಣ ಮತ್ತು ಅಭಿವೃದ್ಧಿಯ ನ್ಯಾಷನಲ್ ಕಮಾಂಡ್‌ನ ಅಧ್ಯಕ್ಷರಾಗಿ ನೇಮಕ."


-ಪತ್ರಿಕಾ ವರದಿ

ಈ ವ್ಯಾಧಿಗೆ ಮದ್ದುಂಟೆ?

"ಮೈಸೂರು ಜಿಲ್ಲಾ ಕನ್ನಡ ರತ್ನ ಶಿವರಾಜ್ ಕುಮಾರ್ ಸೇನಾ ಸಮಿತಿ ಮತ್ತು ಸತ್ಯ ಇನ್ ಲವ್ ಶಿವರಾಜ್‌ಕುಮಾರ್ ಸೇನಾ ಸಮಿತಿ ಇವರ ವತಿಯಿಂದ ದಿನಾಂಕ 14-12-2007ರಂದು ಶಿವಣ್ಣನವರ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಮಾಡಿ, 101 ತೆಂಗಿನಕಾಯಿ ಒಡೆದು ಸಿಡಿಮದ್ದುಗಳನ್ನು ಸಿಡಿಸಲಾಗುವುದು."

-ಸಿನಿಮಾ ಪುಟದಲ್ಲಿ ಒಂದು ಜಾಹಿರಾತು

ನೋ ಕಾಮೆಂಟ್ಸ್



"ಗಡಿಭಾಗದ ಅಭಿವೃದ್ಧಿಯಲ್ಲಿ ರಾಜಕಾರಣಿಗಳು ಸೋತಿದ್ದೇವೆ. ಜಲ ವಿವಾದಗಳಲ್ಲಿ ವೋಟುಗಳಿರುವುದರಿಂದ ನಾವು ಸ್ಪಂದಿಸಿದಂತೆ ಮಾಡಿ ಹಿಂದೆ ಸರಿಯುತ್ತೇವೆ. ಇದು ಶುದ್ಧ ರಾಜಕಾರಣ."

-ಎಚ್.ಕೆ. ಪಾಟೀಲ



"ಮುಖ್ಯಮಂತ್ರಿ ಐ ಲವ್ ಯು ಚಿತ್ರದಿಂದ ತಮಗೆ ಹತ್ತು ಕೋಟಿಯಷ್ಟು ಮಾನನಷ್ಟವಾಗುತ್ತದೆ ಎಂದು ದೇವೇಗೌಡರು ಏಕೆ ಭಾವಿಸುತ್ತಿದ್ದಾರೋ ನನಗೆ ಗೊತ್ತಾಗುತ್ತಿಲ್ಲ."

- ರವಿ ಬೆಳಗೆ

"ಕನ್ನಡನಾಡಿನ ನೆಲ ಜಲ ಬಳಸಿದವರಿಂದ ಕನ್ನ ಜನರಿಗೆ ಕೊಡುಗೆ ಏನು ಎಂದು ಕೇಳಲು ಇನ್ಫೋಸಿಸ್ ಮುಖ್ಯಸ್ಥ ನಾರಾಯಣಮೂರ್ತಿಯಂಥವ ರನ್ನು ಸಾಹಿ ಸಮ್ಮೇಳನಕ್ಕೆ ಆಹ್ವಾನಿಸಬೇಕು."

-ವೀರಪ್ಪ ಮೊಯ್ಲಿ

"ರಾಜ್ಯದಲ್ಲಿ ಸುಮಾರು 80,000 ಸಣ ಉದ್ದಿಮೆಗಳು ಕಣ್ಣು ಮುಚ್ಚಿರುವುದನ್ನು ನೋಡಿದರ ನರೇಂದ್ರ ಮೋದಿ ಸರ್ಕಾರ ಯಾವ ರೀತಿ ಅಭಿವೃದ್ಧಿ ಸಾಧಿಸಿದೆ ಎಂಬುದು ಗೊತ್ತಾಗುತ್ತದೆ."

-ಸೋನಿಯಾ ಗಾಂಧಿ

ನಂಬಿದ್ರೆನಂಬಿ ಬಿಟ್ರೆಬಿಡಿ



"ನನಗಿನ್ನೂ 21 ವರ್ಷ ಮಾತ್ರ. ನಾನು ಈಗಲೇ ಮದುವೆಯಾಗಲ್ಲ ಮತ್ತು ಯುವರಾಜ್ ಜೊತೆ ನನ್ನ ನಿಶ್ಚಿತಾರ್ಥವೂ ನಡೆದಿಲ್ಲ."

-ದೀಪಿಕಾ ಪಡುಕೋಣೆ



"ಪರ್ವೇಜ್ ಮುಷರಫ್‌ರವರಿಗೆ ಹತ್ತಿರವಾಗಿದ್ದಾರೆ ಎನ್ನುವ ಏಕೈಕ ಕಾರಣಕ್ಕಾಗಿ ಶೊಯಬ್ ಮಲ್ಲಿಕ್‌ರವರು ಪಿ.ಸಿ.ಬಿ. ಮುಖ್ಯಸ್ಥರಾಗಿದ್ದಾರೆ."

-ಇಮ್ರಾನ್ ಖಾನ್

"ಕಳೆದ ಮಾರ್ಚ್ 14ರಂದು ದೊಂಬಿಯಲ್ಲಿ ನಿರ ರಾಗಿದ್ದ ಗುಂಪು ಪೊಲೀಸರ ಮೇಲೆ ದಾಳಿ ಮಾಡಿದ್ದರಿಂ ದಲೇ ಆತ್ಮರಕ್ಷಣೆಗೆ ಪೊಲೀಸರು ಗುಂಡು ಹಾರಿಸಿದರು."


-ಕೆ.ಕೆ. ವೇಣುಗೋಪಾಲ್
ಸಿಪಿಎಂ ಸರ್ಕಾರದ ವಕೀಲ

ಈ ಜಾತಿ ಕೊಳಕು ಹೋಗುವುದೆಂತು?

"ಈ ಸಫಾಯಿ ಕೂಲಿಗಳ ಮನಸ್ಥಿತಿಯೇ ಅ ರೀತಿಯದ್ದು. ಅವರಿಗೆ ಎಷ್ಟೇ ಸುರಕ್ಷಾ ಸಾಮಗ್ರಿಗಳನ್ನು ಕೊಟ್ಟರೂ ಅವಿಲ್ಲದೆ ಬರಿಗೈಯಲ್ಲೇ ಕೆಲಸ ಮಾಡುವು ದರಲ್ಲೇ ಅವರಿಗೆ ತೃಪ್ತಿ."

-ಸಂಜಯ್ ಭಲ್ಲ,
ದೆಹಲಿಯ ರೈಲ್ವೆ ನಿಲ್ದಾಣದ ಶುಚಿತ್ವದ ಕಾಂಟ್ರಾಕ್ಟ್ ಪಡೆದಿರುವ ಯುರೇಕ ಫೋರ್ಬ್ಸ್ ಅಧ್ಯಕ್ಷ, ಸಫಾಯಿ ಕಾರ್ಮಿಕರಿಗೆ ಸುರಕ್ಷ ಸೌಲಭ್ಯ ಕೊಡದಿರುವ ಬಗ್ಗೆ ಕೇಳಿದಾಗ

ಉತ್ತರವಿಲ್ಲದ ಪ್ರಶ್ನೆಗಳು



"ಕನ್ನಡ ಅಭಿವೃದ್ಧಿಗೆ ನಿಮ್ಮ ಕೊಡುಗೆ ಏನು? ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಕೊಡಿಸುವಲ್ಲಿ ನೀವು ಏನು ಪ್ರಯತ್ನ ಮಾಡಿದ್ದೀರಿ?"

-ವೀರಪ್ಪ ಮೊಯ್ಲಿಯವರಿಗೆ ಸಭಿಕರ ಪ್ರಶ್ನೆ

ಅದ್ಭುತ ಪ್ರೇಮ ಪ್ರಕರಣಗಳೆಲ್ಲವೂ ಮಿರುಗುವ ಬಿಳಿ ಮದ್ಯ(ಶ್ರೇಷ್ಠ)ದೊಂದಿಗೆ ಪ್ರಾರಂಭವಾಗಿ ಕಷಾಯದಲ್ಲಿ ಕೊನೆಗೊಳ್ಳುತ್ತವೆ -ಹೊನೋರ್ ಡಿ ಬಲ್ಜಾ

ಒಪ್ಪಲಾಗದ ಗಾಂಧಿ ನಿಲುವು...!



ಕಂಡಹಾಗೆ

ಎರಡು ವಾರಗಳ ಹಿಂದೆ 'ತೆಹೆಲ್ಕಾ'ದಲ್ಲಿ ಎಸ್. ಆನಂದ್ ಎಂಬುವವರು ಸಫಾಯಿ ಕರ್ಮಚಾರಿಗಳ ಬಗ್ಗೆ ಬರೆದಿದ್ದ ಲೇಖನದಲ್ಲಿನ ಹಲವು ಅಂಕಿಅಂಶಗಳನ್ನು ಆಧರಿಸಿ ಒಂದು ಟಿಪ್ಪಣಿ ಬರೆದಿದ್ದೆ. ಆದರೆ ಈ ಬಾರಿ ಅವರು ಬರೆದಿರುವ ಮತ್ತೊಂದು ಲೇಖನದ ಹಲವು ಪ್ಯಾರಾಗಳನ್ನೇ ಅನುವಾದಿಸಿ ಇಲ್ಲಿ ನೀಡುತ್ತಿದ್ದೇನೆ. ಯಾಕೆಂದರೆ ಇದು ಸಫಾಯಿ ಕರ್ಮಚಾರಿಗಳನ್ನು ಕುರಿತಂತೆ ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಹೇಳಿದ್ದು. ಗಾಂಧಿಯವರನ್ನು ಅರ್ಥ ಮಾಡಿಕೊಳ್ಳಲೂ ಇದು ಉಪಯುಕ್ತವಾಗುತ್ತದೆ:

ಇತ್ತೀಚೆಗೆ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿ "ಬಾಲ್ಮಿಕಿ ಜನಾಂಗದವರಿಗೆ ಜಾಡಮಾಲಿ ಕೆಲಸವು ಆಧ್ಯಾತ್ಮಿಕ ಅನುಭವ ನೀಡಿರಬೇಕು... ಹಿಂದೊಮ್ಮೆ ಜಾಡಮಾಲಿ ಕೆಲಸ ಮಾಡುತ್ತಿರುವಾಗ ಅವರಲ್ಲೊಬ್ಬರಿಗೆ ಜ್ಞಾನೋದಯವಾಗಿದ್ದಿರಬೇಕು" ಎಂದರು. ಬಹಳಷ್ಟು ಜನರಿಗೆ ಈ ಹೇಳಿಕೆ ಹಾಸ್ಯಮಯವಾಗಿ ಕಂಡಿರಲಿಲ್ಲ. ಆದರೆ ಈ ವಿಷಯದಲ್ಲಿ ಮೋಹನ್‌ದಾಸ್ ಕರಮಚಂದ್ ಗಾಂಧಿಯವರ ಅಭಿಪ್ರಾಯವೂ ಭಿನ್ನವಾಗಿರಲಿಲ್ಲ.

ಗಾಂಧಿಯವರು ಜಾಡಮಾಲಿ ಕಸುಬನ್ನು ವಿರೋಧಿಸುತ್ತಿದ್ದರು ಎಂದೇ ಎಲ್ಲರೂ ಭಾವಿಸಿದ್ದಾರೆ. ಆದರೆ **'Collected Works Of Mahatma Gandhi'** ಎಂಬ ಅವರ ಲೇಖನಗಳ ಸಂಗ್ರಹವನ್ನು ಓದಿದರೆ ಅವರು ಜಾಡಮಾಲಿ ಕಸುಬನ್ನು ವಿರೋಧಿಸುತ್ತಿರಲಿಲ್ಲವೆಂದೂ, ಬದಲಾಗಿ ಅದನ್ನು ರೋಮಾಂಚಕಾರಿಯಾದ ವೃತ್ತಿಯೆಂದೂ ಸಮರ್ಥಿಸುತ್ತಿದ್ದರಲ್ಲದೆ ಅದೊಂದು ಗೌರವಯುತ ಕೆಲಸವಾದ್ದರಿಂದ ಅದನ್ನು ಭಂಗಿಗಳು ಮುಂದುವರೆಸಬೇಕೆಂದು ಆಶಿಸುತ್ತಿದ್ದರು ಕೂಡ ಎಂಬುದು ಅರ್ಥವಾಗುತ್ತದೆ.

ಇವತ್ತು ಮಲವನ್ನು ಎತ್ತುವ ಪದ್ಧತಿ ಇನ್ನೂ ಮುಂದುವರೆದಿರುವುದಕ್ಕೆ ಮತ್ತು ಆ ಕಸುಬಿನಲ್ಲೇ ಒಂದು ಸಮುದಾಯ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವುದಕ್ಕೆ ನೇರವಾದ ಕಾರಣ ನಮ್ಮ ನೀತಿ ನಿರೂಪಣೆಗಳ ಮೇಲೆ ಗಾಂಧಿಯವರ ಚಿಂತನಾಕ್ರಮ ಬೀರಿರುವ ಪ್ರಭಾವ ಎಂದು ಹೇಳಬಹುದು. ಗಾಂಧಿ ಏನು ಹೇಳಿದ್ದಾರೆ ಎಂಬುದಕ್ಕೆ ಹಲವು ಉದಾಹರಣೆಗಳತ್ತ ಗಮನ ಹರಿಸೋಣ.


'ಹರಿಜನ್' ಪತ್ರಿಕೆಯಲ್ಲಿ **(1934)** ಗಾಂಧಿ ಹೀಗೆ ಬರೆದಿದ್ದಾರೆ:



"ಮಾನವ ಕುಲಕ್ಕೆ ದಕ್ಕಿರುವ ಅತಿ ಗೌರವಾನ್ವಿತ ಕಸುಬುಗಳಲ್ಲಿ ಜಾಡಮಾಲಿ ಕೆಲಸವೂ ಒಂದು ಎಂಬುದು ನನ್ನ ಅಭಿಪ್ರಾಯ. ಯಾವುದೇ ಕಾರಣಕ್ಕೂ ಅದೊಂದು ಅಶುಚಿಯಾದ ಕೆಲಸ ಎಂದು ನಾನು ಭಾವಿಸುವುದಿಲ್ಲ. ನಿಜ, ನೀವು ಮಲದೊಂದಿಗೆ ಕೆಲಸ ಮಾಡಬೇಕು. ಪ್ರತಿ ತಾಯಿಯೂ ಅದನ್ನೇ ಮಾಡುತ್ತಾಳೆ. ಆದರೆ ಯಾರೂ ಆ ತಾಯಿಯ ಕೆಲಸವನ್ನು ಅಶುಚಿಯಾದ ಕೆಲಸ ಎಂದು ಕರೆಯುವುದಿಲ್ಲ."

ಸಫಾಯಿ ಕರ್ಮಚಾರಿಗಳ ಕಸುಬಿನಲ್ಲಿ ಸಮಸ್ಯೆ ಇಲ್ಲ, ಆದರೆ ಅವರ ಸಮುದಾಯದಲ್ಲೇ ಸಮಸ್ಯೆ ಇದೆ ಎಂದು ವಾದಿಸುವ ಗಾಂಧಿ "ಸಫಾಯಿ ಕರ್ಮಚಾರಿಗಳು ಕೊಳೆತ ಮಾಂಸ ಮತ್ತು ದನದ ಮಾಂಸ ತಿನ್ನುತ್ತಾರೆಂಬುದು ನನಗೆ ಗೊತ್ತು. ಇದನ್ನು ಮಾಡಕೂಡದು. ಅಷ್ಟೇ ಅಲ್ಲ, ಸಮುದಾಯದ ಬಹಳಷ್ಟು ಜನರು ಕುಡಿಯುತ್ತಾರೆಂಬುದೂ ಗೊತ್ತು. ಆದರೆ ಕುಡಿತ ಕೆಟ್ಟದ್ದು, ಹೊಲಸು, ಅಶುಚಿಯಾದದ್ದು, ಕೀಳು ಮಾಡುವ ಚಟ. ಮತ್ತು ತರಿಸುವ ಹೆಂಡವನ್ನು ಕುಡಿದ ಮನುಷ್ಯ ತನ್ನ ಹೆಂಡತಿ, ತಂಗಿ, ತಾಯಿಯ ನಡುವಿನ ವ್ಯತ್ಯಾಸವನ್ನೇ ಮರೆಯುತ್ತಾನೆ. ಆದ್ದರಿಂದ ನೀವು ಇಂತಹ ದುಷ್ಟ ಚಟಗಳನ್ನು ಬಿಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ."

ಅದೇ 'ಹರಿಜನ್' ಪತ್ರಿಕೆಯ **1936** ರ ಸಂಚಿಕೆಯೊಂದರಲ್ಲಿ 'ಆದರ್ಶ ಭಂಗಿ' **(The Ideal Bhangi)** ಎಂಬ ಶೀರ್ಷಿಕೆಯ ಮತ್ತೊಂದು ಲೇಖನವನ್ನು "ನನ್ನ ಕಲ್ಪನೆಯಲ್ಲಿ ಆದರ್ಶ ಭಂಗಿಯು ಬ್ರಾಹ್ಮಣನಿಗಿಂತಲೂ ಉತ್ತಮದವನಾಗಿರುತ್ತಾನೆ" ಎಂಬ ಸಾಲುಗಳೊಂದಿಗೆ ಪ್ರಾರಂಭಿಸುತ್ತಾರೆ. ಅನಂತರ ಅವರ ಆದರ್ಶ ಭಂಗಿ ಎಂತಹವನಾಗಿರಬೇಕೆಂದು ವಿವರಿಸುತ್ತಾರೆ: "ಸಮಾಜದ ಗೌರವಾನ್ವಿತ ಸೇವಕನಾದ ಭಂಗಿಯೊಬ್ಬ



ತನ್ನ ವ್ಯಕ್ತಿತ್ವದಲ್ಲಿ ಎಂತಹ ಗುಣಗಳನ್ನು ಮೈಗೂಡಿಸಿಕೊಂಡಿರಬೇಕು? ನನ್ನ ಪ್ರಕಾರ ಆದರ್ಶ ಭಂಗಿಯೊಬ್ಬ ನೈರ್ಮಲ್ಯ ನೀತಿಯನ್ನು ಕುರಿತ ಎಲ್ಲಾ ಜ್ಞಾನವನ್ನು ಹೊಂದಿರಬೇಕು. ಸರಿಯಾದ ಕಕ್ಕಸನ್ನು ಹೇಗೆ ಕಟ್ಟಬೇಕೆಂದೂ, ಅದನ್ನು ಸರಿಯಾಗಿ ಹೇಗೆ ಶುಚಿಗೊಳಿಸಬೇಕೆಂದೂ ಆತ ಕಲಿತಿರಬೇಕು. ಮಲದ ವಾಸನೆಯನ್ನು ಹೇಗೆ ಹೋಗಲಾಡಿಸಬೇಕೆಂದೂ ಆತನಿಗೆ ಗೊತ್ತಿರಬೇಕು. ಹಾಗೆಯೇ ಮಲ ಮತ್ತು ಉಚ್ಚೆಯನ್ನು ಹೇಗೆ ಗೊಬ್ಬರವಾಗಿ ಪರಿವರ್ತಿಸಬೇಕು ಎಂಬುದೂ ಆತನಿಗೆ ಗೊತ್ತಿರಬೇಕು.

ಅಷ್ಟೇ ಅಲ್ಲ ನನ್ನ ಆದರ್ಶ ಭಂಗಿಗೆ ಮಲ ಮತ್ತು ಉಚ್ಚೆಯನ್ನು ಅಧ್ಯಯನ ಮಾಡುವ ಕಲೆಯೂ ಗೊತ್ತಿರಬೇಕು. ಇವುಗಳ ಮೇಲೆ ನಿಗಾ ಇಟ್ಟು ಹೆಚ್ಚು ಕಡಿಮೆ ಕಂಡುಬಂದಲ್ಲಿ ಅದನ್ನು ವಿಸರ್ಜಿಸಿದ ವ್ಯಕ್ತಿಗೆ ಮುನ್ನೆಚ್ಚರಿಕೆ ನೀಡಬೇಕು. ಇದರರ್ಥ ಮಲ ಮತ್ತು ಉಚ್ಚೆಯ ಬಗ್ಗೆ ಆತನಿಗೆ ವೈಜ್ಞಾನಿಕ ಜ್ಞಾನ ಇರಬೇಕು. ಸಣ್ಣ ಗ್ರಾಮಗಳಿಂದ ಹಿಡಿದು ದೊಡ್ಡ ನಗರಗಳವರೆಗೆ ಹೇಗೆ ಮಲವನ್ನು ಸಾಗಿಸಬೇಕೆಂಬುದರ ಬಗ್ಗೆ ಆತನಿಗೆ ಚೆನ್ನಾಗಿ ಗೊತ್ತಿದ್ದು, ಈ ಕುರಿತಂತೆ ಆತ ತನ್ನ ಸಲಹೆ ಮತ್ತು ಮಾರ್ಗದರ್ಶನವನ್ನು ಸಮಾಜಕ್ಕೆ ಉಚಿತವಾಗಿ ನೀಡಬೇಕು. ಆತನ ವೃತ್ತಿಯನ್ನು ಚೊಕ್ಕವಾಗಿ ನಿಭಾಯಿಸಲು ಆತನಿಗೆ ಸೂಕ್ತ ತರಬೇತಿಯನ್ನೂ ನೀಡಬೇಕು. ಇಂತಹ ಓರ್ವ ಆದರ್ಶ ಭಂಗಿ ತನ್ನ ವೃತ್ತಿಯಿಂದ

(15ನೇ ಪುಟಕ್ಕೆ)

ಲಿಂಗಾಯತ ಮಠಾಧೀಶರು ಒಕ್ಕಲಿಗ ದ್ವೇಷಿಗಳಾ!

ದೇವೇಗೌಡ ಹಾಗೂ ಕುಮಾರಸ್ವಾಮಿ ವೀರಶೈವ ಮಠಾಧೀಶರಿಗೆ ಅವಮಾನ ಮಾಡಿದ್ದಾರೆಂಬ ಒಂದು ಪ್ರಚಾರ ವ್ಯವಸ್ಥಿತವಾಗಿ ನಡೆಯುತ್ತಿದೆ. ದೊಡ್ಡ ದೊಡ್ಡ ಸಾಧಕರು, ಯೋಗಿಗಳಿರಲಿ ಕಾಂಜೀಪಿಂಜಿ ಸ್ವಾಮಿಗಳನ್ನು ಹುಡುಕಿಕೊಂಡು ಹೋಗಿ ಕಾಲಿಗೆ ಬಿದ್ದು ಬರುವ ಬುದ್ಧಿ ಗೌಡರ ಕುಟುಂಬದ್ದು. ಕವಡೆ ಶಾಸ್ತ್ರ ಕೇಳಿ, ಪೂಜೆ, ಯಜ್ಞ, ವಾಸ್ತುಶಾಸ್ತ್ರವನ್ನೇ ನಂಬಿ ರಾಜಕೀಯ ಜೀವನ ನಡೆಸುತ್ತಿರುವ ದೇವೇಗೌಡ ಅಂಡ್ ಸನ್ಸ್ ಹೀಗೆ ಮಠಾಧೀಶರ ಬಗ್ಗೆ ಉಡಾಫೆ ಮಾಡಿದರು ಎಂಬುದು ನಂಬಲಾಗದ ಮಾತು ಬಿಡಿ. ಆದರೂ ತುಮಕೂರಿನ ಸಿದ್ಧಗಂಗಾ ಸ್ವಾಮಿಗಳ ಬಗ್ಗೆ ಕುಮಾರಸ್ವಾಮಿ ನಿಂದನೆಯ ಮಾತಾಡಿದ್ದಾರೆಂದು ಗಲಾಟೆ ನಡೆಯುತ್ತಿವೆ.

ಡಿಸೆಂಬರ್ 5 ರಂದು ತುಮಕೂರು ಬಂದ್ ಸಹ ನಡೆದಿದೆ. ಈ ಅಪಪ್ರಚಾರವು ಈಗ ಒಕ್ಕಲಿಗ ಸಮುದಾಯದ ವಿರುದ್ಧ ಮುಂದುವರೆದಿರುವುದನ್ನು ನೋಡಿ ರೇಗಿ ಬಿದ್ದಿರುವ ವಿಶ್ವ ಒಕ್ಕಲಿಗ ವೇದಿಕೆಯವರು ಡಿಸೆಂಬರ್ 15 ರಂದು ತಾವೂ ಒಂದು ಪ್ರತಿಭಟನೆ ನಡೆಸಿ ಲಿಂಗಾಯತ ನಾಯಕರಿಗೆ, ಮಠಾಧೀಶರಿಗೆ 'ಜಾತಿ ಸಂಘರ್ಷ ಆಗುತ್ತೆ ಹುಷಾರ್' ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಬಿಜೆಪಿಗಳ ರಾಜಕೀಯ ತಂತ್ರ ಏನೆಂಬುದು ಗೊತ್ತಾಗುತ್ತದೆ. ಅದು ಶುರುವಾಗಿದ್ದು ಹೀಗೆ: ನವೆಂಬರ್ 30 ನೇ ತಾರೀಖು ಬೆಂಗಳೂರಿನ ಜೆಡಿಎಸ್ ಪಾರ್ಟಿ ಆಫೀಸಿನಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಮಾತಾಡಿದ ಕುಮಾರಸ್ವಾಮಿ "ಮಠಾಧೀಶರುಗಳು ರಾಜಕೀಯದಲ್ಲಿ ತಲೆ ಹಾಕುವುದು ಸರಿಯಲ್ಲ" ಎಂದು ಹೇಳಿದ್ದರು.



ಈ ನಿಲುವಿನಲ್ಲಿ ತಪ್ಪೇನೂ ಇಲ್ಲ, ಬಿಡಿ. ಆದರೆ ರಾಜಕಾರಣಿಗಳು ಮಠಾಧೀಶರ ಹಿಂದೆ ಅಲೆಯುವುದೂ ಕೂಡ ಸರಿಯಲ್ಲ ಎಂಬುದು ಕುಮಾರಸ್ವಾಮಿಯಾದಿಯಾಗಿ ಎಲ್ಲಾ ರಾಜಕಾರಣಿಗಳಿಗೆ ಅರ್ಥವಾದರೆ ಒಳ್ಳೆಯದು. ಅದಿರಲಿ, ಅವತ್ತಿನ ಕುಮಾರಸ್ವಾಮಿ ಹೇಳಿಕೆಯನ್ನೇ ಬಿಜೆಪಿಗಳು ದೊಡ್ಡದು ಮಾಡಿಕೊಂಡು ಸಿದ್ಧಗಂಗಾ ಸ್ವಾಮಿಗಳಿಗೆ ಕುಮಾರಸ್ವಾಮಿ ಅವಮಾನ ಮಾಡಿದ್ದಾರೆಂದು ಹುಯಿಲೆಬ್ಬಿಸಿದ್ದಾರೆ.

ಅಕ್ಟೋಬರ್ ತಿಂಗಳುದ್ದಕ್ಕೂ, ನಡೆದ ಅಧಿಕಾರ ಹಸ್ತಾಂತರದ ಭಿನ್ನಾಭಿಪ್ರಾಯಗಳ ಗಲಾಟೆಯಲ್ಲಿ, "ಯಡ್ಡಿ ಮುಖ್ಯಮಂತ್ರಿಯಾಗಬೇಕು, ಕೋ-ಜಾ ಸರ್ಕಾರ ಮುಂದುವರೆಯಬೇಕು" ಎಂದು ಕೋಡಿಮಠದ ವಿಶ್ವೇಶತೀರ್ಥ ಹಾಗೂ



ಕುಮಾರಸ್ವಾಮಿ ಹೇಳಿಕೆಗೆ ಪ್ರತಿಭಟಿಸುತ್ತಿರುವ ಮಠದ ವಿದ್ಯಾರ್ಥಿಗಳು

ಸಿದ್ಧಗಂಗಾ ಸ್ವಾಮಿ ಹೇಳಿದ್ದರಂತೆ.

ಕುಮಾರಸ್ವಾಮಿ ಆ ಮಾತನ್ನು ಉಲ್ಲಂಘಿಸಿದರೆಂಬುದು ಒಂದು ಆರೋಪ. ಆಮೇಲೆ ಮಠಾಧೀಶರು ರಾಜಕೀಯದಲ್ಲಿ ತಲೆ ಹಾಕಬಾರದೆಂದು ಹೇಳಿ ಅವಮಾನಿಸಿದ್ದಾರೆಂಬುದು ಈಗಿನ ಹೊಸ ಆರೋಪ.

ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಈ ಮಾತುಗಳನ್ನು ಹೇಳುವಷ್ಟು ನೈತಿಕತೆ ಕುಮಾರಸ್ವಾಮಿಗಿಲ್ಲ ಎಂಬುದು ಒಂದು ಕಡೆ ಇರಲಿ. ಆದರೆ ಒಂದು ಸರ್ಕಾರ ಇರಬೇಕೊ-ಬೇಡವೋ ಎಂದು ತೀರ್ಮಾನಿಸಲು ಈ ಮಠಾಧೀಶರು ಯಾರು?

ಸಿದ್ಧಗಂಗಾ ಸ್ವಾಮಿಗಳು ಬಹಳ ದೊಡ್ಡ ತ್ಯಾಗಿ, ಸಮಾಜ ಸೇವಕರೇ ಆಗಿರಬಹುದು. ಈ ಪೇಜಾವರ ಮಾಧ್ವರಿಗೆ ದೊಡ್ಡ ಬ್ರಾಹ್ಮಣ ಮಠಾಧೀಶನಾಗಿರಲಿ ಬಿಡಿ. ಆದರೆ ನಮ್ಮ ಪ್ರಜಾಪ್ರಭುತ್ವದಲ್ಲಿ ಅವರ ಮಾತಿನ ಬೆಲೆ ಕೇವಲ ಒಂದು ಓಟು ಅಷ್ಟೆ.

ಒಂದು ಸರ್ಕಾರದ ಅಳಿವು-ಉಳಿವನ್ನು ಮತದಾರ ನಿರ್ಧರಿಸುತ್ತಾನೆ. ಅವನು ಆರಿಸಿರುವ ಶಾಸಕರು ತೀರ್ಮಾನಿಸುತ್ತಾರೆ. ಇಲ್ಲಿ ಮಠಾಧೀಶರಿಗೇನು ಕೆಲಸ? ಯಾವತ್ತಾದರೂ ಇವರು ನಮ್ಮ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬೆಲೆ ಕೊಟ್ಟು ನಡೆದುಕೊಂಡಿದ್ದಾರಾ?


ಯಡಿಯೂರಪ್ಪನಿಗೆ ಸಿಎಂಗಿರಿ ತಪ್ಪಿಹೋಗಿದ್ದರ ಬಗ್ಗೆ ಸಿದ್ಧಗಂಗಾ ಸ್ವಾಮಿಗಳು ಇದುವರೆಗೂ ಎಲ್ಲೂ ಬಹಿರಂಗ ಹೇಳಿಕೆ ನೀಡಿಲ್ಲ. ಆದರೂ ಬಿಜೆಪಿಗಳು ಧರ್ಮಯಾತ್ರೆಯನ್ನು ಸ್ವಾಮಿಗಳ ಕಾಲಬುಡದಿಂದ ಶುರು ಮಾಡಿದರು. ಈಗ ಕುಮಾರಸ್ವಾಮಿ ಸಿದ್ಧಗಂಗಾ ಸ್ವಾಮಿಗೆ ಅವಮಾನ ಮಾಡಿದ್ದಾರೆಂದು ಕೀಳು ಪ್ರಚಾರ ನಡೆಸುತ್ತಾ ಹೋಗುತ್ತಿದ್ದಾರೆ.



ಸ್ವಾಮಿಗಳಿಗೆ ಇದರ ರಾಜಕೀಯ ಪರಿಣಾಮ ಏನಾಗಬಹುದು ಗೊತ್ತಿದೆಯಾ? ಅಪ್ಪಟ ಬ್ರಾಹ್ಮಣಶಾಹಿ ಚೇಲಾ ಯಡಿಯೂರಪ್ಪ ಸಿದ್ಧಗಂಗಾ ಮಠದ ಮಗನಾ? ಈ ಯಡ್ಡಿಗೂ ಬಸವತತ್ವಕ್ಕೂ ಏನಾದರೂ ಸಂಬಂಧ ಇದೆಯಾ?

ಡಿಸೆಂಬರ್ 5 ರಂದು ನಡೆದ 'ತುಮಕೂರು ಬಂದ್'ನ ರ್‍ಯಾಲಿಯಲ್ಲಿ ಸಿದ್ಧಗಂಗಾ ಮಠದ ಶಾಲಾ ಕಾಲೇಜುಗಳ 5 ಸಾವಿರ ವಿದ್ಯಾರ್ಥಿಗಳು ಹೋಗಿ ಭಾಗವಹಿಸಿ ಬಂದಿದ್ದಾರೆ. ಎಲ್ಲಾ ಜಾತಿ ಧರ್ಮಗಳಿಗೆ ಸೇರಿರುವ ಅಮಾಯಕ ವಿದ್ಯಾರ್ಥಿಗಳನ್ನು ಬಿಜೆಪಿ ಪರವಾಗಿ ಹಾಗೂ ಜೆಡಿಎಸ್ ವಿರುದ್ಧವಾಗಿ ಬಳಸಿದ್ದು ಎಷ್ಟು ಸರಿ?

ಅಸಲಿಗೆ ಯಡಿಯೂರಪ್ಪ ಇಡೀ ಲಿಂಗಾಯತರ ಪ್ರತಿನಿಧಿ ಎಂದು ಯಾರು ಒಪ್ಪಿದ್ದಾರೆ? ಲಿಂಗಾಯತರಿಗೆ ಅನ್ಯಾಯವಾದಾಗ ಪ್ರತಿಭಟಿಸುವುದೇ ಆದರೆ ಇದೇ ಬಿಜೆಪಿಯೊಳಗಿದ್ದ ಹಿರಿಯ ನಾಯಕ ಬಿ.ಬಿ. ಶಿವಪ್ಪನವರನ್ನು ತುಳಿದು ಮೂಲೆಗುಂಪು ಮಾಡಿದಾಗ ಈ ಮಠಾಧೀಶರೇನು ಮಾಡುತ್ತಿದ್ದರು? ಇದು ಹಳೇ ಪ್ರಕರಣ ಬಿಡಿ. ತೀರಾ ಇತ್ತೀಚೆಗೆ ಎಂ.ಪಿ. ಪ್ರಕಾಶರನ್ನು ಗೌಡರು ಜೆಡಿಎಸ್ ಅಧ್ಯಕ್ಷಗಿರಿಯಿಂದ ಕಿತ್ತು ಹಾಕಿ ಮೆರಾಜುದ್ದೀನ್‌ರನ್ನು ತಂದು ಕೂರಿಸಿದಾಗ



ಯಾವ ಲಿಂಗಾಯತ ಮಠಾಧೀಶರೂ ಮಾತಾಡಿರಲಿಲ್ಲ, ಅಂದರೆ ಬಿಜೆಪಿಯ ಲಿಂಗಾಯತ ಯಡಿಯೂರಪ್ಪನಿಗೆ ಅನ್ಯಾಯವಾದರೆ ಮಾತ್ರ ಇವರ ಲಿಂಗಾಯತ ಜಾತಿ ಕೆರಳಿ ಬೀದಿಗಳಲ್ಲಿ ಪ್ರತಿಭಟನೆಯಾಗಿ ಬಿಡುತ್ತದೆ.

ಈಗ ನಡೆಯುತ್ತಿರುವ ವಿವಾದವು ಯಡಿಯೂರಪ್ಪ ಅಂದರೇನೇ ಇಡೀ ಲಿಂಗಾಯತರ ಪ್ರತಿನಿಧಿ ಎಂಬಂತೆ ಬಿಂಬಿಸಲಾಗುತ್ತಿದೆ. ಅದೇರೀತಿ ದೇವೇಗೌಡ-ಕುಮಾರಸ್ವಾಮಿಯೇ ಇಡೀ ರಾಜ್ಯದ ಒಕ್ಕಲಿಗ ಜಾತಿಯ ಪ್ರತಿನಿಧಿಗಳೆಂಬಂತೆ ವ್ಯಾಖ್ಯಾನಿಸಲಾಗುತ್ತಿದೆ.

ವಾಸ್ತವದಲ್ಲಿ ಇವೆರಡೂ ಸುಳ್ಳು.

ತುಮಕೂರು ಬಂದ್‌ಗೆ ಕರೆ ಕೊಟ್ಟಿದ್ದು ಅಲ್ಲಿನ ನಾಗರಿಕ ಸಮಿತಿ ಎಂದು ಮೇಲ್ನೋಟಕ್ಕೆ ಹೇಳಲಾಗಿತ್ತು. ಆದರೆ ತೆರೆಮರೆಯಲ್ಲಿದ್ದ ಜಿ.ಎಸ್. ಸೋಮಶೇಖರ್, ರಾಯಸಂದ್ರ ರವಿಕುಮಾರ್ ಆರ್‌ಎಸ್‌ಎಸ್ ಹಿನ್ನೆಲೆಯವರು. ಅಂದರೆ ಬಿಜೆಪಿಯೂ ಮುಂದಿನ ಎಲೆಕ್ಷನ್‌ನಲ್ಲಿ ತನ್ನ ರಾಜಕೀಯ ಸ್ವಾರ್ಥಕ್ಕಾಗಿ ಸಿದ್ಧಗಂಗಾ ಸ್ವಾಮಿಗಳನ್ನು ತನ್ನ ಪರವಿದ್ದಾರೆ ಎಂಬಂತೆ ಬಳಸಿಕೊಳ್ಳುತ್ತಿದೆ.

ಯಡ್ಡಿಗೆ ಸಿಎಂಗಿರಿ ತಪ್ಪಿದ್ದಕ್ಕೆ ಲಿಂಗಾಯತರಾಗಲಿ ಅಥವಾ ಸಿದ್ಧಗಂಗಾ ಸ್ವಾಮಿಗಳಾಗಲಿ ಸಿಟ್ಟಿಗೇಳುವ ಅಗತ್ಯ ಖಂಡಿತ ಇಲ್ಲ. ಸಿದ್ಧಗಂಗಾ ಸ್ವಾಮಿಗಳು ಬಿಜೆಪಿಗಳು ತಮ್ಮ ಹೆಸರನ್ನು ಇದೇ ರೀತಿ ದುರ್ಬಳಕೆ ಮಾಡಿಕೊಳ್ಳುವುದನ್ನು ತಡೆಯದೇ ಹೋದರೆ ನಾಳೆ ಇದೇ ವಿದ್ಯಮಾನ ಲಿಂಗಾಯತ-ಒಕ್ಕಲಿಗ ಸಂಘರ್ಷವಾಗಿ ವಿಕೃತ ರೂಪ ತಾಳಬಹುದು.

ಒಕ್ಕಲಿಗ ಸಂಘಟನೆಗಳು ಈಗಾಗಲೇ ವೀರಶೈವ ಸಂಘಟನೆಗಳ ವಿರುದ್ಧ ತೋಳೇರಿಸಿಕೊಂಡು ಜಗಳಕ್ಕೆ ರೆಡಿಯಾಗುತ್ತಿದ್ದಾರೆ.

ಎಲ್ಲಾ ಜಾತಿ ಜನರಿಂದ ದವಸ-ಧಾನ್ಯ ಹಣಕಾಸಿನ ನೆರವು ಪಡೆಯುತ್ತಾ ಅಕ್ಷರ ದಾಸೋಹ ನಡೆಸಿಕೊಂಡು ಬರುತ್ತಿರುವ ಲಿಂಗಾಯತ ಮಠಗಳು ರಾಜ್ಯದಲ್ಲಿ ಅನೇಕ ಇವೆ. ಜನರ ಗೌರವ ಪ್ರೀತಿಗಳನ್ನು ಗಳಿಸಿವೆ. ಹೀಗಿರುವಾಗ ಬಿಜೆಪಿಯಂಥ ಕ್ಯಾಪಿಟಲಿಸ್ಟರಿಗೆ ಚುನಾವಣೆಯಲ್ಲಿ ಪರೋಕ್ಷವಾಗಿ ನೆರವಾಗುವುದಕ್ಕೆ ಮಠಗಳನ್ನು ಬಳಸುವಂಥ ಜರೂರತ್ತು ಈ ಮಠಾಧೀಶರಿಗೇಕೆ ಬೇಕು?

ಸಿದ್ಧಗಂಗಾ ಸ್ವಾಮಿಗಳೂ ಯೋಚಿಸಲಿ.

-ಕ್ಷೇತ್ರ

ಪ್ರೇಮವೆಂದರೆ ಭಾವನೆಗಳ ಕಾವ್ಯ -ಹೊನೋರ್ ಡಿ ಬಲ್ಝಾಕ್

ಬಾಗಲಕೋಟೆಗೆ ಅಂಟಿಕೊಂಡಿರುವ ಶನಿ

ಬಾಗಲಕೋಟೆಗೆ ಅಂಟಿದ ಚಿನ್ನಿ ಚರಂತಿಮಠನೆಂಬ ಶನಿ ಈ ಚುನಾವಣೆಯಲ್ಲಾದರೂ ತೊಲಗುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ. ಅವನು ಶಾಸಕನಾಗಿ ಕ್ಷೇತ್ರದ ಜನತೆಗೆ ಮಾಡಿದ್ದೆಷ್ಟು ಹಾಗೂ ತನ್ನ ಜೇಬಿಗೆ ಇಳಿಸಿದ್ದೆಷ್ಟು ಎಂಬುದನ್ನು ಕ್ಷೇತ್ರದ ಜನ ಅರ್ಥ ಮಾಡಿಕೊಂಡರೆ ಪ್ರಾಯಶಃ ಈ ಶನಿಯನ್ನು ಬರುವ ಚುನಾವಣೆಯಲ್ಲಿ ಜನ ಹೊಡೆದಟ್ಟುವುದರಲ್ಲಿ ಯಾವುದೇ ಅನುಮಾನವಿಲ್ಲ.

ಪಿ.ಎಚ್. ಪೂಜಾರ್ ಅವರಿಗೆ ದಕ್ಕಬೇಕಿದ್ದ ಟಿಕೆಟ್‌ನ್ನು ಮಾಡಬಾರದ ಕುಟೋದ್ಯಗಳನ್ನು ಮಾಡಿ ತನ್ನ ಮಡಿಲಿಗೆ ಹಾಕಿಕೊಂಡ. ಅವನು ಜಂಗಮ ಲಿಂಗಾಯತ ಎಂಬ ಒಂದೇ ಕಾರಣಕ್ಕೆ ಬಿಜೆಪಿ ಅವನಿಗೆ ಟಿಕೆಟ್ ಕೊಡ ಕೊಟ್ಟುಬಿಟ್ಟಿತು. ಅಲ್ಲದೆ, ಇವನಿಗೆ ಪಾರ್ಟ್‌ಟೈಮ್ ರಾಜಕಾರಣಿ, ಪಾರ್ಟ್‌ಟೈಮ್ ಸ್ವಾಮಿ ಪೇಜಾವರರ ಅನುಗ್ರಹವೂ ಇತ್ತು. ಅಂದು ಪ್ರಾರಂಭವಾದ ಇವನ ತಂತ್ರ, ಗೆಬರಾಟ ಇಂದೂ ಮುಂದುವರೆದಿದೆ. ಅದು ಬಾಗಲಕೋಟೆ ಜನರ ದುರಾದೃಷ್ಟವೋ ಅಥವಾ ಅವನನ್ನು ಆರಿಸಿಕಳಿಸಿದ ತಪ್ಪಿಗೆ ಅನುಭವಿಸಬೇಕಾಗಿರುವ ಶಿಕ್ಷೆಯೋ ಗೊತ್ತಿಲ್ಲ.

ಶಾಸಕನಾಗಿ ಆಯ್ಕೆಯಾಗಿದ್ದೇ ತಡ ಚರಂತಿಮಠ ಬಾಗಲಕೋಟೆಯನ್ನು ಒಂದು ಕಡೆಯಿಂದ ಗೆಬರಲು ಶುರುಮಾಡಿಕೊಂಡುಬಿಟ್ಟ. ಆಗ ರಾಜ್ಯದಲ್ಲಿ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರವಿತ್ತು. ಈತ ನಡೆಯದ ಸವಕಲು ನಾಣ್ಯದಂತಾಗಿಬಿಟ್ಟಿದ್ದ. ಆದರೂ, ಲೈಮ್‌ಲೈಟಿಗೆ ಬರಬೇಕು ಅಂತ ಮುಳುಗಡೆ ಸಂತ್ರಸ್ತರ ಹೋರಾಟ ಎಂಬ ಹಾರಾಟವನ್ನು ಶುರುಮಾಡಿ ತನ್ನ ತಗಡು ಬುದ್ಧಿಯನ್ನು ಪ್ರಾರಂಭಿಸಿದ. ಪ್ರತಿದಿನ ಒಂದೊಂದು ಸರ್ಕಾರಿ ಕಚೇರಿಗೆ ಹೋಗೋದು, ಅಲ್ಲಿನ ಕುರ್ಚಿ, ಟೇಬಲ್ಲುಗಳನ್ನು ಧ್ವಂಸ ಮಾಡೋದು, ಅಧಿಕಾರಿಗಳನ್ನು ಬೆದರಿಸೋದು - ಹೀಗೆ ಒಂದಲ್ಲ ಒಂದು ಕಿತಾಪತಿ ಮಾಡ್ತಾನೇ ಇದ್ದ. ಇವನ ಮಂಗಾಟವನ್ನು ನೋಡಿ ನೋಡಿ ಸುಸ್ತಾದ ಪೊಲೀಸರು ಇವನನ್ನು ತನ್ನ ಪಟಾಲಂ ಸಮೇತವಾಗಿ ಒದ್ದು ಒಳಗೆ ಹಾಕಿದರು. ಕೊನೆಗೆ ಕೇಸ್ ಜಡಿಸಿಕೊಂಡು ಕಾರ್ಯಕರ್ತರ ಸಮೇತವಾಗಿ ಕೋರ್ಟಿಗೆ ಅಲೆಯಲಾರಂಭಿಸಿದ.

ಯಾವಾಗ ರಾಜ್ಯದಲ್ಲಿ ಕಾಂಗ್ರೆಸ್-ಜೆಡಿಎಸ್ ಸರ್ಕಾರ ಬಿದ್ದು, ಜೆಡಿಎಸ್-ಬಜೆಪಿ ಅನೈತಿಕ ಮೈತ್ರಿಯ ಸರ್ಕಾರ ಅಧಿಕಾರಕ್ಕೆ ಬಂತೋ ಚರಂಡಿಮಠನ ಅದೃಷ್ಟವೂ ಖುಲಾಯಿಸಿಬಿಟ್ಟಿತು. ಯಡ್ಡಿ ಇವನನ್ನು ಬಾಗಲಕೋಟೆ ಅಭಿವೃದ್ಧಿ ಪ್ರಾಧಿಕಾರದ ಚೇರಮನ್‌ನನ್ನಾಗಿ ನೇಮಿಸಿಬಿಟ್ಟ. ಅಲ್ಲಿಂದಲೇ ಶುರುವಾಯಿತು ಇವನ ನಖರಾಗಳ ಮತ್ತೊಂದು ಅಧ್ಯಾಯ.

ಈತ ಚೇರಮನ್ ಆಗಿ ಮಾಡಿದ ಮೊದಲ ಕೆಲಸವೆಂದರೆ, ನಿಷ್ಠಾವಂತ ಮತ್ತು ದಕ್ಷ ಅಧಿಕಾರಿ ಎಂದೇ ಹೆಸರು ಮಾಡಿರುವ ಜಾಮದಾರ್ ಎಂಬ ಐಎಎಸ್ ಅಧಿಕಾರಿಯನ್ನು ಪ್ರಾಧಿಕಾರದಿಂದ ಕಿತ್ತೆಸೆದದ್ದು. ಜಾಮದಾರ್‌ರವರನ್ನು ಓಡಿಸಲು ಅವನಿಗೆ ಒಂದು ಕಾರಣವಿತ್ತು. ತನ್ನದೇ ಆದ ಬಸವೇಶ್ವರ ವಿದ್ಯಾವರ್ಧಕ ಸಂಘದ ಮೂಲಕ ಸರ್ಕಾರದಿಂದ ಹಣ ಪೀಕಿಸುವ ತಂತ್ರಕ್ಕೆ ಜಾಮದಾರ್ ಸೊಪ್ಪು ಹಾಕಿರಲಿಲ್ಲ. "ಸಂಸ್ಥೆಯು ಮುಳುಗಡೆ ಪ್ರದೇಶದ ಅಂಚಿನಲ್ಲಿದೆ ಎಂದೂ, ಇದನ್ನು ಮಲೇರಿಯ ಸೆಂಟರ್‌ನಲ್ಲಿ ಸೇರಿಸಿ ಸಮಸ್ತ ಸಂಸ್ಥೆಯ ಸ್ಥಳಾಂತರ ಮಾಡಬೇಕೆಂದೂ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ನಂತರ ಬರುವ ದುಡ್ಡಿನಲ್ಲಿ ಕಮೀಷನ್ ತೆಗೆದು ಕೊಂಡು ನೀವೂ ಒಂದಿಷ್ಟು ಹಂಚಿ ಕೊಳ್ಳಿ" ಎಂದು ಈತ ಜಾಮದಾರ್‌ಗೆ ದುಂಬಾಲು ಬಿದ್ದಿದ್ದ. ಆದರೆ, ಇದಕ್ಕೆ ಜಾಮದಾರ್ ಬಿಲ್‌ಕುಲ್ ಒಪ್ಪಲಿಲ್ಲ. ಸರ್ಕಾರಕ್ಕೆ ನೂರಾರು ಕೋಟಿ ಮೊತ್ತದ ಹಣವನ್ನು ನಷ್ಟ ಮಾಡುವುದನ್ನು ಅವರು ಸಹಿಸಲಿಲ್ಲ.



ತನ್ನ ಮಾತಿಗೆ ಒಪ್ಪಲಿಲ್ಲ ಎಂದು ಸಿಟ್ಟಿಗೆದ್ದ ಚರಂತಿಮಠ ತನ್ನ ಜೇಬು ತುಂಬಿಸಿಕೊಳ್ಳುವುದಕ್ಕಾಗಿ ತನ್ನದೇ ಸಂಸ್ಥೆಯ ವಿದ್ಯಾರ್ಥಿಗಳನ್ನು, ಸಿಬ್ಬಂದಿಯನ್ನು ಬಲವಂತವಾಗಿ ಬೀದಿಯಲ್ಲಿ ಕೂರಿಸಿ ದೊಂಬಿ ಪ್ರಾರಂಭಿಸಿದ. ಇನ್ನು ಕೆಲವರು ಕೊಂಚ ಪರಿಹಾರ ಸಿಗಬಹುದೆಂದು ನಂಬಿ ಇವನ ಹಿಂದೆ ಬಂದರು. ಆಗ, ಈ ಅಧಿಕಾರಿ ಅಲ್ಲಿರುವ ತನಕ ತನ್ನ ಗೆಬರುವಿಕೆಗೆ ಆಸ್ಪದ ನೀಡುವುದಿಲ್ಲ ಎಂಬುದು ಚರುಂಡಿಗೆ ಅರ್ಥವಾಗಿ ಹೋಗಿತ್ತು. ಆದ್ದರಿಂದಲೇ ಅವರನ್ನು ಎತ್ತಂಗಡಿ ಮಾಡಿಬಿಟ್ಟ. ಇವನು ನಡೆಸುವ ದೊಂಬಿಗಳಿಗೆ ಬೆಂಬಲವಾಗಿ ನಿಂತವರು ಪ್ರಕಾಶ್, ತಪಶೆಟ್ಟಿ, ಕೊಠಾರಿಯ, ಕಾಸಟ, ಅಶೋಕ್ ನಿಂಬಾವಳಿ ಮುಂತಾದ ಎಡಗೈ-ಬಲಗೈ ಗಳು. ಈತನ ಚುನಾವಣೆಗೆ ದುಡ್ಡು ಸುರಿಯುವ ವೀರರು ಕೂಡ ಇವರೆ. ಏಕೆಂದರೆ, ರೆಡ್ಡಿಗಳ ಸದ್ದು ಅಡಗಿದರೆ ಇವರೂ ತಮ್ಮ ಬೇಳೆ ಬೇಯಿಸಿಕೊಳ್ಳಬಹುದೆಂಬ ತರ್ಕ ಇವರದು. ರೆಡ್ಡಿಗಳಂತಹ ಕಳ್ಳರನ್ನು ನಂಬಿದರೂ ಚರಂಡಿಯಂತಹ ಕುಳ್ಳನನ್ನು ನಂಬಬಾರದು ಎಂಬುದು ಇವರಿಗೆಲ್ಲಿ ಅರ್ಥವಾಗಬೇಕು?

ಈತ ಬಾಗಲಕೋಟೆ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗುವ ಮೊದಲು ಪ್ರಾಧಿಕಾರದ ಅವ್ಯವಹಾರಗಳ ಬಗ್ಗೆ ಗಂಟಲು ಹರಿಯುವ ಹಾಗೆ ಒದರುತ್ತಿದ್ದ. ಆದರೆ, ತಾನೇ ಪ್ರಾಧಿಕಾರದ ಅಧ್ಯಕ್ಷಗಾದಿಗೆ ಏರಿದ ಮೇಲೆ. ಅದಕ್ಕಿಂತಲೂ ಭೀಕರ ಅವ್ಯವಹಾರಗಳನ್ನು ಎಸಗಿದ. ಬಾಗಲಕೋಟೆಯ ರಸ್ತೆಗಳನ್ನೊಮ್ಮೆ ನೋಡಿದರೆ ಎಲ್ಲಾ ಚಪ್ಪಲಿ ಮತ್ತು ಟೈರ್ ಕಂಪೆನಿಗಳು ತಮ್ಮ ವಸ್ತುಗಳ ಬಾಳಿಕೆಯ ಬಗ್ಗೆ ಗ್ಯಾರಂಟಿ ಕೊಡುವಾಗ 'ಬಾಗಲಕೋಟೆ ರಸ್ತೆಗಳನ್ನು ಹೊರತುಪಡಿಸಿ' ಎಂದು ಖಂಡಿತಾ ಸೇರಿಸುತ್ತಾರೆ.

ಆಸ್ತಿ ಮಾಡಿದ್ದೇ ಜಾಸ್ತಿ


ಚರಂತಿಮಠ ಶಾಸಕನಾಗಿದ್ದೇ ತಡ ಅವನ ತಮ್ಮ ಮಲ್ಲಿಕಾರ್ಜುನ ಗ್ರಾನೈಟ್ ಉದ್ಯಮಕ್ಕೆ ಗಂಟುಬಿದ್ದು ಕ್ವಾರಿಗಳ ಅಕ್ರಮ ಲೂಟಿ ಗಿಳಿದುಬಿಟ್ಟ. ವಿರೋಧಿಸಿದ ಅಧಿಕಾರಿಗಳನ್ನು ಬಾಯಿಗೆ ಬಂದಂತೆ ದಬಾಯಿಸುವುದನ್ನೂ ತನ್ನ ದಂಧೆಯ ಭಾಗ ಎಂದೇ ತಿಳಿದಿದ್ದ. ಇದನ್ನು ನೋಡಿದ ಬಾಗಲಕೋಟೆಯ ಜನ 'ಮಲ್ಲ ಕಂಡವರ ಜೇಬಿಗೆ ಕೈಯಿಟ್ಟನಲ್ಲ' ಎಂದು ಹಾದಿಬೀದಿಯಲ್ಲಿ ಆಡಿಕೊಂಡು ನಗುತ್ತಿದ್ದರು. ಇದು ಚರಂಡಿಯ ಕಿವಿಗೂ ಬಿದ್ದು ಪಬ್ಲಿಕ್ ಮೀಟಿಂಗ್‌ಗಳಲ್ಲಿ ಭಾಷಣ ಮಾಡೋದು ಬಿಟ್ಟು ತನ್ನ ತಮ್ಮನಿಗೆ ಬಯ್ಯೋರಿಗೆ ತಿರುಗಿ ಬಯ್ಯೋದನ್ನೇ ಚಾಳಿ ಮಾಡಿಕೊಂಡಿದ್ದ. ಕೊನೆಗೆ ಕೈ ಕೈ ಮಿಲಾಯಿಸೋದನ್ನೂ ಕಲಿತುಕೊಂಡ. ಜೆಡಿಎಸ್‌ನವರು ಬೀದಿಗಿಳಿದು ಇವನ ಭೂತದಹನ ಮಾಡಲಾರಂಭಿಸಿದ್ದು ಸಮ್ಮಿಶ್ರ ಸರ್ಕಾರದ ಭಿನ್ನಮತದ ಬೀಜವನ್ನು ಬಿತ್ತಿದ್ದು ಆವಾಗಲೆ.

ಒಂದು ಕಾಲದಲ್ಲಿ ಡಕೋಟ ಎಂ80 ಗಾಡಿಯ ಮೇಲೆ ತಿರುಗುತ್ತಿದ್ದ ಚರಂಡಿಮಠ ಇಂದು ಕೋಟ್ಯಾಧಿಪತಿ. ಚುನಾವಣೆಗೆ ಎಷ್ಟು ಕೋಟಿ ಬೇಕಾದರೂ ಸುರಿಯಲು ಸಿದ್ಧವಿರುವ ಕುಳ. ಇನ್ನೊಂದೆಡೆ ಬಾಗಲಕೋಟೆಯ ಸ್ಥಿತಿಯನ್ನು ನೋಡಿ, ದಿನಕಳೆದಂತೆ ಬಡಕಲಾಗುತ್ತಾ ಹೋಗುತ್ತಿದೆ. ಮುಂದಿನ ಚುನಾವಣೆಯಲ್ಲಿ ಇವನಿಗೇ ಟಿಕೆಟ್ ಕೊಡುವಂತೆ ಬಜೆಪಿ ಮೇಲೆ ಒತ್ತಡ ತಂದು ಕೊನೆಗೆ ಇವನ ಜೇಬಿಗೇ ಕೈಯಿಡುವ ತಂತ್ರವನ್ನು ಸಂಘಪರಿವಾರ ಅನುಸರಿಸಲು ಹೊರಟಿದೆ.

ಈತನಿಂದ ಧೋಕ ತಿಂದ ಮಾಜಿ ಶಾಸಕ ಪಿ.ಎಚ್. ಪೂಜಾರ್ ಕೊನೆಗೆ ಜೆಡಿಎಸ್ ಸೇರಿಕೊಂಡ. ಆದರೂ ಆರ್‌ಎಸ್‌ಎಸ್ ಲಾರಿ ತಿರುಗಿಸುವ ಚಟ ಬಿಟ್ಟಿಲ್ಲ. ಈತನಿಗಿನ್ನೂ ಅಡ್ವಾನಿ, ಮೋದಿಗಳೇ ಆದರ್ಶ ಪುರುಷರು. ವಾಸ್ತವದಲ್ಲಿ ಈತ ಜೆಡಿಎಸ್‌ನಲ್ಲಿದ್ದರೂ ಈತನ ವರ್ತನೆಗಳೆಲ್ಲವೂ ಬಜೆಪಿಯನ್ನು ಬಲಪಡಿಸುವಂತಿವೆ. ಚರಂತಿಮಠ ಯಡ್ಡಿ ಶಿಷ್ಯನಾಗಿದ್ದರಿಂದ ಈತನನ್ನು ಮತ್ತೆ ಬಜೆಪಿಗೆ ತಂದು ಚರಂತಿಯ ವಿರುದ್ಧ ಕೌಂಟರ್‌ವೇಟ್ ಆಗಿ ಬಳಸಲು ಅನಂತೂ ಯೋಚಿಸುತ್ತಿದ್ದಾನೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಜಿಲ್ಲೆಯಲ್ಲಿ ಜೆಡಿಎಸ್ ಶವಪೆಟ್ಟಿಗೆ ತಯಾರಿಸಲು ಈತ ಒಂದೊಂದೇ ಮೊಳೆ ಹೊಡೆಯುತ್ತಿದ್ದಾನಷ್ಟೆ. ಚರಂತಿಮಠನನ್ನು ಚಟ್ಟಕ್ಕೇರಿಸಬೇಕೆಂದರೆ ಜೆಡಿಎಸ್‌ಗೆ ಒಬ್ಬ ಸಮರ್ಥ ಲಿಂಗಾಯತ ಯುವ ಅಭ್ಯರ್ಥಿಯ ಅವಶ್ಯಕತೆಯಿದೆ. ಅದಕ್ಕೆ ಲಿಂಗಾಯತ ಗಾಣಿಗ ಸಮುದಾಯದ ಅಶೋಕ ಲಾಗಲೋಟಿ ಒಬ್ಬ ಯೋಗ್ಯ ವ್ಯಕ್ತಿ. ಇವರಿಗೆ ಬರುವ ಚುನಾವಣೆಯಲ್ಲಿ ಟಿಕೆಟ್ ಕೊಟ್ಟರೆ ಜೆಡಿಎಸ್‌ಗೆ ಒಂದಿಷ್ಟು ಜೀವವಾದರೂ ಬರಬಹುದು.

ಇನ್ನು ಕಾಂಗ್ರೆಸ್ ಅಂತೂ ಸಪ್ಪೆಯಾಗಿ ಕುಳಿತಿದೆ. 1988ರ ನಂತರ ಬಾಗಲಕೋಟೆಯಲ್ಲಿ ಕಾಂಗ್ರೆಸ್ ಗೆದ್ದೇ ಇಲ್ಲ. ಅಷ್ಟರಮಟ್ಟಿಗೆ ಆರ್‌ಎಸ್‌ಎಸ್ ಇಲ್ಲಿ ಕೆಲಸ ಮಾಡಿದೆ. ಮುಂದಿನ ಚುನಾವಣೆಯಲ್ಲಿ ಅಜಯ್ ಕುಮಾರ್ ಸರನಾಯಕನೇ ಕಾಂಗ್ರೆಸ್ ಅಭ್ಯರ್ಥಿ ಎಂದು ಈಗಾಗಲೇ ಗುಲ್ಲೆದ್ದಿದೆ. ಈತ ಈ ಹಿಂದೆ ರಾಮಕೃಷ್ಣ ಹೆಗಡೆ ಮಂತ್ರಿಮಂಡಲದಲ್ಲಿ ಕ್ರೀಡಾ ಸಚಿವರಾಗಿ ಕಾರ್ಯನಿರ್ವಹಿಸಿದವನು. ಅಂತೆಯೇ, ಕಾಂಗ್ರೆಸ್ ಅಭ್ಯರ್ಥಿಯಾಗಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟವನು. ಈತ ಅಭ್ಯರ್ಥಿಯಾದರೆ ನಿಜಕ್ಕೂ ಬಜೆಪಿಗೆ ಒಂದಿಷ್ಟು ಏಟು ಕೊಡಬಲ್ಲ. ಜನಕ್ಕೆ ಈತನ ಬಗ್ಗೆ ಇರುವ ಅನುಕಂಪವೂ ಚುನಾವಣೆಯಲ್ಲಿ ಕೆಲಸ ಮಾಡಲಿದೆ. ಕಾಂಗ್ರೆಸ್-ಜೆಡಿಎಸ್‌ಗಳು ಇದನ್ನು ಪರಿಗಣಿಸಿ ಸೂಕ್ತ ವ್ಯಕ್ತಿಗಳನ್ನು ಕಣಕ್ಕಿಳಿಸುತ್ತಾರೋ ಅಥವಾ ಡಮ್ಮಿ ಕ್ಯಾಂಡಿಡೇಟ್‌ಗಳನ್ನೇ ನಂಬಿ ಮತ್ತೆ ಚರಂತಿಮಠನಿಗೆ ಅನುಕೂಲ ಮಾಡುತ್ತಾರೋ ನೋಡಬೇಕು.

– ಮೇಘರಾಜ್



ನಿಮ್ಮ ಶಾಸಕರು ಕಡಿದಿದ್ದೇನು?

ನಿಮ್ಮ ಶಾಸಕರು ಕಳೆದ ಚುನಾವಣೆಯಿಂದೀಚೆಗೆ ಏನೇನು ಘನಂದಾರಿ ಕೆಲಸಗಳನ್ನು ಮಾಡಿದ್ದಾರೆ ಎಂಬುದನ್ನು ನಿಮ್ಮ ಮುಂದೆ ಬಿಚ್ಚಿಡುವುದಕ್ಕಾಗಿ ಈ ವಾರದಿಂದ "ನಿಮ್ಮ ಶಾಸಕರು ಕಡಿದಿದ್ದೇನು?" ಎಂಬ ಹೊಸ ಅಂಕಣವನ್ನು ಪ್ರಾರಂಭಿಸುತ್ತಿದ್ದೇವೆ. ಶಾಸಕರು ತಮ್ಮ ಕ್ಷೇತ್ರದ ಜನರ ಒಳಿತಿಗೆ ಹಾಗೂ ರಾಜ್ಯದ ಒಳಿತಿಗೆ ಏನೇನು ಮಾಡಿದ್ದಾರೆ, ತಮ್ಮ ಕ್ಷೇತ್ರದ ಜನರ ಜ್ವಲಂತ ಸಮಸ್ಯೆಗಳಿಗೆ ಹೇಗೆ ಸ್ಪಂದಿಸಿದ್ದಾರೆ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಚುನಾವಣೆಯಲ್ಲಿ ಗೆದ್ದನಂತರ ಎಲ್ಲೆಲ್ಲಿ ಮೋಸ, ವಂಚನೆ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಮಾಡಿ ಸಾರ್ವಜನಿಕ ಹಣವನ್ನು, ಸಂಪತ್ತನ್ನು ಹೇಗೆ ಕೊಳ್ಳೆಹೊಡೆದು ಕೊಬ್ಬಿದ್ದಾರೆ ಎಂಬುದನ್ನು ನಿಮ್ಮೆಲ್ಲರೆದುರು ಬಿಚ್ಚಿಡುತ್ತೇವೆ. ಪ್ರತಿವಾರ ಒಬ್ಬರಾದ ಮೇಲೊಬ್ಬರಂತೆ ಕರ್ನಾಟಕದ ಎಲ್ಲ ಶಾಸಕರ ಬಗ್ಗೆ ಇಲ್ಲಿ ಬರೆಯುತ್ತೇವೆ. ಇದರಿಂದ ಅವರನ್ನು ಅರ್ಥ ಮಾಡಿಕೊಳ್ಳಲು ನಿಮಗೂ ಸುಲಭವಾಗುತ್ತದೆ; ಅಂತೆಯೆ ಅವರಿಗೆ ಈ ಚುನಾವಣೆಯಲ್ಲಿ ಓಟು ಹಾಕಬೇಕೆ ಬೇಡವೆ ಎಂಬುದನ್ನು ನಿರ್ಧರಿಸಲೂ ಅನುಕೂಲವಾಗುತ್ತದೆ. ಓದಿ ತಪ್ಪದೇ ನಿಮ್ಮ ಪ್ರತಿಕ್ರಿಯೆಗಳನ್ನು ತಿಳಿಸಿ.

ಭಾಲ್ಕಿಗೆ ಹತ್ತಿಕೊಂಡಿರುವ ಖಂಡ್ರೆ ಸಿಂಡ್ರೋಮ್

ಎರಡು ಬಾರಿ ಭಾಲ್ಕಿ ಮತಕ್ಷೇತ್ರವನ್ನು ಪ್ರತಿನಿಧಿಸಿರುವ ಪ್ರಕಾಶ್ ಖಂಡ್ರೆ ಗೆದ್ದಿದ್ದು ಬಜೆಪಿ ಪಕ್ಷದ ವರ್ಚಸ್ಸಿನಿಂದಲ್ಲ ಎಂಬುದು ಸುಸ್ಪಷ್ಟ. ಹಾಗೆ ನೋಡಿದರೆ ಸ್ವಾತಂತ್ರ್ಯದ ತರುವಾಯ ತಮ್ಮ ಬೇರುಗಳನ್ನು ಆಳಕ್ಕೆ ಇಳಿಸಿಕೊಂಡು ಭೀಮಣ್ಣ ಖಂಡ್ರೆ ಮತ್ತವರ ಮಕ್ಕಳಾದ ಡಾ. ವಿಜಯಕುಮಾರ ಖಂಡ್ರೆ ಹಾಗೂ ಈಶ್ವರ ಖಂಡ್ರೆ ಮಾಡದ ಬಾರಾ ಭಾನಗಡಿಗಳೇ ಇಲ್ಲವೆಂದರೂ ತಪ್ಪಾಗುವುದಿಲ್ಲ. ಇಲ್ಲಿನ ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮಿಗಳಾಗಿದ್ದ ಪೂಜ್ಯಶ್ರೀ ಚೆನ್ನಬಸವ ಪಟ್ಟದೇವರ ಪಟ್ಟದ ಶಿಷ್ಯ ಎಂಬ ಹೆಸರನ್ನು ಇಟ್ಟುಕೊಂಡು ರಾಜಕೀಯ ಅಖಾಡಕ್ಕೆ ಇಳಿದ ಭೀಮಣ್ಣ ಖಂಡ್ರೆ ರಾಜಕೀಯವಾಗಿ ಒಂದೊಂದೇ ಮೆಟ್ಟಿಲನ್ನು ಏರುತ್ತ ನಡೆದರು.

ಆದರೆ ಖಂಡ್ರೆ ತಮ್ಮ ಅಧಿಕಾರದ ಅವಧಿಯುದ್ದಕ್ಕೂ ಮಾಡಿದ ಲೂಟಿಗೆ ಕೊನೆಯೇ ಇಲ್ಲ. ಸರಕಾರವನ್ನು ಲೂಟಿ ಮಾಡಿದ್ದು ಸಾಲದೆಂಬಂತೆ ಸ್ಥಳೀಯ ಹಿರೇಮಠದ ಸಂಸ್ಥಾನ ಸಂಸ್ಥಾಪಿಸಿದ್ದ ರೂರಲ್ ಇಂಜಿನಿಯರಿಂಗ್ ಕಾಲೇಜ್, ಹರಳಯ್ಯ ಪಾಲಿಟೆಕ್ನಿಕಲ್ ಕಾಲೇಜು, ಅಕ್ಕಮಹಾದೇವಿ ಮಹಿಳಾ ಕಾಲೇಜು ಮುಂತಾದವನ್ನು ಖಂಡ್ರೆ ತಮ್ಮ ಕಾಲದ ಬುಡಕ್ಕೆ ಹಾಕಿಕೊಂಡು ಕುಳಿತದ್ದು ಕಂಡು ಜನರೇ ದಂಗಾದರು.

ಭೀಮಣ್ಣ ಖಂಡ್ರೆಯ ಮಗ ಡಾ. ವಿಜಯಕುಮಾರ ಖಂಡ್ರೆ ಶಾಸಕನಾಗಿದ್ದ ಅವಧಿಯಲ್ಲಿ ಭಾಲ್ಕಿಯ ಬಸ್ ಡಿಪೋ ಕಾಮಗಾರಿಯನ್ನು ಪಡೆದಿದ್ದ ಕಾಂಟ್ರಾಕ್ಟರ್ ಪ್ರಕಾಶ್ ಖಂಡ್ರೆಯಿಂದ ಪರ್ಸಂಟೇಜ್ ನಿರೀಕ್ಷೆ ಮಾಡಿದ್ದ. ಆದರೆ ಪ್ರಕಾಶ ಈ ವಿಷಯದಲ್ಲಿ ಚೌಕಾಸಿ ಮಾಡಲಾರಂಭಿಸಿದರು. ಕೊನೆಗೆ ಡಾ. ವಿಜಯಕುಮಾರನ ಕಿರುಕುಳ ತಾಳದೆ ಕ್ಲಾಸ್ ಒನ್ ಕಂಟ್ರ್ಯಾಕ್ಟರನಾಗಿದ್ದ ಪ್ರಕಾಶ್ ಖಂಡ್ರೆ ಊರನ್ನೇ ತೊರೆದು ದೂರದ ಹುನಗುಂದದ ಹೈವೆ ರೋಡ್ ಕಾಮಗಾರಿ ಮಾಡಲು ವಲಸೆ ಹೋದ. ಅಲ್ಲೂ ಡಾ. ವಿಜಯಕುಮಾರ ಖಂಡ್ರೆ ತನ್ನ ವರ್ಚಸ್ಸನ್ನು ಬಳಸಿ ಪ್ರಕಾಶ ಮಾಡಿದ್ದ ಕೆಲಸಕ್ಕೆ ಬಿಲ್ ಆಗದಂತೆ ತಡೆಹಿಡಿದ. ಇದೆಲ್ಲದರಿಂದ ರೋಸಿ ಹೋದ ಪ್ರಕಾಶ ಭೀಮಣ್ಣ ಖಂಡ್ರೆಯ ಮಕ್ಕಳ ವಿರುದ್ಧ ಸೆಡ್ಡು ಹೊಡೆದು ನಿಂತ.



ಪ್ರಕಾಶ್ ಖಂಡ್ರೆ

ಕಾಕತಾಳೀಯವೆನ್ನುವಂತೆ ಡಾ. ವಿಜಯಕುಮಾರ ಖಂಡ್ರೆಯೂ ಗುಲ್ಬರ್ಗಾದ ನರ್ಸ ಒಬ್ಬಳೊಂದಿಗೆ ಗುದುಮುರುಗಿ ಶುರು ಹಚ್ಚಿಕೊಂಡಿದ್ದ. ಎಲ್ಲವನ್ನು ಮಾಡಿ ಏನೂ ಮಾಡಿಲ್ಲದ ಮಳ್ಳನಂತೆ ಡಾ. ಖಂಡ್ರೆ ವರ್ತಿಸತೊಡಗಿದಾಗ ಜನ ಗಲ್ಲಿಗಲ್ಲಿಗಳಲ್ಲಿ ನಿಂತು ಈ ಬಗ್ಗೆ ಮಾತಾಡಿಕೊಂಡಿದ್ದರು. ಕೆಎಸ್‌ಆರ್‌ಟಿಸಿ ಮಿನಿಸ್ಟರ್ ಆಗಿದ್ದಾಗ ಭೀಮಣ್ಣ ಖಂಡ್ರೆ ಖೋಟಾ ಟಿಕೆಟ್ ಪ್ರಕರಣದಲ್ಲಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದ. ಕೋಟ್ಯಂತರ ರೂಪಾಯಿ ವಂಚನೆಯ ಈ ಪ್ರಕರಣ ಇಡೀ ಕರ್ನಾಟಕದ ಜನತೆಯನ್ನೇ ದಂಗುಬಡಿಸಿತ್ತು. ಖಂಡ್ರೆಯ ಖೋಟಾ ಮುಖ ಕಳಚುತ್ತಿರುವಾಗಲೇ ಮಗ ಡಾ. ವಿಜಯಕುಮಾರನ ಅಸಲಿ ವ್ಯಕ್ತಿತ್ವವೂ ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು.

ಇಂತಹ ಸುಸಂದರ್ಭಕ್ಕಾಗಿ ಕಾದು ನಿಂತಿದ್ದ ಎಂಬಂತೆ ಕಂಟ್ರ್ಯಾಕ್ಟರ್ ಪ್ರಕಾಶ್ ಖಂಡ್ರೆ ಒಮ್ಮಿಂದೊಮ್ಮೆ ಬಜೆಪಿ ಪಕ್ಷದಿಂದ ಸ್ಪರ್ಧಿಸಿದ. ಭೀಮಣ್ಣ ಖಂಡ್ರೆ ಯಾವತ್ತೂ ಕಡೆಗಣಿಸುತ್ತಲೇ ಬಂದಿದ್ದ ಮರಾಠ ಹಾಗೂ ಬ್ರಾಹ್ಮಣರ ಓಟುಗಳನ್ನು ನೆಚ್ಚಿಕೊಂಡು ಹಿರೇಮಠಕ್ಕೆ ಭೀಮಣ್ಣ ಖಂಡ್ರೆ ಮಾಡಿದ ಧೋಖಾವನ್ನು ಜನರಿಗೆ ತಿಳಿಸುತ್ತ ಅನಾಯಾಸವಾಗಿ ಪ್ರಕಾಶ ಗೆದ್ದು ಬಂದ.

ಬಜೆಪಿಯಿಂದ ಪ್ರಕಾಶ ಖಂಡ್ರೆ ಗೆದ್ದು ಬಂದಿದ್ದರೂ ಕಾಂಗ್ರೆಸ್‌ನ ಧರ್ಮಸಿಂಗ್-ಖರ್ಗೆ ಎಂಬ ಕರಟಕ ದಮನಕಗಳ ಜೊತೆಗೆ ಕೈ ಜೋಡಿಸಿದ್ದ ಪ್ರಕಾಶ ಖಂಡ್ರೆಗೆ ಅವರ ಕೃಪಾಶೀರ್ವಾದ ಇದ್ದೇ ಇತ್ತು. ಇದನ್ನು ಸಮರ್ಥವಾಗಿ ಬಳಸಿಕೊಂಡ ಪ್ರಕಾಶ ಎರಡು ಅವಧಿಗೂ ಗೆದ್ದು ಬಂದಿದ್ದಾರೆ. ಶಾಸಕನಾಗುವುದಕ್ಕಿಂತ ಪೂರ್ವದಲ್ಲಿ ಪ್ರಕಾಶ ಹಲವಾರು ಸಾವಿರ ರೂಪಾಯಿಗಳಲ್ಲಿ ಅವನ ಗಳಿಕೆಯನ್ನು ಅಳೆಯಲಾಗುತ್ತಿತ್ತು. ಈಗ ಇವನ ಗಳಿಕೆ ಕೋಟಿಗಳಲ್ಲಿ ಮಾತ್ರ ದಕ್ಕುತ್ತದೆ. ಮೇಲುನೋಟಕ್ಕೆ ತೀರಾ ಸಭ್ಯನಂತೆ ಕಾಣುತ್ತಾನಾದರೂ ಒಳ ಒಳಗೆ ಗೂಂಡಾ ಗುಣಗಳನ್ನು ಮೈಗೂಡಿಸಿಕೊಂಡಿದ್ದಾನೆ. ಇದನ್ನು ಕಂಡು "ಈತನ ಬ್ಯಾಂಕ್ ಬ್ಯಾಲೆನ್ಸ್ ನೋಡಬೇಕಾದರೆ ಸ್ವಿಸ್ ಬ್ಯಾಂಕಿಗೆ ಹೋಗಬೇಕು" ಎಂದು ಇಲ್ಲಿನ ಜನ ಅಂದಾಡಿಕೊಳ್ಳುವಂತಾಗಿದೆ.

ಭಾಲ್ಕಿಯಲ್ಲಿ ಕೋಮುವೈಷಮ್ಯದ ಜ್ವಾಲೆಗಳಂತೂ ದಟ್ಟವಾಗಿವೆ. ಇದು ಯಾವಾಗ ಆಸ್ಫೋಟಗೊಳ್ಳುತ್ತದೋ ಹೇಳುವುದು ಕಷ್ಟ. ಇಂಥ ಸಂದರ್ಭದಲ್ಲಿ ಜನತೆ ಮತ್ತೆ ಬಯಸುವುದು ಶಾಂತಿ ಸೌಹಾರ್ದತೆಯನ್ನು ಸಾರುವ ಪಕ್ಷಗಳು ಹಾಗೂ ವ್ಯಕ್ತಿಗಳು. ಭೀಮಣ್ಣ ಖಂಡ್ರೆಯ ಮಕ್ಕಳು ತಾವು ಹಿರೇಮಠಕ್ಕೆ ಬಗೆದ ದ್ರೋಹವನ್ನು ಬಹಿರಂಗವಾಗಿ ಒಪ್ಪಿಕೊಂಡು, ಸರಳತೆ-ಸೌಜನ್ಯ ನಡೆಗಳನ್ನು ರೂಢಿಸಿಕೊಂಡದ್ದೇ ಆದರೆ ಭಾಲ್ಕಿ ಮತ್ತೊಂದು ಸಲ ಅವರ ಕೈಗೆ ಸಿಗೋದು ಗ್ಯಾರಂಟಿ. ಇಲ್ಲದೆಹೋದರೆ ಪ್ರಕಾಶ ಖಂಡ್ರೆಯ ಕೈಗೆ ಭಾಲ್ಕಿಯನ್ನು ಹಾಕಿ ಕೋಮುದಳ್ಳುರಿಯಿಂದ ಉರಿಯುವ ಕ್ಷೇತ್ರವನ್ನು ನೋಡಬೇಕಾಗಬಹುದಷ್ಟೆ.

-ವರದಿಗಾರ

ಪ್ರೇಮವೆಂದರೆ ಇಬ್ಬರು ಆಡುವ, ಕೊನೆಗೆ ಇಬ್ಬರೂ ಗೆಲ್ಲುವ ಕ್ರೀಡೆ -ಎವಾ ಗಾಬರ್

ಬಿಜೆಪಿಗೆ ಪುಂಡರ ವಲಸೆ

ಅಶೋಕ್ ಕುಮ್ಮಕ್ಕು



ಲಿಂಗಾಯತವಾದಿ ದುರಂತ ನಾಯಕ ಬಿ.ಎಸ್. ಯಡಿಯೂರಪ್ಪ ಕರ್ನಾಟಕದ ಮುಂದಿನ ಮುಖ್ಯಮಂತ್ರಿ ತಾವೇ ಎಂದು ತೀರ್ಮಾನಿಸಿ ಕೊಂಡು ಬಿಟ್ಟಿದ್ದಾರಲ್ಲವೆ. ಅದೇ ರೀತಿ ಮುಂದಿನ ಎಲೆಕ್ಷನ್‌ನಲ್ಲಿ ಬಿಜೆಪಿಗೆ ಮೆಜಾರಿಟಿ ಸಿಗಬಹುದೆಂದು ಬೆಂಗಳೂರಿನ ಕೆಲ ಹಿರಿ-ಕಿರಿ-ಮರಿ ನಾಯಕರು ಲೆಕ್ಕ ಹಾಕಿ ಈಗ ಹೋಲ್‌ಸೇಲಾಗಿ ಬಿಜೆಪಿ ಸೇರಲು ಹೊರಟಿದ್ದಾರೆ. ಅಸಲಿಗೆ ಇವರ್‍ಯಾರೂ ತತ್ವ-ಸಿದ್ಧಾಂತ ಅಂತ ಬಿಜೆಪಿಗೆ ಸೇರುತ್ತಿಲ್ಲ. ಬದಲಾಗಿ ಗಾಳಿ ಬಂದಾಗ ತೂರಿಕೊ ಎಂಬ ಸಿದ್ಧಾಂತಿಗಳಿವರು.

ಈಗ ಬಿಜೆಪಿಯತ್ತ ನುಗ್ಗುತ್ತಿರುವವರ ಲಿಸ್ಟ್ ನೋಡಿದರೆ ಒಬ್ಬ ಎಚ್.ಎನ್. ನಂಜೇಗೌಡ, ಇನ್ನೊಬ್ಬ ಕೇಬಲ್ ವೆಂಕಟೇಶ್ ಎಂ. ಶ್ರೀನಿವಾಸ್ ತಮ್ಮ ತರದವರನ್ನು ಪರವಾಗಿಲ್ಲ ಸಜ್ಜನರು ಅನ್ನಬಹುದು. ಆದರೆ ಬಾಕಿ ಜನ ಯಾರ್‍ಯಾರು, ಯಾವ ಹಿನ್ನೆಲೆಯವರು ಗೊತ್ತೆ?

ಪುರಾನ ವೆಂಕಟೇಶ, ಪಾಂಡು, ಎಂ. ಶ್ರೀನಿವಾಸ, ಖೋಡೇಸ್ ಬಂಟ ಮುನಿಭೈರಪ್ಪ ಗರುಡಾಮಾಲ್ ಉದಯ, ರಾಜರಾಜೇಶ್ವರಿ ನಗರಸಭೆ ಮಾಜಿ ಅಧ್ಯಕ್ಷ ಶಿವರಾಜ್, ಉತ್ತರಹಳ್ಳಿ ಜೆಡಿಎಸ್ ಅಧ್ಯಕ್ಷ ಬಾಲಾಜಿಸಿಂಗ್... ಹೀಗೆ ಈ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.


ಈ ವಲಸೆಕೋರರಲ್ಲಿ ಬಹುತೇಕರು ಒಂದೋ ಜೆಡಿಎಸ್‌ನಲ್ಲಿದ್ದವರು ಅಥವಾ ಕಾಂಗ್ರೆಸ್ ಜೊತೆ ಗುರುತಿಸಿಕೊಂಡಿದ್ದವರು. ಆದರೆ ಸಾರಾಂಶದಲ್ಲಿ ಮಾತ್ರ ಭೂಗಳ್ಳತನ, ಮೀಟರ್ ಬಡ್ಡಿ ದಂಧೆ, ಮಾಫಿಯಾ ಲಿಂಕುಗಳಿರುವ ಜನ.


ಅಷ್ಟೇ ಅಲ್ಲ, ಬಿಜೆಪಿ ನಾಯಕ ಆರ್. ಅಶೋಕ್ ಪಾರ್ಟಿಗೆ ಕರೆತರುತ್ತಿರುವ ಈ ಮಹಾತ್ಮರ ಪೈಕಿ ಕೆಲವು ಮಾಜಿ ಪಿಕ್‌ಪಾಕೆಟರ್‌ಗಳೂ ಇದ್ದಾರೆ! ಬಿಜೆಪಿಗೆ ಬಂದಿರುವ ಈ ಹೊಸ ಲೀಡರ್‌ಗಳ ಆಳೆತ್ತರದ ವಿನಯಲ್‌ಗಳು ಬಸವನಗುಡಿ, ಬನಶಂಕರಿ ನಾಗಸಂದ್ರ ಸರ್ಕಲ್‌ಗಳಲ್ಲಿ ರಾರಾಜಿಸುತ್ತಿವೆ. ಜೊತೆಗೆ ಹತ್ತಿರದ ಬಸವನಗುಡಿ ಪೊಲೀಸ್ ಸ್ಟೇಷನ್‌ನಲ್ಲೂ ಸ್ಲೇಟು ಹಿಡಿದುಕೊಂಡು ನಿಂತಿರುವ ಇವರ ಫೋಟೋಗಳೂ ಇವೆ.

ಇಂಥ ಪಾತಕ ಹಿನ್ನೆಲೆಯ ಜನರನ್ನು ಅಷ್ಟು ಅರ್ಜೆಂಟಾಗಿ ಬಿಜೆಪಿಗೆ ಕರೆತರುವ ಅಗತ್ಯವೇನಿತ್ತು ಅಶೋಕ್‌ಗೆ ಎಂಬ ಪ್ರಶ್ನೆ ನಿಮಗೆ ಬರಬಹುದಲ್ಲವೆ? ಸಾಕ್ಷಾತ್ ಅಶೋಕೇ ಇಂಥ ಪುಂಡರ ನಾಯಕನಂತಿರುವಾಗ ಆತನಿಗೆ ಇಂಥವರೇ ತಾನೇ ಕಣ್ಣಿಗೆ ಬೀಳುತ್ತಾರೆ. ಅದರಲ್ಲೂ ಹೆಚ್ಚೆಚ್ಚು ಕ್ರಿಮಿನಲ್ ಕೆಲಸ ಮಾಡಿದವರಿಗೇ ಬಿಜೆಪಿಯಲ್ಲೀಗ ಜಾಸ್ತಿ ಮರ್ಯಾದೆ, ಮುಂಬರಲಿರುವ ಎಲೆಕ್ಷನ್‌ನಲ್ಲಿ ಟಿಕೆಟ್ ನೀಡುವ ಭರವಸೆಯೂ ಇವರಿಗೆ ಸಿಗುತ್ತಿದೆ.

ಅಶೋಕ್ ಪ್ರಭಾವ ಇದು.

ಪುರಾನ ವೆಂಕಟೇಶನ ಜಮಾನಾ





ಇದುವರೆಗೂ ಬಸವನಗುಡಿಯಲ್ಲಿ ಜಾತ್ಯತೀತ ದಳದ ಲೀಡರ್ ಆಗಿದ್ದ ವೆಂಕಟೇಶ್ ಅಲಿಯಾಸ್ ಪುರಾನ ವೆಂಕಟೇಶ್ ಪೊಲೀಸ್ ಕೇಸ್‌ಗಳ ಪರಂಪರೆ ಇರುವ ವ್ಯಕ್ತಿ. ಇತ್ತೀಚೆಗೆ ಮಾಜಿ ಪೊಲೀಸ್ ಖಾತೆ ಸಚಿವ ಎಂ.ಪಿ. ಪ್ರಕಾಶ್ ಬೆಂಬಲಿಗನಂತೆ ಪೋಸು ನೀಡುತ್ತಿದ್ದ ಪುರಾನನನ್ನು ರೌಡಿ ಎಂ.ಸಿ. ಪ್ರಕಾಶನ ಮರ್ಡರ್ ಕೇಸಿನಲ್ಲಿ ಪೊಲೀಸರು ಫಿಟ್ ಮಾಡಿದ್ದರು. ಇದು 1984 ರ ಆಸುಪಾಸಿನ ವಿಚಾರ. ಈಗ ರಿಯಲ್ ಎಸ್ಟೇಟ್, ಮೀಟರ್ ಬಡ್ಡಿ ದಂಧೆಯಲ್ಲಿ ತಿಂದೂತಿಂದೂ ದುಂಡಗಾಗಿರುವ ಪುರಾನಾ ಕನಿಷ್ಠ 200 ಕೋಟಿಗೆ ತೂಗುತ್ತಾನೆ. ನೀವು ನಂಬಿಲ್ಲಾ ಬಿಡಿ ಇದೇ ಪುರಾನ ಒಂದು ಕಾಲದಲ್ಲಿ ತಿನ್ನಲೂ ಗತಿಯಿರದೆ ಚನ್ನಮ್ಮನ ಕೆರೆ ಸ್ಮಶಾನದಲ್ಲಿ ಹೆಣ ಹೂಳುವವರು ತೆಂಗಿನಕಾಯಿ ಒಡೆಯುವುದನ್ನೇ ಕಾಯುವ ಸ್ಥಿತಿಯಲ್ಲಿದ್ದ, ಆಯ್ಕೊಂಡು ತಿನ್ನಲೆಂದು. ಅವತ್ತು ಅವನದೊಂದು ನಟೋರಿಯಸ್ ಟೀಂ ಇತ್ತು, ಪಾಂಡು, ಚೋರ ಕೊಪ್ಪ, ಚಿಕ್ಕ, ಲವ, ರಾಮಕೃಷ್ಣ ಅಲಿಯಾಸ್ ಮೆಕ್ಕಾ, ಗೌರಿ ಇವರೆಲ್ಲಾ ಪುರಾನ ಜೊತೆಗಿರುತ್ತಿದ್ದರು. ನಂತರ ಈ ಗುಂಪು ಒಡೆದು ಹೋಯಿತಾದರೂ ಪುರಾನಾ-ಪಾಂಡು ಲವ ಗೆಟಪ್ ಆಗಿಬಿಟ್ಟರು- ಹೀಗೆ ಕಾಲಕ್ರಮೇಣ ಪುರಾನ ಶ್ರೀಮಂತನಾದರೂ ಹಳೇ ರೌಡಿ ಚಾಳಿಯಂತೂ ಹೋಗಲಿಲ್ಲ, ತೀರಾ ಇತ್ತೀಚಿನವರೆಗೂ ಕಂಠಪೂರ್ತಿ ಕುಡಿದು ಟೈಟಾಗಿ ರಸ್ತೆ ಮಧ್ಯೆ ನಿಂತು ಸಂಸ್ಕೃತ ಬೈಯ್ಗುಳ ಶುರು ಮಾಡಿದರೆ ಜನ ಕಿವಿ ಮುಚ್ಚಿಕೊಂಡು ಓಡಿ ಬಿಡಬೇಕು. ಹಾಗಿರುತ್ತಿತ್ತು ಪುರಾನನ ಅಶ್ಲೀಲ ವಿಶಾರಾಧಿನಯ.





ಇಂಥವನನ್ನು ಬಿಜೆಪಿ ಈಗ ಕರೆದುಕೊಂಡಿದೆ. 1996 ರಲ್ಲಿ ಬಸವನಗುಡಿಯಿಂದ ಸ್ವತಂತ್ರ ಅಭ್ಯರ್ಥಿಯಾಗಿ ನಗರಪಾಲಿಕೆಗೆ ಸ್ಪರ್ಧಿಸಿದ್ದ ಪುರಾನ ಠೇವಣಿ ಕಳೆದುಕೊಂಡಿದ್ದ. ಆಮೇಲೆ ದಳ ಸೇರಿಕೊಂಡ. ನಂತರ ಬಿಜೆಪಿಗೆ ಬಂದ. ರಾತ್ರೋರಾತ್ರಿ ಕಾಂಗ್ರೆಸ್ ಸೇರಿ ಕೆಲಕಾಲ ಡಿಕೆ ಶಿಷ್ಯವೃತ್ತಿ ಮಾಡಿ ತಿರುಗಿ ಜೆಡಿಎಸ್ ಸೇರಿದ್ದ. 2001 ರಲ್ಲಿ ಮತ್ತೆ ಶ್ರೀನಿವಾಸನಗರದಿಂದ ಇಂಡಿಪೆಂಡೆಂಟಾಗಿ ನಗರಪಾಲಿಕೆಗೆ ನಿಂತು ಸೋತ. ಇದರ ಮಧ್ಯೆಯೇ ಒಂದು ಸಾರಿ ಕೆ.ಆರ್. ರೋಡಿನಲ್ಲಿ ಚೆನ್ನಾಗಿ ಕುಡಿದು ಟ್ರಾಫಿಕ್ ಪೊಲೀಸನ ಮೇಲೆ ಟಾಟಾ ಸುಮೋ ಹತ್ತಿಸಿ, ಅವನಿಗೇ ಹೊಡೆದು ಗಲಾಟೆ ಮಾಡಿಕೊಂಡ. ಕುಡಿದು ಸಿಕ್ಕಸಿಕ್ಕವರಿಗೆಲ್ಲಾ ಹೊಡೆಯುತ್ತಿದ್ದ. ಇವನ ಹಾವಳಿ ಸಹಿಸಲಾಗದೇ ಒಂದು ಸಾರಿ ರೌಡಿ ಪ್ರವೀಣ, ಸುರೇಶ ಸೇರಿಕೊಂಡು ಪುರಾನನನ್ನು ಎತ್ತಾಕಿಕೊಂಡು ಹೋಗಿ ರಿಪೇರಿ ಮಾಡಿ ಕಳಿಸಿದ್ದರು. ಪುರಾನನ ಕತೆ ಅವತ್ತೇ ಮುಗಿಯುತ್ತಿತ್ತೇನೊ, ಆದರೂ ಬದುಕಿಕೊಂಡ. ಒಂದು ಸಾರಿ ಜಯನಗರ ಎಸಿಪಿ ಜಯರಾಂ ಇವನ ಪುಂಡಾಟ ಸಹಿಸಲಾಗದೆ ಬಟ್ಟೆ ಬಿಚ್ಚಿಸಿ ನಿಲ್ಲಿಸಿದ್ದರು.

ಇಂಥ ಮಹಾಪುರುಷ ಈಗ ಬಿಜೆಪಿ ನಾಯಕನಾಗಿ ಅವತರಿಸಿದ್ದಾನೆ. ಈ ಪುರಾತನ ಜೊತೆಗಾರ ಪಾಂಡು ಒಂದು ಕಾಲದಲ್ಲಿ ಪಿಕ್‌ಪಾಕೆಟರ್ ಆಗಿದ್ದವನು. ನಂತರ ಅವರಿವರ ತಲೆ ಮೇಲೆ ಕೈಇಟ್ಟೇ ದೊಡ್ಡ ಕುಳ ಅನಿಸಿಕೊಂಡಿದ್ದಾನೆ. ಹಡಬೆ ದುಡ್ಡು ಜಾಸ್ತಿಯಾಗಿ 'ಪ್ರತ್ಯರ್ಥ' ಅಂತ ತಗಡು ಸಿನಿಮಾ ತೆಗೆದು ಕಾಸು ಕಳಕೊಂಡಿದ್ದ.

ಇವನೂ ಈಗ ಬಿಜೆಪಿ ಅಂತೆ.

ಶ್ರೀನಿವಾಸ ಮಹಾತ್ಮೆ

ಮೊನ್ನೆ ತಾನೇ ದೇವೇಗೌಡರನ್ನು ಬಾಯಿಗೆ ಬಂದಂತೆ ಬೈಯ್ದು ಬಿಜೆಪಿ ಸೇರಿಕೊಂಡಿರುವ ಉತ್ತರಹಳ್ಳಿ ಮಾಜಿ ಶಾಸಕ ಎಂ. ಶ್ರೀನಿವಾಸ ಕತೆ ಏನೆಂದು ನೋಡಿದರೆ ಬೆರಗಾಗುವಂತಿದೆ. ಕೆ.ಆರ್. ರೋಡಿನ ಗಣೇಶ ದೇವಸ್ಥಾನದ ಬಳಿ 10x10 ಚದುರದಿಯ ಸಣ್ಣ ಮನೇಲಿ ವಾಸವಿದ್ದ ಶ್ರೀನಿವಾಸ್ ಇವತ್ತು ಕೋಟ್ಯಾಧೀಶ. ಶ್ರೀನಿವಾಸ ಫೌಂಡ್ರಿ ಮಾಡಿ, ಆಮೇಲೆ ರಾಜಕೀಯಕ್ಕಿಳಿದು ಕನಕನಪಾಳ್ಯದ ಬಾಲಾಜಿ ಬೆಂಬಲದಿಂದ ಉತ್ತರಹಳ್ಳಿ ಶಾಸಕನಾದ ಶ್ರೀನಿವಾಸ ತನಗೆ ಉಪಕಾರ ಮಾಡಿದವರನ್ನೇ ಇವತ್ತು ಮರೆತಿದ್ದಾರೆ. ಈತನಿಗೋಸ್ಕರ ದುಡಿದ ಬಾಲಾಜಿಗೆ ಈಗ ನೆಲೆಯಿಲ್ಲ, ಆದರೆ ಶ್ರೀನಿವಾಸ್ ರಾಶಿರಾಶಿ ಆಸ್ತಿ ಮಾಡಿಕೊಂಡಿದ್ದಾರೆ.


ಅಶೋಕ್ ಬಿಜೆಪಿಗೆ ಕರೆತಂದಿರುವ ಮುನಿಭೈರಪ್ಪ ಹಾಗೂ ಬೈಯಾರೆಡ್ಡಿಗಳದ್ದು ಇದೇ ಕತೆ. ಖೋಡೆಯ ಜೊತೆ ಕರಟಕ ದಮನಕರಂತೆ ಸದಾ ಕಾಣಿಸಿಕೊಳ್ಳುತ್ತಿದ್ದ ಈ ಜೋಡಿ ಬೆಂಗಳೂರಿನ ಭೂಗಳ್ಳರ ನಾಯಕರಂತಿದ್ದಾರೆ. ನೂರಾರು ಎಕರೆ ಸರ್ಕಾರಿ ಜಾಗ ಕಬಳಿಸಿ ದುಂಡಗಾಗಿ ಈಗ ಬಿಜೆಪಿ ಮೂಲಕ ಜನಸೇವೆ ಮಾಡಲು ಹೊರಟಿದ್ದಾರೆ. ವೆಂಕಟೇಶ್ ಬಾಬು ಅಲಿಯಾಸ್ ಕೇಬಲ್ ವೆಂಕಟೇಶ್‌ನೂ ಈಗ ಬಿಜೆಪಿಗೆ ಬಂದಿದ್ದಾನೆ. ಬಸವನಗುಡಿ ಜೆಡಿಎಸ್ ಅಧ್ಯಕ್ಷನಾಗಿದ್ದ ವೆಂಕಟೇಶ್ ಈಗ ಒಳ್ಳೇ ಮನುಷ್ಯ ಅನ್ನಿಸಿಕೊಂಡಿದ್ದರೂ ಇವನು ಏಳ್ಗೆಗೆ ಬಂದಿದ್ದೇ ಅವನ ತಮ್ಮ ಚೀನಿ ಕೃಪೆಯಿಂದ. ಈ ಚೀನಿ ಕಳ್ಳತನ ಮಾಡಿ ದುಡ್ಡು ಸಂಪಾದಿಸುತ್ತಿದ್ದ ಎಂಬುದು ಇಡೀ ಬೆಂಗಳೂರಿಗೇ ಗೊತ್ತಿದೆ.

ಇಂಥ ಪುಣ್ಯಾತ್ಮರನ್ನೆಲ್ಲಾ ಬಿಜೆಪಿಗೆ ಕರೆತಂದಿರುವ ಅಶೋಕ್ ಇನ್ನು ಒಂದೆರಡು ಮಹೋನ್ನತ ಸಾಧನೆ ಮಾಡಿದ್ದಾರೆ. ಉತ್ತರಹಳ್ಳಿ ಕ್ಷೇತ್ರದ ಭೂನ್ಯಾಯ ಮಂಡಳಿ ಅಧ್ಯಕ್ಷರಾಗಿದ್ದಾಗ ರೌಡಿಗಳಾದ ಸಂಜೀವ ಹಾಗೂ ಶಿವಕಾಳಿಗೆ ಉತ್ತರಿ ಗ್ರಾಮದಲ್ಲಿ ತಲಾ ಮೂರೆಕರೆ ಸರ್ಕಾರಿ ಜಮೀನು ಮಂಜೂರು ಮಾಡಿಸಿಕೊಟ್ಟು ತಮ್ಮ ಹಿಂದೂ ಜನ್ಮ ಪಾವನ ಮಾಡಿಕೊಂಡಿದ್ದಾರೆ. ಈಗ್ಗೆ ಕೆಲವೇ ಕೆಲವು ತಿಂಗಳ ಹಿಂದೆ ಬಿಜೆಪಿ ತ್ಯಜಿಸಿ ಜಾತ್ಯತೀತ ದಳ ಸೇರಲು ರೆಡಿಯಾಗಿದ್ದ ಅಶೋಕ್ ಈಗ ಪರಿಸ್ಥಿತಿ ಬದಲಾಗಿರುವುದರಿಂದ ಬಿಜೆಪಿಯಲ್ಲೇ ಉಳಿದುಕೊಂಡಿದ್ದಾರೆ. ಮುಂದಿನ ಎಲೆಕ್ಷನ್‌ನಲ್ಲಿ ತನ್ನ ಬಲ ಹೆಚ್ಚಿಸಿಕೊಳ್ಳಬೇಕೆಂಬ ಒಂದೇ ಕಾರಣಕ್ಕೆ ಪಿಕ್‌ಪಾಕೆಟರ್‌ಗಳು, ಭೂಗಳ್ಳರು ಹಾಗೂ ಮಾಫಿಯಾ ಎಲಿಮೆಂಟುಗಳನ್ನು ಬಿಜೆಪಿಗೆ ತಂದು ತುಂಬುತ್ತಿದ್ದಾರೆ.

ಅಧಿಕಾರ ಹಸ್ತಾಂತರದ ವೇಳೆ ಉಂಟಾದ ಗೊಂದಲಕರ ಪರಿಸ್ಥಿತಿಯಲ್ಲಿ ಸಂಧಾನಕಾರನಂತೆ ಅಶೋಕ್ ಬಹಳ ಓಡಾಡಿದ್ದನಲ್ಲ, ಆ ಬಗ್ಗೆ ಕೇಂದ್ರ ಬಿಜೆಪಿ ನಾಯಕ ಯಶವಂತ್ ಸಿನ್ಹಾ ಹಾಗೂ RSS ನಾಯಕ ಮೈ.ಚ. ಜಯದೇವ್ ಅಶೋಕ್‌ನನ್ನು ಕರೆಸಿ ಬಾಯಿಗೆ ಬಂದಂತೆ ಬೈಯ್ದಿದ್ದಾರೆ. ಆದರೂ ಈ ಅಶೋಕ್ ಸಮಾಜದ್ರೋಹಿಗಳ ಜೊತೆಗಿನ ತನ್ನ ನಂಟಸ್ತಿಕೆ ಬಿಡುತ್ತಿಲ್ಲ, ಅದರ ಮುಂದುವರಿದ ಭಾಗವೇ ಈಗ ಘಟ್ಟಿಸಿರುವ ಕ್ರಿಮಿನಲ್ ಹಿನ್ನೆಲೆಯ ಜನ ಬಿಜೆಪಿಗೆ ಸೇರಿರುವ ಘಟನೆ. ಇದು ಬಿಜೆಪಿಗೆ ಗೌರವ ತರುತ್ತಾ?

■ ಕ್ಷೇತ್ರ


ಲೋಕಾಯುಕ್ತರೂ ಕೈಚೆಲ್ಲಿ ಕೂರುತ್ತಾರೆಂದರೆ ಏನರ್ಥ?



ಭ್ರಷ್ಟಾಚಾರ, ಲಂಚ, ಸ್ವಜನಪಕ್ಷಪಾತ ಎಂಬುದು ಮಾಮೂಲು. ಅವುಗಳನ್ನು ವಿರೋಧಿಸುವವನೇ ಮೂರ್ಖ ಎಂಬ ಅಲಿಖಿತ ನಿಯಮವೇ ಇವತ್ತು ಎಲ್ಲೆಡೆ ಚಾಲ್ತಿಯಲ್ಲಿದೆ. ಆದರೂ ಲೋಕಾಯುಕ್ತರು ರೈಡ್ ಮಾಡಿ ಭ್ರಷ್ಟರನ್ನು ಹಿಡಿದಾಗ ಸಾಮಾನ್ಯ ಜನತೆ ತಾವೇ ಗೆದ್ದಷ್ಟು ಖುಷಿಯಿಂದ ಬೀಗುತ್ತಾರೆ. ಲೋಕಾಯುಕ್ತಕ್ಕೆ ಇನ್ನೂ ಹೆಚ್ಚಿನ ಅಧಿಕಾರ ನೀಡಿದ್ದೇ ಆದರೆ ರಾಜ್ಯದಲ್ಲಿ ಭ್ರಷ್ಟಾಚಾರವೇ ನಿರ್ಮೂಲನೆಯಾಗುತ್ತದೆಂದು ಭಾವಿಸುತ್ತಾರೆ.

ಆದರೆ ಲೋಕಾಯುಕ್ತವನ್ನು ಇನ್ನಷ್ಟು, ಮತ್ತಷ್ಟು ಪ್ರಬಲಗೊಳಿಸಿದರೆ ತಮ್ಮ ಬೇಳೆ ಬೇಯಲಿಕ್ಕಿಲ್ಲ ಎಂಬುದು ರಾಜಕಾರಣಿಗಳಿಗೆ ಚೆನ್ನಾಗಿ ಗೊತ್ತು, ಆದ್ದರಿಂದ ಲೋಕಾಯುಕ್ತವನ್ನು ಹಲ್ಲಿಲ್ಲದ ಹಾವಿನ ಸ್ಥಿತಿಯಲ್ಲಿಟ್ಟಿದ್ದಾರೆ. ತಮ್ಮ ಸೀಮಿತ ಅಧಿಕಾರದ ನಡುವೆಯೂ ಲೋಕಾಯುಕ್ತರ ಕಚೇರಿ ಹಲವಾರು ಅಧಿಕಾರಿಗಳ ಅವ್ಯವಹಾರವನ್ನು ಬಯಲಿಗೆಳೆಯುವಲ್ಲಿ ಯಶಸ್ವಿಯಾಗಿದೆ. ಇದೆಲ್ಲದರಿಂದ ಇವತ್ತು ಜನತೆಗೆ ಕೊಂಚ ವಿಶ್ವಾಸವಿರುವುದು ಲೋಕಾಯುಕ್ತರ ಮೇಲೆಯೆ.

ಆದರೆ ಯಾರ ಮೇಲೆ ಅಪಾರವಾದ ಭರವಸೆಯನ್ನು ಇಟ್ಟುಕೊಂಡಿರುತ್ತಾರೋ ಅವರೇ ನಿರಾಸಕ್ತರಾದರೆ? ರಕ್ಷಿಸಬೇಕಾದ ತಾಯಿಯ ಮೊಲೆ ಹಾಲೇ ವಿಷವಾದರೆ ಯಾರನ್ನು ದೂರಬೇಕು? ಎಂಬ ಸಂದಿಗ್ಧಕ್ಕೆ ಕಲಬುರ್ಗಿಯ ಸಂಯುಕ್ತ ಜನತಾದಳದ ಕಾರ್ಯಾಧ್ಯಕ್ಷ ರಾಜು ಕುಳಗೇರಿ ಸಿಲುಕಿಕೊಂಡಿದ್ದಾರೆ. ಅದಕ್ಕೆ ಗುಲ್ಬರ್ಗಾದಲ್ಲಿ ನಡೆದಿರುವ ಅವ್ಯವಹಾರ ಮತ್ತು ಅದನ್ನು ತನಿಖೆಗೆ ಒಳಪಡಿಸಲಾಗದ ಲೋಕಾಯುಕ್ತ ಅಸಹಾಯಕತೆ.




ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಕಲಬುರ್ಗಿಯ ರಸ್ತೆ, ಪಾರ್ಕ್, ಫುಟ್‌ಪಾತ್, ಡ್ರೈನೇಜ್ ಮುಂತಾದವುಗಳ ಕಾರ್ಯಕ್ಕೆ ಒಂಭತ್ತು ಕೋಟಿ 45 ಲಕ್ಷ ರೂಪಾಯಿ ಬಿಡುಗಡೆಯಾಗಿತ್ತು. ಇದು ಸಿಎಂ ಪ್ಯಾಕೇಜ್ ಆದ್ದರಿಂದ ಈ ಹಣ ನೇರವಾಗಿ ಜಿಲ್ಲಾಧಿಕಾರಿಗಳ ಅಕೌಂಟಿಗೆ ಜಮೆಯಾಗಿತ್ತು. ಇದರ ನೇರ ಉಸ್ತುವಾರಿ ಅಂದಿನ ಜಿಲ್ಲಾಧಿಕಾರಿಯಾದ ಅಂಜುಮ್ ಪರ್ವೇಜ್ ಎಂಬ ಧರ್ಮಸಿಂಗನ ಬಾಲಂಗೋಚಿಯ ಕೈಯೊಳಗೆ ಇತ್ತು.

ಆದರೆ ಈ ಹಣವನ್ನೆಲ್ಲ ಅಂದಿನ ಕಾರ್ಪೊರೇಶನ್ ಕಮೀಶನರ್ ಮುಧೋಳ ಹಾಗೂ ಮಾಜೀದ, ಗೋಪಾಲ ಕೃಷ್ಣ (ಎಇಇ), ಮಲ್ಲಿಕಾರ್ಜುನ ಅಲ್ಲಿಪುರ, ಮಹ್ಮದ ಆರೀಫ್, ಮಲ್ಲಿಕಾರ್ಜುನ ಕುಕಟನೂರ, ರಿಯಾಜ್, ಮಹ್ಮದ ಹಾಜಿ, ಆರ್.ಪಿ.ಜಾಧವ, ಎಂ.ಎ.ಮಾಜಿದ್, ರಫಿ ಪಾಟೀಲ ಎಂಬ ಏಳು ಜನ ಇಂಜಿನಿಯರುಗಳು ಹಾಗೂ ಹತ್ತೆಂಟು ಜನ ಕಂಟ್ರಾಕ್ಟುದಾರರು ಸೇರಿ ಸ್ವಾಹ ಮಾಡಿಬಿಟ್ಟಿದ್ದಾರೆ.

ಗುಲ್ಬರ್ಗಾ

(ಅಂದಹಾಗೆ, ಅದೇ ಸಂದರ್ಭದಲ್ಲಿ ನಡೆದ ಧರ್ಮಸಿಂಗರ ಕುಲಪುತ್ರ ಅಜಯಸಿಂಗ್‌ನ ಮದುವೆಯ ಸಂದರ್ಭದಲ್ಲಿ ಈ ಫಂಡಿನಿಂದ ಒಂದೂವರೆ ಕೋಟಿ ರೂ. ಖರ್ಚು ಮಾಡಿದ್ದಾರೆ)

ಇವರೆಲ್ಲ 52 ಬಿ.ಟಿ.ರಸ್ತೆ 22 ಪಾರ್ಕ್ ವಾಲ್, ಸಿ.ಸಿ.ರೋಡ್, 4 ಫುಟ್‌ಪಾತ್, 24 ಹೈಮಾಸ್ಟ್ , 5 ಡ್ರೈನೇಜ್ ಕಾಮಗಾರಿಗಳನ್ನು ಮಾಡಿರುವುದಾಗಿ ಹೇಳುತ್ತಾರಾದರೂ ವಾಸ್ತವದಲ್ಲಿ ಅವೆಲ್ಲ ಕಾಣಸಿಗುವುದು ಕಾಗದದ ಮೇಲೆ ಮಾತ್ರ. ಯಾಕೆಂದರೆ ಆ ಕಾಮಗಾರಿ ನಡೆದೇ ಇಲ್ಲ, ಎಲ್ಲೂ ಪೂರ್ತಿ ಕೆಲಸ ಮಾಡದೇ ಹಣ ಗುಳುಂ ಮಾಡಿದರೆ ಬದನಾಮ್ ಆಗುತ್ತೇವೆಂದು ತಿಳಿದು ಅಲ್ಲಲ್ಲಿ ತೇಪೆ ಹಚ್ಚುವ ಕೆಲಸವನ್ನು ಮಾಡಿ ಮುಗಿಸಿದ್ದಾರೆ.



ಈ ಸಂಗತಿ ತಿಳಿದು ಜಾಗೃತರಾದ ಡಾ.ರಾಜು ಕುಳಗೇರಿ ಪಾಲಿಕೆಯಲ್ಲೆ ನಡೆದಿರುವ ಅವ್ಯವಹಾರವನ್ನು ತನಿಖೆ ಮಾಡಬೇಕೆಂದು ಡಿಸಿಯನ್ನು ಒತ್ತಾಯಿಸಿದರೆ ಆತ ತನ್ನ ಕಾಲಬುಡಕ್ಕೆ ಇಟ್ಟುಕೊಂಡು ಕುಳಿತುಕೊಂಡ. ಮಾಧ್ಯಮಗಳ ಮೂಲಕ ಅವಲತ್ತುಕೊಂಡು ಸಾಕಾಗಿ ಕೊನೆಗೆ ಲೋಕಾಯುಕ್ತರಿಗಾದರೂ ಈ ಬಗ್ಗೆ ತಿಳಿಸಿ ತನಿಖೆ ಮಾಡಿದರಾಯಿತೆಂದು ಕುಳಗೇರಿ ಲೋಕಾಯುಕ್ತ ಡಾ. ಸಂತೋಷ ಹೆಗಡೆಯವರನ್ನು ದುಂಬಾಲು ಬಿದ್ದ. ಲೋಕಾಯುಕ್ತರೂ ಈ ವಿಷಯದಲ್ಲಿ ಮೊದಮೊದಲು ಆಸಕ್ತಿ ತೋರಿಸಿದರು.

ಈ ಮಧ್ಯೆ ಅಂಜುಮ್ ಪರ್ವೇಜ ಎಂಬ ಐನಾತಿ ಡಿಸಿ ವರ್ಗವಾಗಿ ಹೋಗುತ್ತಲೇ ಪಂಕಜಕುಮಾರ ಪಾಂಡೆ ಎಂಬ ಡಿಸಿ ಬಂದರು. ಅವರು ಈ ಅವ್ಯವಹಾರ ತನಿಖೆಗೆ ಸ್ಥಳೀಯ ಪಿಡಿಎ ಇಂಜಿನಿಯರಿಂಗ್ ಕಾಲೇಜಿನ ಬಸವರಾಜ ಪಡಶೆಟ್ಟಿ ನೇತೃತ್ವದಲ್ಲಿ ಥರ್ಡ್‌ಪಾರ್ಟಿ ಪರಿಶೀಲನೆಗೆ ನೇಮಕ ಮಾಡಿದರು. ಮೂರು ಜನರ ಈ ತಂಡ ನಗರದ ವಿವಿಧೆಡೆ ಸಂಚರಿಸಿ, ಮಾಹಿತಿ ಕಲೆಹಾಕಿ ಕೊನೆಗೆ ಇನ್ನೂರು ಪುಟಗಳ ವರದಿ ಸಲ್ಲಿಸಿತು. ಅವರ ವರದಿಯ ಪ್ರಕಾರ ಸಿಎಂ ಪ್ಯಾಕೇಜ್‌ನಲ್ಲಿ ಅವ್ಯವಹಾರ ನಡೆದಿದೆ ಎಂದು ಡಾ. ರಾಜು ಕುಳಗೇರಿ ಆಪಾದಿಸಿರುವುದರಲ್ಲಿ ಸತ್ಯಾಂಶ ಇದೆ.

ಈ ವರದಿಯನ್ನಾಧರಿಸಿ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮೊನ್ನೆ ಜಿಲ್ಲಾಧಿಕಾರಿಗಳು ಡಾ.ರಾಜು ಕುಳಗೇರಿಗೆ ಪತ್ರ ಬರೆದು ತಿಳಿಸಿದ್ದಾರೆ.

ಚೋದ್ಯವೆಂದರೆ ಡಿಸಿಗಿಂತಲೂ ಹೆಚ್ಚಿನ ಮುತುವರ್ಜಿ ವಹಿಸಿ ಸಿಎಂ ಪ್ಯಾಕೇಜ್ ಹಣದಲ್ಲಿ ನಡೆದಿರುವ ಅವ್ಯವಹಾರವನ್ನು ತನಿಖೆ ಮಾಡಬೇಕೆಂಬ ಕಾಳಜಿಪೂರ್ವಕ ಟಿಪ್ಪಣಿ ಬರೆಯಬೇಕಿದ್ದ ಲೋಕಾಯುಕ್ತರ ಟೆಕ್ನಿಕಲ್‌ವಿಂಗ್‌ನ ಎಂ.ಎಲ್.ರಮೇಶ್ ಎಂಬಾತನೇ ಸುಮ್ಮನಿದ್ದಾನೆ. ಅಷ್ಟೇ ಅಲ್ಲ, ತನಿಖೆ ನಡೆಯಬೇಕೆಂದೂ ಆತ ಒತ್ತಾಯಿಸಿಲ್ಲ.

ಇದರ ಬಗ್ಗೆ ಲೋಕಾಯುಕ್ತರನ್ನು ಮುಖತಃ ಭೇಟಿಯಾದ ಡಾ.ರಾಜು ಹೆಗಡೆಯವರಿಗೆ "ಏನ್ ಮಾಡ್ಲಿ ರಾಜು ಅವರೇ, ನಮ್ಮ ಲೋಕಾಯುಕ್ತ ವಿಂಗ್‌ನಲ್ಲೂ ಭ್ರಷ್ಟರಿದ್ದಾರೆ. ಲಂಚಕೋರರಿದ್ದಾರೆ. ನಾನಾದರೂ ಏನ್ ಮಾಡ್ಲಿ? ನೀವು ಕೋರ್ಟ್‌ಗೆ ಹೋಗಿ. ಕೋರ್ಟ್ ಮೂಲಕ ನಮಗೆ ನಿರ್ದೇಶಿಸಿ" ಎಂದು ಹೇಳಿದ ಸಂತೋಷ್ ಹೆಗಡೆ ಕೈಚೆಲ್ಲಿದರಂತೆ.

ಭ್ರಷ್ಟಾಚಾರವನ್ನು ತಡೆಯಬೇಕಿರುವ ಲೋಕಾಯುಕ್ತ ಸಂತೋಷ ಹೆಗಡೆಯವರೇ ಹೀಗೆ ಅಸಹಾಯಕರಾಗಿ ಕೈ ಚೆಲ್ಲಿ ಕೂರುವಂತಹ ವ್ಯವಸ್ಥೆ ಇದೆ ಎಂದರೆ, ಇದು ರಿಪೇರಿ ಆಗುವುದೆಂದು?

■ ವಿಶ್ವಾರಾಧ್ಯ ಸತ್ಯಂಪೇಟೆ

ವಂಚನೆಗೆ ಇನ್ನೊಂದು ಹೆಸರು ಕೊಡವ ಅಕಾಡೆಮಿ


ಡಾಟಿ ಪೂವಯ್ಯ

ಕೊಡವ ಅಕಾಡೆಮಿ ಇಲ್ಲಿಯತನಕ ಪ್ರಕಟಿಸಿರುವ ಸಾಹಿತ್ಯ ಕೃತಿಗಳೆಲ್ಲ ಕಡಿಮೆ ಗುಣಮಟ್ಟದವು. 'ಒಯ್ಯತ್ ಮಲ್ಲಿಗೆ' ಎಂಬ ಹೆಸರಿನ ಪ್ರಥಮ ಕೊಡವ ಕಾದಂಬರಿಯನ್ನು ಉಳ್ಳಿಯಡ ಪೂವಯ್ಯನವರ ಅಧಿಕಾರಾವಧಿಯಲ್ಲಿ ಅವರ ಪತ್ನಿ, ಇಂದಿನ ಕೊಡವ ಅಕಾಡೆಮಿಯ ಅಧ್ಯಕ್ಷೆ, ಡಾಟಿ ಪೂವಯ್ಯ ಕೃತಿಚೌರ್ಯ ಮಾಡಿ ರಚಿಸಿದರು. ತಮಾಷೆಯೆಂದರೆ ಅದನ್ನು ಕೊಡವ ಅಕಾಡೆಮಿ ತಾನೇ ನಿಂತು ಪ್ರಕಟಿಸಿತು. ಇನ್ನೂ ತಮಾಷೆಯೆಂದರೆ ಅದಕ್ಕೆ ಕೊಡವ ಅಕಾಡೆಮಿ ಪ್ರಶಸ್ತಿಯನ್ನು ಸಹ ನೀಡಿ ಗೌರವಿಸಿತು.

ವೀರಪ್ಪ ಮೊಯ್ಲಿ ಮುಖ್ಯಮಂತ್ರಿಯಾಗಿದ್ದಾಗ ಸ್ಥಾಪಿಸಲ್ಪಟ್ಟ ಕನ್ನಡದ ಮೂರು ಸಹೋದರಿ ಭಾಷೆಗಳ ಸಾಹಿತ್ಯ ಅಕಾಡೆಮಿಗಳಲ್ಲಿ ಕೊಡವ ಅಕಾಡೆಮಿ ಮಾತ್ರ ವಂಚನೆಯ ಬೀಜವನ್ನು ತನ್ನೊಳಗೆ ಇಟ್ಟುಕೊಂಡೇ ಜನ್ಮ ತಾಳಿತು. ತುಳು ಮತ್ತು ಕೊಂಕಣಿ ಅಕಾಡೆಮಿಗಳು ಪ್ರಜಾಪ್ರಭುತ್ವಕ್ಕೆ ಮತ್ತು ಜಾತ್ಯತೀತತೆಗೆ ಬದ್ಧವಾಗಿ ಸೃಜನಶೀಲತೆ ಮತ್ತು ಶಿಸ್ತಿನಿಂದ ಕಾರ್ಯ ನಿರ್ವಹಿಸಿದರೆ ಕೊಡವ ಅಕಾಡೆಮಿಗೆ ಮೊದಲಿಂದಲೂ ಅದೆಲ್ಲ ಗೌಣ!

ರಾಜಕೀಯ ಮಹಾತ್ವಾಕಾಂಕ್ಷೆಯಿಂದ ಸ್ಥಾಪಿಸಿದ ಅಕಾಡೆಮಿಗಳ ಪೈಕಿ ಕೊಡವ ಅಕಾಡೆಮಿಯ ಪ್ರಥಮ ಸಮಿತಿಯ ನಿರ್ಮಾಣದ ಅಧಿಕಾರವನ್ನು ಮೊಯ್ಲಿ ಅದು ಹೇಗೋ ಅಲಿಖಿತವಾಗಿ ಎಂ.ಸಿ.ನಾಣಯ್ಯನವರಿಗೆ ನೀಡಿದ್ದರು. ನಿಜಕ್ಕೂ ವಂಚನೆಯ ಓನಾಮ ಅಂದೇ ಬರೆಯಲ್ಪಟ್ಟಿತ್ತು.

ಕೊಡವ ಭಾಷೆ ಸುಮಾರು ಹದಿನೇಳು ಜಾತಿಗಳಿಗೆ ಸೇರಿದ ಜನರ ತಾಯ್ನುಡಿಯಾಗಿದ್ದರೂ ಎಲ್ಲ ಸದಸ್ಯತ್ವವನ್ನೂ ಕೊಡಗಿನ ಪ್ರಭಾವಶಾಲಿ ಮುಂದುವರಿದ ಸಮುದಾಯವಾದ ಕೊಡವರಿಗೇ ಎಂ.ಸಿ.ನಾಣಯ್ಯ ನಿಗದಿ ಪಡಿಸಿದರು. ಕೊಡಗಿನಲ್ಲಿ ಸಾಹಿತಿಗಳ ಬರವಿತ್ತೇನೋ, ಸ್ವತಃ ಸಾಹಿತಿಯಲ್ಲದ ಆದರೆ ಕೆಲವು ವರ್ಷಗಳಿಂದ 'ಬ್ರಹ್ಮಗಿರಿ' ಎನ್ನುವ ಪತ್ರಿಕೆಯನ್ನು ಅರಾಜಕತೆಯಿಂದ ನಡೆಸಿದ ಅನುಭವವಿದ್ದ ಉಳ್ಳಿಯಡ ಪೂವಯ್ಯ ಅಕಾಡೆಮಿಯ ಅಧ್ಯಕ್ಷರಾದರು. ಈ ಉಳ್ಳಿಯಡ ಪೂವಯ್ಯ ಅದಾಗಲೇ ಸೀಸನ್ಡ್ ಮೋಸಗಾರರಾಗಿದ್ದರು.

ಕೊಡವ ಭಾಷೆಯ ಮೇಲಿನ ಪ್ರೀತಿಯಿಂದ ಬೇರೆ ಬೇರೆ ಜಾತಿಗೆ ಸೇರಿದ ಜನ ಜೊತೆಗೂಡಿ ಕೆಲ ವರ್ಷಗಳ ಹಿಂದೆ ವಿರಾಜಪೇಟೆಯಲ್ಲಿ 'ಕೊಡವ ತಕ್ತ್ ಪರಿಷತ್' ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ್ದರು. ಕೊಡವ ಸಮುದಾಯಕ್ಕೆ ಸೇರಿದ್ದ ಎಂ.ಎಂ.ಚಂಗಪ್ಪ ಅದರ ಅಧ್ಯಕ್ಷರಾಗಿದ್ದರು. ಕ್ರಿಯಾಶೀಲ ವ್ಯಕ್ತಿತ್ವದ ಅಗಸರ ಸಮುದಾಯದ ಡಿ.ಜಿ.ಪದ್ಮನಾಭ ಅದರ ಬೆನ್ನೆಲುಬಾಗಿದ್ದರು. ಅವರುಗಳು ಸ್ಥಾಪಿಸಿದ 'ಬ್ರಹ್ಮಗಿರಿ' ಕೊಡವ ವಾರಪತ್ರಿಕೆಯ ಸಂಪಾದಕರಾಗಿ ಉಳ್ಳಿಯಡ ಪೂವಯ್ಯ ನೇಮಕವಾಗಿದ್ದರು.

ಮುಂದೆ ಕೊಡವ ತಕ್ಕ್ ಪರಿಷತ್‌ನ ಗಮನಕ್ಕೆ ಬರದಂತೆ ತಮ್ಮ ಹೆಸರಲ್ಲಿ ಪತ್ರಿಕೆಯ ಟೈಟಲ್ ಗಿಟ್ಟಿಸಿದ ಉಳ್ಳಿಯಡ ಪೂವಯ್ಯ 'ಬ್ರಹ್ಮಗಿರಿ' ಪತ್ರಿಕೆಗೆ ಭಾಷಾ ಅಭಿಮಾನಿಗಳು ಚಂದಾ, ಸಹಾಯಧನ ಮೊದಲಾಗಿ ಕಳುಹಿಸಿದ ಚೆಕ್‌ಗಳನ್ನು ಕ್ಯಾಷ್ ಮಾಡಿಸಿಕೊಂಡು ತಾವೇ ಬಳಸಿಕೊಂಡರು. ಕೊಡವ ತಕ್ಕ್ ಪರಿಷತ್‌ನ ಅಧ್ಯಕ್ಷರ ಹೆಸರಲ್ಲಿ ಬಂದಿದ್ದ ಚೆಕ್‌ಗಳನ್ನು ಹಿಂದಕ್ಕೆ ಕಳುಹಿಸಿ 'ಬ್ರಹ್ಮಗಿರಿ' ಪತ್ರಿಕೆಯ ಸಂಪಾದಕರ ಹೆಸರಲ್ಲಿ ಹೊಸ

ಚೆಕ್‌ಗಳನ್ನು ತರಿಸಿಕೊಳ್ಳತೊಡಗಿದರು. ಇದು ಕೊ
ತಕ್ಕ್ ಪರಿಷತ್‌ನ ಗಮನಕ್ಕೆ ಬಂದಾಗ 'ಬ್ರಹ್ಮಗಿರಿ'
ಕಚೇರಿಯನ್ನು ವಿರಾಜಪೇಟೆಯಿಂದ ಮಡಿಕೇ
ಸ್ಥಳಾಂತರಿಸಿದ ಉಳ್ಳಿಯಡ ಪೂವಯ್ಯ ಸಂಪೂ
ಸ್ವತಂತ್ರರಾದರು. ಉದಾರಿ ಎಂ.ಎಂ.ಚೆಂಗಪ್ಪ, ಡಿ
ಪದ್ಮನಾಭ ಮತ್ತವರ ಬಳಗ ಗೊಣಗಿಕೊಂ
ಸುಮ್ಮನಾಯಿತು.

ಇಂತಹ ಹೀನ ಹಿನ್ನೆಲೆಯ ವ್ಯಕ್ತಿ ಪ್ರಥ
ಅಧ್ಯಕ್ಷರಾದ ದುರ್ದೈವ ಕೊಡವ ಸಾಹಿತ್ಯ ಅಕಾಡೆ
ಯನ್ನು ಇನ್ನೂ ಕಾಡುತ್ತಿದೆ. ಇಂದಿನ ಅಧ್ಯಕ್ಷೆ ಡಾ
ಪೂವಯ್ಯ ಈತನ ಪತ್ನಿ!

ಎಂ.ಸಿ.ನಾಣಯ್ಯನವರ ಜಾತಿವಾದದಿಂದ ಇ
ಜಾತಿಯ ಕೊಡವ ಭಾಷಿಕರು ಬೇಸತ್ತು ಕೊಂಡರು.
ಮುಂದಿನ ಅವಧಿಗೆ ಕಾಮೆಯಂಡ ಮುತ್ತಣ್ಣನವ
ಸದಸ್ಯರಾಗಿ ನೇಮಕ ಮಾಡುವ ಮೂಲಕ ಎಂ.ಸಿ.ನಾಣ
ಮುಖ ಉಳಿಸಿಕೊಳ್ಳುವ ಮತ್ತು ಉಳಿದ ಸಮುದಾಯ
ಬಾಯಿ ಮುಚ್ಚಿಸುವ ಪ್ರಯತ್ನವನ್ನು ಏಕಕಾಲದ
ನಡೆಸಿದರು.

ಹುಟ್ಟಿದಾಗಿನಿಂದ ಇವತ್ತಿನತನಕ ಕೊಡವ ಅಕಾಡೆ
ತನ್ನ ಭಾಷೆಯ ಸಾಹಿತ್ಯಕ್ಕೆ ಮತ್ತು ಸಂಸ್ಕೃತಿಗೆ ಯಾವು
ಗಮನಾರ್ಹ ಕೆಲಸವನ್ನು ಮಾಡದಿದ್ದರೂ ವರ್ಷಂ
ಕೊಡವ ಸಾಂಸ್ಕೃತಿಕ ಮೇಳ ಎಂಬ ಐಷಾರಾ
ಜನವರ್ಗದ ಅದ್ದೂರಿಯ ಹಬ್ಬಗಳನ್ನು ತಪ್ಪದೇ ಆ
ಸುತ್ತಾ ಬಂದಿದೆ. ಇದು ಈ ತನಕ ಕೇವಲ ಕೊ
ಜಾತಿಗೆ ಸಂಬಂಧಿಸಿದ ಉತ್ಸವ ಮಾತ್ರ. ಕರ್ನಾಟಕ ಸರಕಾ
ಹಣದಲ್ಲಿ ಒಂದು ಬಟ್ಟ ಜಾತಿ ಸಮ್ಮೇಳನ!

ಕೊಡವ ಅಕಾಡೆಮಿ ಇಲ್ಲಿಯತನಕ ಪ್ರಕಟಿಸಿರು
ಸಾಹಿತ್ಯ ಕೃತಿಗಳೆಲ್ಲ ಕಡಿಮೆ ಗುಣಮಟ್ಟದವು. 'ಒಯ್ಯ
ಮಲ್ಲಿಗೆ' ಎಂಬ ಹೆಸರಿನ ಪ್ರಥಮ ಕೊಡವ ಕಾದಂಬ
ಯನ್ನು ಉಳ್ಳಿಯಡ ಪೂವಯ್ಯನವರ ಅಧಿಕಾರಾ
ಯಲ್ಲಿ ಅವರ ಪತ್ನಿ, ಇಂದಿನ ಕೊಡವ ಅಕಾಡೆಮಿ
ಅಧ್ಯಕ್ಷೆ, ಡಾಟಿ ಪೂವಯ್ಯ ಕೃತಿಚೌರ್ಯ ಮಾಡಿ ರಚ
ದರು. ತಮಾಷೆಯೆಂದರೆ ಅದನ್ನು ಕೊಡವ ಅಕಾಡೆ
ತಾನೇ ನಿಂತು ಪ್ರಕಟಿಸಿತು. ಇನ್ನೂ ತಮಾಷೆಯೆಂ
ಅದಕ್ಕೆ ಕೊಡವ ಅಕಾಡೆಮಿ ಪ್ರಶಸ್ತಿಯನ್ನು ಸಹ ನೀ
ಗೌರವಿಸಿತು.

'ತಣ್ಣನೆಯ, ನುಣ್ಣನೆಯ' ಮಿಣ್ಣನೆಯ ಹಿಂಸೆಗೆ ಪ್ರತಿಭಟನೆ
ಸೌಹಾರ್ದ ಸಾಹಿತ್ಯ ಸಮ್ಮೇಳನ

ಪ್ರತಿಭಾವಂತ ಕವಿಮಿತ್ರರೊಬ್ಬರು ನಮ್ಮ ಸಮ್ಮೇಳನವು '74 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ'ಕ್ಕೆ ಅಡ್ಡಗಾಲು ಹಾಕುವ' ದುಷ್ಕೃತ್ಯವೆಸಗಿದ್ದನ್ನು ಖಂಡಿಸಿದ್ದಾರೆ; ಯಜಮಾನರು ತಿಕದ ಮೇಲೆ ಕಾಲಿಂದ ಜಾಡಿಸಿ ಒದ್ದರೆ, ಕ್ಷಮಿಸಿ, ತಮ್ಮ ಪಾದಾರವಿಂದಗಳಿಗೆ ನನ್ನ ತಿಕ ಅಡ್ಡಬರಬಾರದಿತ್ತು' ಎಂದು ಕ್ಷಮೆ ಕೋರೋಣವೇ- ಅದೇ ಈ ಕಾಲದ ಸಭ್ಯತೆಯೋ ಏನೋ?

ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಡಿಸೆಂಬರ್ 12-15ರವರೆಗೆ ಉಡುಪಿಯಲ್ಲಿ ನಡೆದ 74 ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 'ಪ್ರತಿಭಟನೆ'ಯಾಗಿ ಡಿಸೆಂಬರ್ 9 ರಂದು 'ಸೌಹಾರ್ದ ಸಾಹಿತ್ಯ ಸಮ್ಮೇಳನ'ವನ್ನು ನಡೆಸಲಾಯಿತು. ಇಲ್ಲಿ 'ಪ್ರತಿಭಟನೆ' ಎಂಬ ಪದವನ್ನು ಒತ್ತಿ ಹೇಳುವುದಕ್ಕೆ ಕಾರಣವಿದೆ. ಸುದ್ದಿ ಮಾಧ್ಯಮಗಳು 'ಸೌಹಾರ್ದ ಸಾಹಿತ್ಯ ಸಮ್ಮೇಳನ' ಕ.ಸಾ.ಪ.ದ ಸಮ್ಮೇಳನಕ್ಕೆ 'ಪರ್ಯಾಯ'ವಾಗಿ ನಡೆಯುತ್ತಿದೆ ಎಂದು ಪ್ರಚಾರ ಮಾಡಿದರೆ, ಕ.ಸಾ.ಪ.ದ ಅಧ್ಯಕ್ಷರು ಇದು 'ಪೂರಕವಾಗಿ' ನಡೆಯುತ್ತಿರುವ ಸಮ್ಮೇಳನ ಎಂದು ಅಪ್ಪಣೆ ಕೊಡಿಸಿದ್ದರು. ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಳಗೊಂಡ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಕಳೆದ ಹದಿನೈದು ವರ್ಷಗಳಿಂದ 'ಹಿಂದುತ್ವ' ಹಾಗು 'ಅಭಿವೃದ್ಧಿ'ಯ ರಾಜಕೀಯಗಳ ಫಲವಾಗಿ ಊರೂರುಗಳಲ್ಲಿ ಹಿಂಸೆ ನಿತ್ಯದ ಮಾತಾಗಿದೆ. 'ತನ್ನ ಬಣ್ಣಿಸ ಬೇಡ, ಇದಿರ ಹಳಿಯಲು ಬೇಡ'ವೆಂಬ 'ಅಂತರಂಗ-ಬಹಿರಂಗ ಶುದ್ಧಿ'ಗಳ ಸಾವಿನ ಸೂತಕವನ್ನು ಮನಗಾಣುವುದು ಅಂತಿರಲಿ, ಮನುಷ್ಯರ ಸಹಬಾಳ್ವೆಯ ವಿವೇಕದ ನಾಶವನ್ನು ಈ ಊರುಗಳಲ್ಲಿ 'ವಿಜಯೋತ್ಸವ'ವಾಗಿ ಆಚರಿಸಲಾಗುತ್ತಿದೆ. ಇಂತಹ ಹೊತ್ತಿನಲ್ಲಿ, ಮನುಷ್ಯ ಮಾತ್ರರಾದವರು ನಾಚಿಕೆಯಿಂದ ತಲೆತಗ್ಗಿಸಬೇಕಾದ 'ಬೆತ್ತಲೆ ಪ್ರಕರಣ' ನಡೆದ ಉಡುಪಿಯಲ್ಲಿ, ಅದೂ ಸದರಿ ಹಿಂಸೆಯ ರೂವಾರಿಗಳ ಪೌರೋಹಿತ್ಯದಲ್ಲಿ 'ಕನ್ನಡ ಸಾಹಿತ್ಯ ಸಮ್ಮೇಳನ'ವೇ! ಇಂಥಾದ್ದೊಂದು ಉಡುಪಿಯಲ್ಲಿ ನಡೆಯುವುದು ಹಾಗು ಈ ಅಸಹ್ಯವನ್ನು ಊರು ತೆಪ್ಪಗೆ ಸಹಿಸಿಕೊಳ್ಳುವುದು, ಸಾಹಿತ್ಯಕ್ಕೆ ಸಹಜವಾದ 'ಸೆಕ್ಯುಲಾರ್ ಆಶಯ'ಕ್ಕೂ, ಕನ್ನಡ ಸಾಹಿತ್ಯ ಕಟ್ಟಿಕೊಟ್ಟಿರುವ ಪ್ರತಿರೋಧದ ನೆಲೆಗಳಿಗೂ ಮಸಿ ಬಳಿದ ಹಾಗೆ. ಈ ಎಚ್ಚರದಲ್ಲಿ ಉಡುಪಿಯ 11 ಸಂಘಟನೆಗಳು ಒಗ್ಗೂಡಿ 'ಸೌಹಾರ್ದ ಸಾಹಿತ್ಯ ಸಮ್ಮೇಳನ' ನಡೆಸುವ ನಿರ್ಧಾರ ಮಾಡಿದವು.


ನಮ್ಮ ಪ್ರತಿಭಟನೆಯ ಅರ್ಥವನ್ನು ನಾವು ನಿಚ್ಚಳವಾಗಿ ಕಂಡುಕೊಂಡದ್ದರಿಂದ, 'ಸೌಹಾರ್ದ ಸಾಹಿತ್ಯ ಸಮ್ಮೇಳನ'ದಲ್ಲಿ 'ಕೋಮುವಾದ' ಹಾಗು 'ಜಾಗತೀಕರಣ ಮತ್ತು ಆರ್ಥಿಕ ಅಸಮಾನತೆ'- ಈ ವಿಷಯಗಳನ್ನು ಚರ್ಚಿಸುವ ಎರಡು ಮುಖ್ಯ ಗೋಷ್ಠಿಗಳು ಇರಬೇಕು ಎನ್ನುವುದು ಸ್ಪಷ್ಟವಾಗಿತ್ತು. ಎರಡು ಮುಖ್ಯ ಗೋಷ್ಠಿಗಳಲ್ಲಿ ಚರ್ಚೆಯಾಗಬೇಕಾದ ವಿಷಯಗಳು ನೇರವಾಗಿಯೂ, ಖಚಿತವಾಗಿಯೂ ಇರುವುದು ತುಂಬ ಅಗತ್ಯವಾಗಿತ್ತು; ಹಾಗಿದ್ದಾಗ ಮಾತ್ರ ವಿಷಯ ಮಂಡನೆ ಮಾಡುವವರು ಸರಳವಾಗಿ, ದಿಟ್ಟವಾಗಿ ನಮ್ಮ ಎದುರು ಇರುವ ಆತಂಕಗಳನ್ನು ನಿರೂಪಿಸುವುದಕ್ಕೆ ಸಾಧ್ಯವಿತ್ತು. ಜೊತೆಗೆ, ಪ್ರಸ್ತುತ ವಿಷಯಗಳ ಬಗ್ಗೆ ಮಾತನಾಡುವವರು, ಸಮ್ಮೇಳನದ ಆಶಯಗಳನ್ನು ತಮ್ಮ ವಿಷಯ ಮಂಡನೆಯ ಮೂಲಕವೇ ಸಾಕಾರಗೊಳಿಸುವಂತಹ ಜನರಾಗಬೇಕಿತ್ತು; ಇಂಥ ಕೆಲಸ ನಿಭಾಯಿಸಲು ಚಳವಳಿಗಳ ಸಖರಾದ ವಿದ್ವತ್ ಜನವೇ ಬೇಕು. ಅಂತಹವರು ಕರ್ನಾಟಕದಲ್ಲಿ ಇರುವುದು ಮತ್ತೂ ನಮ್ಮ ಆಹ್ವಾನವನ್ನು 'ತಮ್ಮ ಕರ್ತವ್ಯ' ಎಂದು ತಿಳಿದು 'ಸೌಹಾರ್ದ ಸಾಹಿತ್ಯ ಸಮ್ಮೇಳನ'ದಲ್ಲಿ ಭಾಗವಹಿಸುವುದಕ್ಕೆ ಅವರು ಒಪ್ಪಿಕೊಂಡದ್ದೂ ನಮ್ಮ ಕಸುವನ್ನು ಒಂಚೂರು ಹೆಚ್ಚಿಸಿತು.

ಡಿಸೆಂಬರ್ 9ರಂದು ಹಿರಿಯ ಕವಿ-ಸಂಘಟಕ ಎಚ್.ಗೋವಿಂದಯ್ಯ (ಉದ್ಘಾಟನೆ), ಜನಪರ ಚಳವಳಿಗಳ ಗುರು ಜಿ.ರಾಮಕೃಷ್ಣ (ಅಧ್ಯಕ್ಷತೆ), ಚಳವಳಿಗಳನ್ನು ತಮ್ಮ ಬೌದ್ಧಿಕ ಬದುಕಿನ ಜೊತೆ ಹೆಣೆದುಕೊಂಡಿರುವ ಎಚ್.ಪಟ್ಟಾಭಿರಾಮ ಸೋಮಯಾಜಿ, ಡಾ. ರಹಮತ್ ತರಿಕೆರೆ, ಕೆ.ಎಲ್.ಅಶೋಕ್, ಗೋಪಾಲ ಬಿ.ಶೆಟ್ಟಿ ('ಕೋಮುವಾದ' ಕುರಿತ ಗೋಷ್ಠಿ), ಶಿವಸುಂದರ್, ಜಯಂತ್ ಪಡುಬಿದ್ರೆ, ಉಪೇಂದ್ರ ಹೊಸಬೆಟ್ಟು, ಅಮೃತಾ ಆತ್ರಾಡಿ, ಹಯವದನ ಮೂಡುಸಗ್ರಿ ಹಾಗು ಡಾ.ನರೇಂದ್ರ ನಾಯಕ್ ('ಜಾಗತೀಕರಣ ಮತ್ತು ಆರ್ಥಿಕ ಅಸಮಾನತೆ' ಕುರಿತ ಗೋಷ್ಠಿ), ಶ್ರೀಮತಿ ಸಾರಾ ಅಬೂಬಕರ್ (ಸಮಾರೋಪ) - ಇವರುಗಳೆಲ್ಲ ಮಾತಿಗೆ ತಪ್ಪದೇ ಬಂದರು, ಸಮ್ಮೇಳನದಲ್ಲಿ ಭಾಗವಹಿಸಿದ್ದ 2 ಸಾವಿರ ಜನರ ಬುದ್ಧಿ-ಭಾವಗಳನ್ನು ಮೀಟುವ ಮಾತುಗಳನ್ನಾಡಿದರು. ಈ ಮಾತುಗಳನ್ನು ನಾನು ಸ್ವಾಗತ ಸಮಿತಿಯ ಸದಸ್ಯನಾಗಿ ಅಲಂಕಾರಿಕ ವಿನಯದಿಂದ ಹೇಳುತ್ತಿಲ್ಲ; ಹಾಗೆಯೇ ಸ್ವಾಗತ ಸಮಿತಿಯ ಅಧ್ಯಕ್ಷರಾದ ಜಿ.ರಾಜಶೇಖರ್ 'ವಾರ್ತಾಭಾರತಿ' ದಿನಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ 'ಬಂಡಾಯದ ಕಾಲ ಮತ್ತೊಮ್ಮೆ ಕೂಡಿಬಂದಿದೆ' ಎಂದದ್ದು ಹುಸಿ ಹುಮ್ಮಸ್ಸಿನಿಂದ ಅಲ್ಲ. ಸಾಧಾರಣವಾಗಿ, ಸಭೆಗಳಲ್ಲಿ ಮಾತನಾಡುವವರು (ಎಡಪಂಥೀಯರೂ ಸಹ) ತನ್ನ ಎದುರಿರುವ ಸಭಿಕರನ್ನು ಉದ್ದೇಶಿಸಿ ಮಾತುಗಳನ್ನಾಡುತ್ತಾರೆ; ಆ ನಮೂನೆಯ ಮಾತುಗಾರಿಕೆಯಲ್ಲಿ

ಭಾಷಣಕಾರನಿಗೆ ತನ್ನ ಕಿವಿಗೇ ತನ್ನ ಮಾತನ್ನು ಕೇಳಿಸು
ತನ್ನ ಅಂತರಂಗದ ಅನುಮಾನಗಳ ಕಡೆ ಕಣ್ಣು ನೆಡು
ಗುಣವಿರುವುದಿಲ್ಲ. ಕಾಲ
ಸಿಟ್ಟು-ದುಗುಡ-ಅಸಭ್ಯತೆ-ಕರುಣಾಹೀನತೆಯ
ಕೇಳುಗರ ಹಾಗೆ ಹೇಳುತ್ತಿರುವ ತಾ
ಅನುಭವಿಸುತ್ತಿದ್ದೇನೆ ಎಂಬ ಅರಿವಿನಲ್ಲಿ ಮಾತಿಗೆ
ಗುಣ ದಕ್ಕುತ್ತದೆ. ಬಂಡಾಯ ಸಾಹಿತ್ಯ ಸಂಘಟನೆ
ಪ್ರಾರಂಭಿಕ ದಿನಗಳಲ್ಲಿ ನಾವು ಏಕಕಾಲಕ್ಕೆ ಅಂತರ
ಹಾಗು ಬಹಿರಂಗಗಳನ್ನುದ್ದೇಶಿಸಿ ಆಡುತ್ತಿದ್ದ ಮಾತುಗಳ
ಕೇಳುತ್ತಿದ್ದೆವು; ನಂತರದಲ್ಲಿ ಆ 'ಒಳಧ್ವನಿ'ಯ ಒತ್ತಾಯ
ಕಳೆದುಹೋಯಿತು. ಗೋವಿಂದಯ್ಯ ತಮ
ಉದ್ಘಾಟನಾ ಭಾಷಣವನ್ನು ಆ 'ಒಳಧ್ವನಿ'ಯ ಆತಂಕ
ನಿರೂಪಣೆಯಾಗಿಸಿದ ಗಳಿಗೆಯಿಂದ ಶುರುವಾ
ಸಮ್ಮೇಳನದ ಮುಕ್ತಾಯದವರೆಗೂ, ಮಾತನಾಡಿ
ಎಲ್ಲರೂ ಆ ತುರ್ತಿನಿಂದಲೇ ಮಾತನಾಡಿದರು.

ಸಮ್ಮೇಳನದಲ್ಲಿ ಮಂಡಿತವಾದ ವಿಷಯಗಳ ಸಂಕ್ಷಿ
ವರದಿಯ ಬದಲಾಗಿ, ಅಲ್ಲಿ ಆಡಿದ ಮಾತುಗಳ ಗುಣ
ಬಗ್ಗೆ ಹೆಚ್ಚು ಹೇಳುತ್ತಿರುವುದಕ್ಕೆ ಕಾರಣವಿದೆ. ನಿಜವಾ
ಸಾಹಿತ್ಯ ನಮ್ಮ ಊರು-ಕೇರಿಗಳ ಕಾರುಣ್ಯ ಹೇಗೋ
ಹಾಗೇ ಕರಾಳತೆಯ ಕಡೆಗೂ ಸದಾ ದೃಷ್ಟಿ ನೆಟ್ಟಿರುತ್ತ
ಹೀಗೆ ಕಂಡದ್ದನ್ನು ಲೋಕದ ಕತೆಯಾಗಿ ಹೇಳುತ್ತಲೆ
ನಮ್ಮ ಸುತ್ತಲಿನ ಬದುಕಿನ ನ್ಯಾಯ-ಅನ್ಯಾಯಗಳನ
ನಿರೂಪಿಸುವುದು ಸಾಹಿತ್ಯದ ಲೋಕ ಧರ್ಮವ
ಆಗಿಬಿಡುತ್ತದೆ. ಕ.ಸಾ.ಪ.ದ. 74 ನೇ ಸಾಹಿತ್ಯ ಸಮ್ಮೇಳ
'ಸಾಹಿತ್ಯದ ಲೋಕಧರ್ಮ'ವನ್ನು ಕಡೆಗಾಣಿಸಿರುವುದನ
ಪ್ರತಿಭಟಿಸುವುದಕ್ಕಾಗಿಯಲ್ಲವೆ ನಾವು 'ಸೌಹಾರ್ದ
ಸಾಹಿತ್ಯ ಸಮ್ಮೇಳನ'ವನ್ನು ಸಂಘಟಿಸಿದ್ದು? ಸಮ್ಮೇಳನದ
ಮಾತನಾಡಿದವರು, ತಮ್ಮ ಪ್ರತಿ ನುಡಿಯಲ
'ಸಾಹಿತ್ಯದ ಲೋಕಧರ್ಮ'ದ ಪ್ರಜ್ಞೆಯನ್ನು ಹೇಗೆ ಜಾಗೃ
ವಾಗಿಟ್ಟುಕೊಂಡಿದ್ದರು ಎನ್ನುವುದಕ್ಕೆ ಒಂದು ಉದಾಹರ

ಕೊಡವ ಭಾಷೆ ಮಾತನಾಡುವ ಬೇರೆ ಜಾತಿಯ ಜನಕ್ಕೆ ಇದರಲ್ಲಿ ಯಾವುದೇ ಕೆಲಸವಿಲ್ಲ. ಇತರ ಸಮುದಾಯದಲ್ಲಿ ನಡೆಸಿದ ಆಟೋಟ ಕೂಟದಲ್ಲಿ ಸಹ 'ಕೊಡವ ಜಾತಿ'ಯ ಜನಕ್ಕೆ ಪ್ರತ್ಯೇಕ ಸ್ಪರ್ಧೆ. ಅವರಿಗೆ ಅತಿದೊಡ್ಡ ಕೊಡುಗೆಯೆಂದರೆ ಜಾತಿ ವರ್ಗೀಕರಣ ಅನೂಚಾನವಾಗಿ ನಡೆಯುವ ಭರವಸೆಯೊಂದಿಗೆ ದುಡಿ, ವಾಲಗಗಳ ಉಚಿತ ನೀಡುವಿಕೆ. ವರ್ಗವ್ಯವಸ್ಥೆಯನ್ನು ಸದೃಢ ಪಡಿಸುವ ಆಶಯವಿರುವ ನಡಿಕೇರಿಯಂಡ ಚಿಣ್ಣಪ್ಪ ಎನ್ನುವವರು ಬರೆದ ಹಳೆಯ ಕೃತಿ 'ಪಟ್ಟೋಲೆ ಪಳಮೆ'ಯನ್ನು ಕೊಡಗಿನ ಬೈಬಲ್ ಎಂಬಂತೆ ಪ್ರತಿಬಿಂಬಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ.


ಉಳ್ಳಿಯಡ ಪೂವಯ್ಯ

ಈ ತನಕ ಅಕಾಡೆಮಿಯ ಸದಸ್ಯರಾಗಿ ಆಯ್ಕೆಗೊಂಡ ಏಕೈಕ ದಲಿತ ಸಮುದಾಯದ ವ್ಯಕ್ತಿಯೆಂದರೆ ಸೃಜನಶೀಲ ಕಲಾವಿದ ಮತ್ತು ಜಾನಪದ ಜ್ಞಾನಸಂಪನ್ನ ಹೆಚ್.ಮುದ್ದು. ಆದರೆ ಸಭೆ ಸಮಾರಂಭಗಳಲ್ಲಿ ಪ್ರಾರ್ಥನೆಯ ಸಮಯ ದುಡಿ ಹೊಡೆಯುವುದು ಮತ್ತು ಉಳಿದ ವೇಳೆ ಇತರ ಸದಸ್ಯರ ಸಾಮಗ್ರಿಗಳನ್ನು ಹೊತ್ತೊಯ್ಯುವುದು, ಅಂಗಡಿಯಿಂದ ಸಿಗರೇಟ್ ತರುವುದು ಮಾತ್ರ ಆತನ ಕೆಲಸವಾಗಿತ್ತು. ಇಂತಹ ಹೆಚ್.ಮುದ್ದು ಪ್ರತಿನಿಧಿಸುವ ಜಾತಿಯ ಮತ್ತು ಇತರೆ ಕೊಡವ ಭಾಷೆಯನ್ನಾಡುವ ಜಾತಿಗಳ ಜಾನಪದ ಸಮೃದ್ಧಿಯನ್ನು ಕಲೆಹಾಕುವ, ವ್ಯವಸ್ಥಿತವಾಗಿ ವೈಜ್ಞಾನಿಕ ಚೌಕಟ್ಟಿನಲ್ಲಿಟ್ಟು ಅವುಗಳಿಗಿರುವ ಸ್ಥಾನ ಮತ್ತು ಮೌಲ್ಯವನ್ನು ನಿರ್ಧರಿಸುವ ಕೆಲಸ ಇನ್ನೂ ನಡೆದಿಲ್ಲವೆಂದರೆ ಈ ಅಕಾಡೆಮಿಯ ಅನಗತ್ಯತೆಯ ಬಗ್ಗೆ ಇನ್ನೊಂದು ಮಾತು ಬೇಕಿಲ್ಲ.


ಕೊಡವ ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮಗಳು ಹಿಂದೆ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ತೆಕ್ಕೆಯಲ್ಲಿಟ್ಟುಕೊಂಡಿದ್ದು ಇನ್ನೊಂದು ವೈಪರಿತ್ಯ. ಪೊನ್ನಂಪೇಟೆಯಲ್ಲಿ ನಡೆದ ಕೊಡವ ಮೇಳದ ಮೆರವಣಿಗೆಯಲ್ಲಿ ಪ್ರತ್ಯೇಕವಾದಿಗಳು ಬ್ಯಾನರ್ ಹಿಡಿದು ಭಾಗವಹಿಸಲು ಮತ್ತು ಕರ್ನಾಟಕ ವಿರೋಧಿ ಘೋಷಣೆಗಳನ್ನು ಕೂಗಲು ಅನುಮತಿ ನೀಡಲಾಗಿತ್ತು. ಅಲ್ಲದೆ ಅಂದಿನ ಕಾರ್ಯಕ್ರಮದಲ್ಲಿ ಕರ್ನಾಟಕದ ಪೊಲೀಸ್ ಅಧಿಕಾರಿಯಾಗಿದ್ದ ವ್ಯಕ್ತಿಯೊಬ್ಬ ಜಾತಿ ವಿರೋಧಿಗಳ ವಿರುದ್ಧ ಫತ್ವಾ ಹೊರಡಿಸುವ ಅಧಿಕಾರವಿರುವ ಸಿಖ್ ಸಮುದಾಯದ 'ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ' ತರಹ ಕೊಡವರಿಗೂ ಒಂದು ಪರಮಾಧಿಕಾರದ ಸಂಸ್ಥೆಯನ್ನು ಹುಟ್ಟುಹಾಕಬೇಕೆಂದು ಆಗ್ರಹಿಸಿದ್ದ. ಇಂತಹ ಅತಿರೇಕಗಳಿಗೆ ವೇದಿಕೆಯಾದ ಅಕಾಡೆಮಿಯ ಕಾರ್ಯವೈಖರಿ ಇಂದಿಗೂ ವೈಚಾರಿಕ ಬದಲಾವಣೆಗೆ ಈಡಾಗಿಲ್ಲ.

ಈ ಹಿಂದೆ ಅಕಾಡೆಮಿಯ ವ್ಯವಹಾರದಲ್ಲಿ ಹಲವಾರು ಅವ್ಯವಹಾರಗಳು ನಡೆದಿವೆ. ಅಕಾಡೆಮಿಯ ಸದಸ್ಯರಿಗೇ ಸಂಸ್ಕೃತಿ ಅಧ್ಯಯನದ ಹೆಸರಲ್ಲಿ ಹಣ ಬಿಡುಗಡೆ ಮಾಡಲಾಗಿದೆ. ಇಂತಹ ಅಕ್ರಮಗಳನ್ನು ಪ್ರಶ್ನಿಸಿದ ಮತ್ತು ಪ್ರಜಾಸತ್ತಾತ್ಮಕವಾಗಿ ಕಾರ್ಯನಿರ್ವಹಿಸಬೇಕೆಂದು ಆಗ್ರಹಿಸಿದ ಕುಶಾಲನಗರದ ನೀಲಮ್ಮ ಎಂಬ ಪ್ರಾಮಾಣಿಕ ಹೆಣ್ಣುಮಗಳು ಅಕಾಡೆಮಿಯ ಸಭೆಗಳಲ್ಲಿ ಭಾಗವಹಿಸದಂತೆ ಬಹಿಷ್ಕಾರಕ್ಕೆ ಒಳಗಾದದ್ದೂ ಇಲ್ಲಿ ನಡೆದಿದೆ.

ತನ್ನ ಗಂಡ ಉಳ್ಳಿಯಡ ಪೂವಯ್ಯನವರ ದೋಚುವ ಕ್ರಿಯೆಯ ಭಾಗವಾಗಿರುವ ಇಂದಿನ ಅಧ್ಯಕ್ಷೆ ಡಾಟ ಪೂವಯ್ಯ, ಡಿಸೆಂಬರ್ ತಿಂಗಳಲ್ಲಿ ನಡೆಯಬೇಕಿದ್ದ 'ವಿಶ್ವ ಕೊಡವ ಮೇಳ'ದ ಹೆಸರಲ್ಲಿ ಲೂಟಿ ಮಾಡುವ ಉದ್ದೇಶದಿಂದ ಬೇರೆಬೇರೆ ವಿಧಾನಗಳ ಮೂಲಕ ಒಂದೂವರೆ ಕೋಟಿ ರೂ. ಸಂಗ್ರಹಿಸಿ ಸಿಕ್ಕಿಬಿದ್ದು ಸೋಬಾನೆ ಹೇಳುವಾಗ ಹೂಸುಬಿಟ್ಟ ಹೆಂಗಸಿನಂತಾಗಿದ್ದಾರೆ.

ಈ ಡಾಟ ಪೂವಯ್ಯ ಅಧ್ಯಕ್ಷೆಯಾದದ್ದೇ ಮತ್ತೆ ಜಾತಿಯ ಪ್ರಭಾವದಿಂದ. ನಿಜಕ್ಕೂ ಆಗ ಅಧ್ಯಕ್ಷರಾಗಿ ನಿಯುಕ್ತಿಗೊಂಡಿದ್ದವರು ಕೊಡಗಿನ ಅಪರೂಪದ ವಿದ್ವಾಂಸ, ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ತಂಬಂಡ ವಿಜಯ್ ಪೂಣಚ್ಚ ಅವರು ಆಯ್ಕೆಗೊಂಡ ಆದೇಶ ಹೊರಬಿದ್ದು ಹೆಗ್ಗಡೆ ಸಮುದಾಯದ ತಂಬಂಡ ವಿಜಯ್ ಪೂಣಚ್ಚ ಅಧ್ಯಕ್ಷರೆಂದು ರಾಜ್ಯಾದ್ಯಂತ ಟಿ.ವಿ., ಪತ್ರಿಕೆಗಳಲ್ಲಿ ವರದಿಯಾದ ನಂತರ ಅದು ಯಾವ ಸಂದುಗೊಂದಿಗಳಲ್ಲಿ ನುಸುಳಿದರೋ ದಿನ ಬೆಳಗಾಗುವುದರೊಳಗೆ ಡಾಟ ಪೂವಯ್ಯ ಅಧ್ಯಕ್ಷ ಗಾದಿಯನ್ನು ಅಲಂಕರಿಸಿಬಿಟ್ಟರು.

ಸುಳ್ಳು ವೋಚರ್ ಸೃಷ್ಟಿಸಿ, ಕಾನೂನುಬಾಹಿರವಾಗಿ ಲಾಟರಿ ಟಿಕೆಟ್ ಮುದ್ರಿಸಿ ಡಾಟ ಪೂವಯ್ಯ ವಂಚನೆಗೆ ಇಳಿದಿದ್ದಾರೆಂದು ಈಗ ಆಕೆಯ ವಿರುದ್ಧ ತೀವ್ರ ದಾಳಿಯಲ್ಲಿ ತೊಡಗಿರುವಾತ ರಂಗಕರ್ಮಿ ಎಂಬ ಆಪಾದನೆಯನ್ನು ಹೊಂದಿರುವ ಅಡ್ಡಂಡ ಕಾರ್ಯಪ್ಪ ಎನ್ನುವ ವ್ಯಕ್ತಿ. ಈ ಹಿಂದೆ ಈತ ಎರಡು, ಮೂರು ಬಾರಿ ಅಕಾಡೆಮಿಯ ಅಧ್ಯಕ್ಷನಾಗಲು ಪ್ರಯತ್ನಿಸಿ ಹತಾಶನಾಗಿದ್ದ. ಅಷ್ಟೇ ಅಲ್ಲ, ಈ ಹಿಂದೆ ಪ್ರತ್ಯೇಕತಾವಾದಿಗಳ ವೈಚಾರಿಕ ಮಿದುಳಾಗಿದ್ದ ಪ್ರತ್ಯೇಕತಾವಾದಿ ಕೆ.ಆರ್.ಎಂ.ಎಂ. ಸಂಘಟನೆಯ ಮುಖವಾಣಿಯಾಗಿದ್ದವನೀತ. ಕೆ.ಆರ್.ಎಂ.ಎಂ.ನ ಸ್ಥಾಪಕ ನಂದಿನೆರವಂಡ ನಾಚಪ್ಪ ಮತ್ತು ಅಡ್ಡಂಡ ಕಾರ್ಯಪ್ಪ ಎಂಬ ಅನಾಹುತಕಾರಿಗಳು ಕೊಡಗಿನಲ್ಲಿ 'ಜೂನ್-ಜುಲೈ' ಎಂದೇ ಎಲ್ಲರಿಗೂ ಪರಿಚಿತರು.


ಅಡ್ಡಂಡ ಕಾರ್ಯಪ್ಪ

ಅಡ್ಡಂಡ ಕಾರ್ಯಪ್ಪ ಕೆ.ಆರ್.ಎಂ.ಎಂ. ತೆಕ್ಕೆಯಿಂದ ಹೊರಬಂದದ್ದೇ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆಯ ಆಸೆಯಿಂದ. 'ವೀರನಾಡು' ಎಂಬ ಪೀತಪತ್ರಿಕೆಯ ಮೂಲಕ ಬ್ಲ್ಯಾಕ್‌ಮೇಲ್ ಪತ್ರಿಕೋದ್ಯಮ ನಡೆಸುವ ಈತ ಈಗ ಸಜ್ಜನನ ಪೋಸು ಕೊಡುತ್ತಿರುವುದು ಸಹ ಅಪಾಯಕಾರಿ. ಮೊದಲು ಕುಚೇಲನಂತಿದ್ದ ಅಡ್ಡಂಡ ಕಾರ್ಯಪ್ಪ ವಿಧಾನ ಪರಿಷತ್ ಸದಸ್ಯ ಚೆಪ್ಪುಡಿರ ಅರುಣ್ ಮಾಚಯ್ಯನವರ ಚೇಲನಾದ ನಂತರ ಕುಬೇರನಾಗುವತ್ತ ದಾಪುಗಾಲಿಟ್ಟಿದ್ದಾನೆ. ಊರಿಗೆ ಬುದ್ಧಿವಾದ ಹೇಳುವಂತೆ ಬರೆಯುವ ಈತ ತನ್ನ ಹೆಂಡತಿ ಅನಿತಾ ಕಾರ್ಯಪ್ಪಗೆ ಅರ್ಹತೆ ಇಲ್ಲದಿದ್ದರೂ ಪೊನ್ನಂಪೇಟೆಯ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನಲ್ಲಿ ಅಕೌಂಟೆಂಟ್ ಕೆಲಸ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾನೆ. ಅರುಣ್ ಮಾಚಯ್ಯ ಪ್ರಭಾವದಿಂದ ಅನಿತಾ ಕಾರ್ಯಪ್ಪ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಯನ್ನೂ ಬಾಚಿಕೊಂಡಿದ್ದಾರೆ.

ಅಡ್ಡಂಡ ಕಾರ್ಯಪ್ಪ ಜೆ.ಡಿ.ಎಸ್. ಪಕ್ಷದಿಂದ ತಾಲೂಕು ಪಂಚಾಯತ್ ಸದಸ್ಯರಾಗಿರುವುದರ ಜೊತೆಗೆ ಮಡಿಕೇರಿ ಆಕಾಶವಾಣಿಯಲ್ಲಿ ಕೊಡವ ಭಾಷೆಯ 'ಸುದ್ದಿ ಸಮಾಚಾರ' ಎಂಬ ಕಾರ್ಯಕ್ರಮದಲ್ಲಿ ಅರುಣ್ ಮಾಚಯ್ಯನವರ ಪ್ರಚಾರ ಏಜಂಟರಾಗಿಯೂ ಕೆಲಸ ಮಾಡುತ್ತಾರೆ!

ಉಳ್ಳಿಯಡ ಪೂವಯ್ಯ ಮತ್ತು ಡಾಟ ಪೂವಯ್ಯನವರ ಎಂಜಲುಕಾಸಿಗೆ ಆಸೆ ಪಟ್ಟು ಇಲ್ಲಿಯತನಕ ತೆಪ್ಪಗಿದ್ದ ಅಕಾಡೆಮಿಯ ಹಲವು ಸದಸ್ಯರು ಈಗ ತುರ್ತಾಗಿ ಈ ಅವ್ಯವಹಾರಕ್ಕೂ ತಮಗೂ ಸಂಬಂಧವಿಲ್ಲವೆಂದು ಹೇಳಿ ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಡಲು ತೊಡಗಿದ್ದಾರೆ. ನಾಗೇಶ್ ಕಾಲೂರು ಎಂಬ ಐನಾತಿ ಬ್ರಾಹ್ಮಣ ತನಗೆ ಕೆಲವು ತಿಂಗಳುಗಳಿಂದ ಆರೋಗ್ಯ ಹದಗೆಟ್ಟದ್ದು ಕೈಕಾಲು, ತಲೆ ಯಾವುದೂ ಓಡುತ್ತಿಲ್ಲ ಎಂಬ ನೆಪವೊಡ್ಡಿ ರಾಜಿನಾಮೆ ಕೊಟ್ಟಿದ್ದಾರೆ. ಆದರೆ ಅತ್ಯಂತ ಅನಾರೋಗ್ಯಪೀಡಿತನಾದ ಈತ ಇದೇ ಡಿಸೆಂಬರ್ 14 ರ ಬೆಳಿಗ್ಗೆ 7.30ಕ್ಕೆ ಮಡಿಕೇರಿ ಆಕಾಶವಾಣಿಯಿಂದ ಅತ್ಯಂತ ಯಾತನೆಯಿಂದ 'ಸುದ್ದಿ ಸಮಾಚಾರ' ಓದಿದ್ದಾರೆ! ಪಾಪ ಅಷ್ಟೊಂದು ಆರೋಗ್ಯ ಕೆಟ್ಟಿದೆ.

ಕೊಡವ ಅಕಾಡೆಮಿಯ ಅವ್ಯವಹಾರಗಳ ತನಿಖೆ ನಿಜಕ್ಕೂ ಅಗತ್ಯವಾಗಿದೆ. ಅದರೊಂದಿಗೆ ಅಡ್ಡಂಡ ಕಾರ್ಯಪ್ಪನವರ ಅವ್ಯವಹಾರ, ಬ್ಲ್ಯಾಕ್‌ಮೇಲ್‌ಗಳ ಸಮಗ್ರ ತನಿಖೆಯೂ ಆಗಬೇಕಿದೆ.

■ ವರದಿಗಾರ

ಕೊಡುತ್ತೇನೆ. ಪಟ್ಟಾಭಿರಾಮ ಸೋಮಯಾಜಿ ತಮ್ಮ ಭಾಷಣದಲ್ಲಿ, ಮಂಗಳೂರು ಸಮೀಪದ ಬಜ್ಪೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ "SEZ ಬಗ್ಗೆ ಪ್ರಸ್ತಾಪಿಸಿದರು. ಅಲ್ಲಿ ಸರಕಾರ ಜನರ ಪ್ರತಿರೋಧವನ್ನೂ ಲೆಕ್ಕಿಸದೆ ಹೇಗೆ ಅಧಿಕಾರದ ಭಾಷೆಯಲ್ಲಿ ಮಾತನಾಡುತ್ತಿದೆ ಎನ್ನುವುದನ್ನು ತಿಳಿಸುವುದಕ್ಕೆ ಪಟ್ಟಾಭಿ ಕೊಟ್ಟ ರೂಪಕ ಇದು : 'SEZ ನ ಅಧಿಕಾರಿಗಳು ಇಡಿ ಊರನ್ನೇ ನಕ್ಷೆಗೆ ಇಳಿಸಿ, ನಕ್ಷೆಯನ್ನು ತಮ್ಮ ಕೈವಶ ಮಾಡಿಕೊಂಡುಬಿಟ್ಟಿದ್ದಾರೆ. ಊರ ಜನರಿಗೆ ಕೇರಿ, ರಸ್ತೆ, ಮನೆಗಳು ಬದುಕಿನ ಜೀವಂತ ಅಂಗಗಳಾದರೆ, ಅಧಿಕಾರಿಗಳಿಗೆ ಅವು ಬರಿ ನಕ್ಷೆಯ ಮೇಲಿನ ಗೆರೆಗಳು. ಹಾಗಾಗಿ ಅಧಿಕಾರಿಗಳಿಗೆ ಊರನ್ನು ಕಸಿದುಕೊಳ್ಳುವುದರ ಬಗ್ಗೆ ಯಾವ ಗೊಂದಲವೂ ಇಲ್ಲ; ಆದರೆ, ಜನರಿಗೆ ಹಾಗಲ್ಲವಲ್ಲ?". ಹೀಗೆ ಹೇಳಿ ಪಟ್ಟಾಭಿ ತನ್ನ ವಿಶಿಷ್ಟ ಶೈಲಿಯಲ್ಲಿ "ಐ ಮೀನ್... ಇದು ಏನು ಅಂಥ ನಾವು ಅರ್ಥ ಮಾಡ್ಕೋ ಬೇಕು. . . ಭಾಷೆಯಲ್ಲಿಯೇ ವ್ಯತ್ಯಾಸವಿದೆ ಸಾರ್! ನೋಡಿ (ಕಸಾ.ಪ.ದ 74ನೇ) ಸಾಹಿತ್ಯ ಸಮ್ಮೇಳನ ಮಾಡುತ್ತಿರುವವರಿಗೆ ಸಾಹಿತ್ಯ ಅಂದ್ರೆ ಏನು, ಒಂದು ಅಚ್ಚುಕಟ್ಟಾದ ಸಂಗೀತ ಕಾರ್ಯಕ್ರಮ... ಅದೇನೋ ಹೇಳ್ತರಲ್ಲ ಒಂದು ಇವೆಂಟ್ ಮ್ಯಾನೇಜ್‌ಮೆಂಟ್... ಇದು, ಇದು ಅಸಹ್ಯ" ಎಂದರು. ಪಟ್ಟಾಭಿ ಮಾತನಾಡುತ್ತಿದ್ದದ್ದು 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ಕುರಿತಾಗಿ. ಈ ವಿಷಯ ಬಂದಾಕ್ಷಣ ನಮ್ಮ ನಾಲಿಗೆಗೆ ತಕ್ಷಣ ಬರುವುದು ಬರಹಗಾರರ ಅಭಿವ್ಯಕ್ತಿ ಸ್ವಾತಂತ್ರ್ಯದ ಉದಾಹರಣೆಗಳು. ಆದರೆ ಪಟ್ಟಾಭಿ 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ದಮನವನ್ನು, ಸರಕಾರದ ಯಜಮಾನಿಕೆಗೆ ಊರು, ಕೇರಿಗಳನ್ನು ಕಳೆದುಕೊಳ್ಳಲು ನಿರಾಕರಿಸುವ ಜನರ ಕ್ರಮವನ್ನೇ ಮುಟ್ಟುವ ಪರಿಗೂ ವಿಸ್ತರಿಸಿ, ಪ್ರಸ್ತುತ ಕಲ್ಪನೆಗೆ ಹೊಸ ಸೂಕ್ಷ್ಮತೆಯನ್ನೇ ತಂದುಕೊಟ್ಟರು. ಬದುಕು, ಭಾಷೆ ಮತ್ತು ಸಾಹಿತ್ಯಗಳ ಕುರಿತಾಗಿ ಈ ರೀತಿಯ ಒಳನೋಟವನ್ನು ಇಟ್ಟುಕೊಂಡಿರುವುದರಿಂದಾಗಿ, ಸಮ್ಮೇಳನದಲ್ಲಿ ಮಾತನಾಡಿದ ಪ್ರತಿಯೊಬ್ಬರೂ ಕರ್ನಾಟಕದಲ್ಲಿ ನಡೆಯುತ್ತಿರುವ ಹಿಂಸೆಯ ವಿವಿಧ ಸ್ವರೂಪಗಳನ್ನು ತೆರೆದಿಟ್ಟರು.

ಕಾರ್ಯಗೌರವ ನಿಮಿತ್ತ ದೆಹಲಿಯಿಂದ ಉಡುಪಿಗೆ ಬಂದಿದ್ದ ಕನ್ನಡದ ದೊಡ್ಡ ಕವಿ ಹಾಗು ನಾಟಕಕಾರ ಎಚ್.ಎಸ್. ಶಿವಪ್ರಕಾಶ್, ಸ್ವಂತ ಆಸಕ್ತಿಯಿಂದ ಸಮ್ಮೇಳನಕ್ಕೆ ಬಂದಿದ್ದರು. ನಮ್ಮ ಕೋರಿಕೆಯ ಮೇರೆಗೆ ಸಮಾರೋಪ ಸಮಾರಂಭದಲ್ಲಿ ಚುರುಕಾಗಿ ಮಾತನಾಡಿದರು.

74ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಪ್ರತಿಭಟಿಸುವ ನಮ್ಮ ಕಾರ್ಯಕ್ರಮವನ್ನು ಕೆಲವು ಸನ್ಮಿತ್ರರು ಟೀಕಿಸಿದ್ದಾರೆ. ಲೋಹಿಯಾವಾದಿ ಮಿತ್ರರೊಬ್ಬರು ಜಿ.ರಾಮಕೃಷ್ಣರ 'ಸಾಹಿತ್ಯಿಕ ಮಹತ್ವ'ವನ್ನು ಪ್ರಶ್ನಿಸಿದ್ದಲ್ಲದೆ, ನಮ್ಮ ಸಮ್ಮೇಳನ 'ಅಸಾಹಿತ್ಯಿಕ ನೆಲೆ'ಯ ಪ್ರಚಾರಪ್ರಿಯರ ಸಮ್ಮೇಳನ ಎಂದೂ ಟೀಕಿಸಿದ್ದಾರೆ. ಹಾಗೇ ನೋಡಿದರೆ ನಮ್ಮ ಸಮ್ಮೇಳನದ 'ಅಸಾಹಿತ್ಯಿಕ ನೆಲೆ' ವಿಸ್ತಾರವಾಗಿಯೇ ಇತ್ತು- ಸಮ್ಮೇಳನದ ದ್ವಾರಗಳಿಗೆ ನಾವು 'ಸಾಹಿತ್ಯಿಕ ಮಹತ್ವ'ವಿಲ್ಲದ ಕೆ.ರಾಮದಾಸ್ ಹಾಗು ವಡ್ಡರ್ಸೆ ರಘುರಾಮಶೆಟ್ಟರ ಹೆಸರು ಇಟ್ಟಿದ್ದೆವು; ಸಮ್ಮೇಳನದ ವೇದಿಕೆಗೆ ಉಡುಪಿಯ ಜನ ತಂಪು ಹೊತ್ತಿನಲ್ಲಿ ನೆನೆಯಬೇಕಾದ ಸಭ್ಯ ಸಂಸಾರಸ್ಥ ಹಾಜಿ ಅಬ್ದುಲ್ ಸಾಹೇಬರ ಹೆಸರಿಟ್ಟಿದ್ದೆವು; ಜೊತೆಗೆ ಧರ್ಮಾಧಿಕಾರಿಗಳು, ಶ್ರೀಶ್ರೀ ಮಠಾಧೀಶರ ಬದಲಿಗೆ ಕವಿ ಗೋವಿಂದಯ್ಯ, ಕಾದಂಬರಿಕಾರರಾದ ಸಾರಾ ಅಬೂಬಕರ್ ಅವರನ್ನು ಉದ್ಘಾಟನೆ-ಸಮಾರೋಪಗಳಿಗೆ ಆಹ್ವಾನಿಸಿದ್ದೆವು; ಒಂದೂ ಕವನ ಸಂಕಲನ ಪ್ರಕಟಿಸಲಾಗದ ರಹಮತ್, ಪಟ್ಟಾಭಿಯಂತಹವರು ವಿಚಾರಮಂಡನೆ ಮಾಡಿದರು; ನಾಲ್ಕು ದಶಕಗಳ ಕಾಲ, ನೂರಾರು ಪ್ರಖ್ಯಾತ ಸಾಹಿತಿಗಳ ಸಹಿ ಸಂಗ್ರಹಿಸಿ ಅದನ್ನೇ ರಘುಗಮಗಿಸುವ ಪುಸ್ತಕವಾಗಿ ಅಚ್ಚು ಹಾಕಿ ಹಂಚುವ ಸಾಹಿತ್ಯ ಪ್ರತಿಭಾವಂತರ ಬದಲು, ಇದುವರೆಗೂ ಒಂದು ವಿಮರ್ಶಾ ಸಂಕಲನವನ್ನೂ ಪ್ರಕಟಿಸದ ಜಿ.ರಾಜಶೇಖರ್ ನಮ್ಮ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು! ಶಿವ, ಶಿವ ಎಂಥಾ 'ಅಸಾಹಿತ್ಯಿಕ ನೆಲೆ'!



ಇಷ್ಟು ಸಾಲದುಎಂಬಂತೆ ಪ್ರತಿಭಾವಂತ ಕವಿಮಿತ್ರರೊಬ್ಬರು ನಮ್ಮ ಸಮ್ಮೇಳನವು '74 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ'ಕ್ಕೆ 'ಅಡ್ಡಗಾಲು ಹಾಕುವ' ದುಷ್ಕೃತ್ಯವೆಸಗಿದ್ದನ್ನು ಖಂಡಿಸಿದ್ದಾರೆ; ಯಜಮಾನರು ತಿಕದ ಮೇಲೆ ಕಾಲಿಂದ ಜಾಡಿಸಿ ಒದ್ದರೆ, 'ಕ್ಷಮಿಸಿ, ತಮ್ಮ ಪಾದಾರವಿಂದಗಳಿಗೆ ನನ್ನ ತಿಕ ಅಡ್ಡಬರಬಾರದಿತ್ತು' ಎಂದು ಕ್ಷಮೆ ಕೋರೋಣವೇ- ಅದೇ ಈ ಕಾಲದ ಸಭ್ಯತೆಯೋ ಏನೋ? ಕವಿ ಮಿತ್ರರ ಮತ್ತಷ್ಟೂ ಗುರುತರವಾದ ಆರೋಪವೆಂದರೆ, 'ಕರಾವಳಿಯ ಜಿಲ್ಲೆಗಳು ಸೆನ್ಸಿಟಿವ್ ಆದ ಪ್ರದೇಶಗಳಾಗಿವೆ. ಉಡುಪಿಯ ಅಲ್ಪಸಂಖ್ಯಾತರು ನೆಮ್ಮದಿಯಿಂದ ಬದುಕುವುದು ಮುಖ್ಯ. ತಮ್ಮನ್ನೇ ತಾವು ಪ್ರಗತಿಪರರು ಎಂದು ಕರೆದುಕೊಳ್ಳುವವರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು.' ಕವಿಗಳ ಮಾತೂ ತೂಕದ್ದೇ; ಕಳೆದ ಹದಿನೈದು ವರ್ಷಗಳಿಂದ ಮನೆ-ಮಠಾರು ಸುಡಿಸಿಕೊಂಡು, ದೇಶಪ್ರೇಮಿಗಳಿಂದ ನಿತ್ಯವೂ ಒದೆ ತಿಂದು, ಗೆಳತಿಯ ಜೊತೆ ಮಾತನಾಡಿದ ಅಪರಾಧಕ್ಕೆ ಸ್ಥಳದಲ್ಲೇ ಶಿಕ್ಷೆ ಅನುಭವಿಸಿ, ವಿನಾಕಾರಣ ಪೊಲೀಸ್ ಸ್ಟೇಷನ್ ಅಲೆದು, ಉಡುಪಿಯ ಹೆಲಿಪ್ಯಾಡಿನಲ್ಲಿ ಬೆತ್ತಲೆಯಾಗಿ ಇನ್ನೂರು ಜನರೆದುರು ಮೂರು ತಾಸು ಒದೆ ತಿಂದು, ಇತ್ಯಾದಿ ವಿಧಾನಗಳಲ್ಲಿ ನೆಮ್ಮದಿಯ ಬದುಕು ಸಾಗಿಸುತ್ತಿರುವ ಅಲ್ಪಸಂಖ್ಯಾತರನ್ನು ಗಮನಿಸದೆ, ಈ ಊರುಗಳಲ್ಲಿ ಹೀಗಾಗುತ್ತಿರುವುದು ಅನ್ಯಾಯ ಮಾತ್ರವಲ್ಲ, ಪರಮ ನೀಚತನ ಎಂದು ಹೇಳಿ ನೆಮ್ಮದಿ ಕೆಡಿಸುವ ಬೇಜವಾಬ್ದಾರಿಯ ಕೆಲಸ ಮಾಡುವುದೇ? ಯೋಚಿಸಬೇಕಾದ್ದೇ.

ಪ್ರಖ್ಯಾತ ವಿದ್ವಾಂಸ, ವಿಮರ್ಶಕ ಹಾಗು 'ಪಬ್ಲಿಕ್ ಇಂಟೆಲೆಕ್ಚುವಲ್' ಎಡ್ವರ್ಡ್ ಸೈದ್ "ಅಧಿಕಾರದ ಮುಖಕ್ಕೆ ರಾಚುವ ಹಾಗೆ ಸತ್ಯವನ್ನು ಹೇಳುವುದು ಬುದ್ಧಿಜೀವಿಗಳ ಜವಾಬ್ದಾರಿ" ಎಂದು ಹೇಳಿದ್ದ. ಇನ್ನೊಬ್ಬ ಖ್ಯಾತ ಚಿಂತಕ ನೋಮ್ ಚೋಮ್‌ಸ್ಕಿ ಸೈದ್‌ನ ನಿಲುವನ್ನು ಮೆದುವಾಗಿ ಟೀಕಿಸಿ "ಅಧಿಕಾರಸ್ಥರ ಮುಖಕ್ಕೆ ಸತ್ಯವನ್ನು ಹೇಳಿ ಏನು ಪ್ರಯೋಜನ? ಸತ್ಯ ಅವರಿಗಾಗಲೇ ಗೊತ್ತಿದೆ! ಸತ್ಯವನ್ನು ತಿಳಿದು ಪರಿಸ್ಥಿತಿಯನ್ನು ಬದಲಾಯಿಸುವ ಶಕ್ತಿಯನ್ನುಳ್ಳ ಜನರೆದುರು ಸತ್ಯವನ್ನು ಹೇಳುವುದು ಬುದ್ಧಿಜೀವಿಯ ಜವಾಬ್ದಾರಿ" ಎಂದು ಹೇಳಿದ. 'ಸೌಹಾರ್ದ ಸಾಹಿತ್ಯ ಸಮ್ಮೇಳನ'ದ ಮೂಲಕ ನಾವು ಈ ರೀತಿಯ ಜವಾಬ್ದಾರಿಯನ್ನು ನಿಭಾಯಿಸಲು ಪ್ರಯತ್ನಿಸಿದ್ದೇವೆ ಅಷ್ಟೆ. ಇದನ್ನೂ ಮೀರಿದ ಮುತ್ಸದ್ದಿತನ, ರಾಜಕೀಯ ತಂತ್ರಗಳನ್ನು ಹೊತ್ತುಕೊಳ್ಳುವ ಹೆಗಲು ನಮ್ಮದಲ್ಲ. ಜಿ.ರಾಜಶೇಖರ್ ಹೇಳಿದ ಹಾಗೆ ನಮ್ಮ ಉದ್ದೇಶ ಸರಳವಾದದ್ದು, ನೇರವಾದದ್ದು: "74 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ವಯೋವೃದ್ಧರು, ಸಜ್ಜನರು. ತಣ್ಣಗೆ, ನುಣ್ಣಗೆ ಮಾತಾಡಿ ತಲೆ ಸವರಿಬಿಡುವವರು. ಅದೆಲ್ಲ ಸರಿ. ಹಾಗಂತ ಹದಿನೈದು ವರ್ಷಗಳಿಂದ ಇಲ್ಲಿ ನಡೆಯುತ್ತಿರುವ ಹಿಂಸೆ ಮಾಯವಾಗುವುದಿಲ್ಲ. (ನೆರೂದನ ಕವನ ಹೇಳುವ ಹಾಗೆ) ನೋಡಿ ಬೀದಿ ಮೇಲೆ ರಕ್ತ ಚೆಲ್ಲಿದೆ! ನೋಡಿ ರಕ್ತ ಚೆಲ್ಲಿದೆ ಬೀದಿಯ ಮೇಲೆ! ಎಂದು ಅವರು ಹೇಳುವುದಿಲ್ಲ. ಅವರಿಗೆ ಜೋರಾಗಿ ನಾವು ಹೇಳಬೇಕಾಗಿದೆ."

■ ಕೆ.ಫಣಿರಾಜ್

ಹುಬ್ಬಳ್ಳಿ ಶೂಟ್‌ಔಟ್:
ಗಂಡನನ್ನೇ ಕೊಲ್ಲಲು ಸುಪಾರಿ ಕೊಟ್ಟಳೆ ಚಂದನರಾಣಿ?

ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಕಳೆದ ಹದಿಮೂರು ವರ್ಷದಿಂದ ಶೀಲುತಜ್ಞರಾಗಿರುವ ಹಾಗೂ ಹಾಲಿ ಅಧೀಕ್ಷಕರಾಗಿರುವ ಡಾ. ಶಿವಾನಂದ ದೊಡಮನಿ ಗುಂಡೇಟು ತಿಂದು ಈಗ ಆಸ್ಪತ್ರೆಯ ಬೆಡ್‌ನಲ್ಲಿ ಅಡ್ಡಲಾಗಿ ಮಲಗಿದ್ದಾರೆ. ಅವರನ್ನು ಕೊಲ್ಲಲು ಸುಪಾರಿ ಕೊಟ್ಟವರು ಬೇರೆ ಯಾರೂ ಅಲ್ಲ, ಅವನ ಹೆಂಡತಿಯೇ ಎಂಬುದು ಈಗ ಹೆಚ್ಚು ಕಡಿಮೆ ರಟ್ಟಾಗಿರುವ ಗುಟ್ಟು. ಆದರೆ, ಕೊಲೆ ಆರೋಪ ತನ್ನ ಮೇಲೆ ಬಾರದೇ ಕಿಮ್ಸ್‌ನ ಹಾಲಿ ನಿರ್ದೇಶಕ ಡಾ. ಎಂ.ಬಿ. ಹಿರೇಮಠ್ ಅವರ ಮೇಲೆ ಬರುವಂತೆ ಒಂದು ಕಾಗಕ್ಕ-ಗುಬ್ಬಕ್ಕನ ಕಥೆಯನ್ನೂ ಚಂದನಾರಾಣಿ ಹೆಣೆದಿದ್ದಾಳೆ. ದುರಂತ ಎಂದರೆ ಆವಳ ಆ ಕಥೆ ಅವಳನ್ನೇ ಅನುಮಾನದಿಂದ ನೋಡುವಂತೆ ಮಾಡುತ್ತದೆ.

ದೊಡಮನಿಯವರ ಮೊದಲನೇ ಹೆಂಡತಿ ಸಂಶಯಾಸ್ಪದವಾಗಿ ಸತ್ತುಹೋದಳು. ನಂತರ ಮದುವೆಯಾದ ಎರಡನೇ ಹೆಂಡತಿ ಸ್ತನ ಕ್ಯಾನ್ಸರ್‌ನಿಂದ ಮರಣ ಹೊಂದಿದಳು. ಕೊನೆಯದಾಗಿ ದೊಡಮನಿಗೆ ಸಿಕ್ಕಿದ್ದು ಸೊಲ್ಲಾಪುರ ಮೂಲದ ಚಂದನರಾಣಿ. ಅವಳು ಮುಂದೊಂದು ದಿನ ತನಗೇ ಮುಳುವಾಗುತ್ತಾಳೆಂದು ಪ್ರಾಯಶಃ ದೊಡಮನಿ ಎಂದೂ ಯೋಚಿಸಿರಲಿಲ್ಲ ಎನ್ನಿಸುತ್ತದೆ.

ಚಂದನರಾಣಿಯದ್ದೇ ಸಂಚು

ಈಕೆ ಕಾಂಗ್ರೆಸ್ ಮಹಿಳಾ ಘಟಕದ ಪದಾಧಿಕಾರಿ. ರಾಜ್ಯದ ಹಿರಿ-ಮರಿ ನಾಯಕರಿಂದ ಹಿಡಿದು ಜಿಲ್ಲಾ ಮಟ್ಟದ ಪುಡಿಗಳ ತನಕ ಎಲ್ಲರಿಗೂ ಈಕೆ ಚಂದದ ರಾಣಿಯೆ. ತನ್ನ ಗಂಡ ದೊಡಮನಿಗೆ ಕಿಮ್ಸ್ ನಿರ್ದೇಶಕ ಹುದ್ದೆ ಕೊಡಿಸಲು ಕಾಂಗ್ರೆಸ್ ರಾಜ್ಯ ನಾಯಕರನ್ನು ಈಕೆ ದುಂಬಾಲು ಬಿದ್ದಿದ್ದು ಸುಳ್ಳೇನಲ್ಲ. ಇವಳು ಪಕ್ಷದೊಳಗೆ ಹಿರಿ-ಮರಿ ನಾಯಕರ ಜೊತೆ ಹೊಂದಿರುವ ಸಖ್ಯಗಳ ಬಗ್ಗೆ ಕಾಂಗ್ರೆಸ್ಸಿನಲ್ಲಿ ತಿಳಿಯದವರೇ ಇಲ್ಲ.


ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿರುವ ದೊಡಮನಿ

ತನ್ನ ಹೆಂಡತಿ ಬೇರೆಯವರೊಂದಿಗೆ ಓಡಾಡಿಕೊಂಡಿರುವುದು, ಅದನ್ನು ಪಕ್ಷದ ಒಳಗೆ ಹೊರಗೆ ಜನ ಎಲೆಅಡಿಕೆ ಜಗಿದಂತೆ ಮಾತಾಡಿಕೊಳ್ಳುವುದು ದೊಡಮನಿಗೆ ಬೇಸರ ತರಿಸಿತ್ತು. ಈ ಕಾರಣಕ್ಕಾಗಿಯೇ ಹೆಂಡತಿಯೊಂದಿಗೆ ಎಷ್ಟೋ ಬಾರಿ ಜಗಳ ಆಡಿದ್ದೂ ಉಂಟು. ಅಲ್ಲದೇ ದೊಡಮನಿಯವರಿಗೆ ಮೊದಲ ಪತ್ನಿಯಿಂದ ಪಡೆದ ಒಬ್ಬ ಪುತ್ರಿ ಹಾಗೂ ಎರಡನೇ ಹೆಂಡತಿಯಿಂದ ಪಡೆದ ಒಬ್ಬ ಪುತ್ರ ಇದ್ದಾರೆ. ಈ ಮಕ್ಕಳ ವಿಚಾರದಲ್ಲಿಯೂ ದೊಡಮನಿ ಮತ್ತು ಚಂದನರಾಣಿಯ ನಡುವೆ ಜಗಳವಾಗುತ್ತಿತ್ತು. ಅವರ ಕಿತ್ತಾಟ ಕೆಲವೊಮ್ಮೆ ತಾರಕಕ್ಕೇರಿ ಪೊಲೀಸ್ ಸ್ಟೇಷನ್ ಮೆಟ್ಟಿಲೇರಿದ್ದೂ ಉಂಟು. ವಿದ್ಯಾನಗರ ಪೊಲೀಸರೇ ಅವುಗಳನ್ನು ಅನೇಕ ಬಾರಿ ಬಗೆಹರಿಸಿ ಕಳಿಸಿದ್ದರು. ಆದರೆ ಅದು ಮತ್ತಷ್ಟು ವಿಕೋಪಕ್ಕೆ ತಿರುಗಿ ಚಂದನರಾಣಿ ಗಂಡನಿಗೇ ಸ್ಕೆಚ್ ಹಾಕಿದಳು.

ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಾ ಭೈರೇಗೌಡ ಹುಬ್ಬಳ್ಳಿ-ಧಾರವಾಡಕ್ಕೆ ಬಂದು ಹೋದ ಬೆನ್ನಲ್ಲೇ ದೊಡಮನಿಯನ್ನು ಮುಗಿಸಲು ಚಂದನರಾಣಿ ಸ್ಕೆಚ್ ರೆಡಿಮಾಡಿದ್ದಾಳೆ. ಧಾರವಾಡ ಊರ ಹೊರಗಡೆಯ ಬೆಳಗಾಂ ರಸ್ತೆಯ ಹತ್ತಿರದಲ್ಲಿರುವ ಫಾರ್ಮ್ ಹೌಸ್‌ವೊಂದರಲ್ಲಿ ಮಾಜಿ ಶಾಸಕ ವಿನಯ ಕುಲಕರ್ಣಿಯ ತಮ್ಮನಾದ ವಿಜಯ ಕುಲಕರ್ಣಿ, ವಿದ್ಯಾರ್ಥಿ ಕಾಂಗ್ರೆಸ್‌ನ ಬಂಗಾರೇಶ ಹಿರೇಮಠ್‌ರೊಂದಿಗೆ ಸೇರಿ ಚಂದನರಾಣಿ ಗಂಡನ ಕೊಲೆಯ ಸ್ಕೆಚ್‌ನ್ನು ಫೈನಲೈಸ್ ಮಾಡಿದ್ದಾಳೆ. ಹೇಗಿದ್ದರೂ ಕಿಮ್ಸ್ ಕ್ಯಾಂಪಸ್ಸಿನಲ್ಲಿ ನಿರ್ದೇಶಕ ಹಿರೇಮಠ್ ವಿರುದ್ಧ ಗಲಾಟೆ ಶುರುವಾಗಿದೆ, ದೊಡಮನಿಯ ಕೊಲೆಯನ್ನು ಹಿರೇಮಠ್ ತಲೆಗೆ ಕಟ್ಟಲು ಇದೇ ಸರಿಯಾದ ಸಮಯ ಎಂದುಕೊಂಡು ಕೊಲೆಗೆ ಮುಂದಾಗಿದ್ದಾಳೆ.

ಅದು ನಡೆದದ್ದು ಹೀಗೆ...


ಚಂದನರಾಣಿ

ಅದು ಡಿಸೆಂಬರ್ 11ರ ಮಂಗಳವಾರ ರಾತ್ರಿ 10.40ರ ಸಮಯ. ಡಾ. ದೊಡಮನಿ ಎಂದಿನಂತೆ 'ತಿರುಮಲ ಕ್ಲಾಸಿಕ್ ಬಾರ್'ನಲ್ಲಿ ಪಾನಮತ್ತರಾಗಿ ಮನೆ ಸೇರುತ್ತಿದ್ದಂತೆ ಅವರ ಮೇಲೆ ಎರಗಿದ ಇಬ್ಬರು ಯುವಕರು ಗುಂಡಿನ ಮಳೆಗರೆದು ಪರಾರಿಯಾಗಿದ್ದಾರೆ. ಆಗ ದೊಡಮನಿಯವರ ಹೆಂಡತಿ ಚಂದನರಾಣಿ ತಕ್ಷಣ ಹೊರಗೆ ಬಂದು ಅತ್ತೂಕರೆಯುವ ನಾಟಕವಾಡಿದ್ದಾಳೆ. ಆನಂತರ ಜನರನ್ನು ಕೂಡಿಸಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಗಂಡನನ್ನು ಆಸ್ಪತ್ರೆಗೆ ಸೇರಿಸಿದ್ದಾಳೆ.

ಆಕೆಯ ಗಂಡ ಇನ್ನೂ ಜೀವನ್ಮರಣದ ನಡುವೆ ಹೋರಾಡುತ್ತಿರುವಾಗ ಚಂದನರಾಣಿ ಮಾಧ್ಯಮದವರನ್ನು ಕರೆಸಿ "ಕಿಮ್ಸ್‌ನಲ್ಲಿ ನನ್ನ ಗಂಡನಿಗೂ, ನಿರ್ದೇಶಕ ಡಾ. ಹಿರೇಮಠ್‌ಗೂ ತೀವ್ರ ತಿಕ್ಕಾಟ ನಡೆಯುತ್ತಿತ್ತು, ಹಿರೇಮಠರೇ ನನ್ನ ಗಂಡನನ್ನು ಕೊಲ್ಲುವ ಪ್ರಯತ್ನ ನಡೆಸಿದ್ದಾರೆ" ಎಂದು ಪಟಪಟನೆ ಆರೋಪಿಸಿ ಬಚಾವಾಗಲು ಪ್ರಯತ್ನ ನಡೆಸಿದಳು. ಅಂದೇ ರಾತ್ರಿ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಅವರ ವಿರುದ್ಧ ದೂರನ್ನೂ ದಾಖಲಿಸಿದಳು.

ವಾಸ್ತವದಲ್ಲಿ ದೊಡಮನಿ ಹೆಣ ಉರುಳಿಸ[…] ಲೋಕಪ್ಪನ ಹಕ್ಕಲದ ಇಬ್ಬರು ಯುವಕರ[…] ಚಂದನರಾಣಿ, ವಿಜಯ ಕುಲಕರ್ಣಿ, ಬಂ[…]ರೇಶ-ಹಿರೇಮಠ್ ಸೇರಿ ಕರೆತಂದಿದ್ದರು. ವಿಜಯ್ ಕುಲಕರ್ಣಿ ಆ ಇಬ್ಬರು ಯುವ[…]ರಿಗೆ ತಮ್ಮ .32 ಬೋರ್ ಪಿಸ್ತೂ[…] ಕೊಟ್ಟು, ಡಾ. ದೊಡಮನಿ ರಾ[…] ಮನೆಸೇರುವ ಮೊದಲೇ ಅವ[…] ಮನೆಯಲ್ಲಿರುವಂತೆ ಸೂಚಿಸಿ ಅ[…]ರನ್ನು ಕಳಿಸಿಕೊಟ್ಟಿದ್ದ. ಪಿಸ್ತೂಲ[…] ಸೊಂಟದಲ್ಲಿ ಸಿಕ್ಕಿಸಿಕೊಂಡ ಯುವಕರು ಬಂಗಾರೇಶ[…] ಹಿರೇಮಠ್ ಕೊಟ್ಟ ಕಾರನ್ನೇ[…] ಕಿಮ್ಸ್ ಮುಖ್ಯಗೇಟಿನ ಮುಂ[…]ರುವ 'ಅಭಿಮಾನ್ ಹೋಟೆಲ್' (ಬಾರ್ ಅಂಡ್ ರೆಸ್ಟೋರೆಂಟ್)ನಲ್ಲಿ ಕಂಠಪೂರ್ತಿ ಕುಡಿದು ನಂತ[…] ದೊಡಮನಿ ಮನೆ ಸೇರು[…] ಮೊದಲೇ ಅವರ ಬೆಡ್‌ರೂಮ್ ಹೊಕ್ಕಿದ್ದರು. ದೊಡಮನಿಯ ಆಗಮ[…]ವಾಗುತ್ತಿದ್ದಂತೆ ಗುಂಡಿನ ಮಳೆಗರೆದು ಪರಾರಿಯಾದರು. ಅವರು ತಪ್ಪಿಸಿಕೊಂಡು ಹೋಗುವುದಕ್ಕೆ ಚಂದನರಾಣಿಯೇ ಖುದ್ದಾಗಿ ಸಹಕರಿ[…]ದಳು. ಇತ್ತ ದೊಡಮನಿಗೆ ಗುಂಡೇಟು ಬೀಳುತ್ತಿದ್ದಂ[…] ವಿಜಯ್ ಕುಲಕರ್ಣಿ ಹುಬ್ಬಳ್ಳಿಯಿಂದ ಜಾಗಖಾ[…] ಮಾಡಿ ಹೈದರಾಬಾದ್ ಸೇರಿದ್ದಾನೆ.

ದೊಡಮನಿಯವರ ದೇಹವನ್ನು ಹೊಕ್ಕಿರುವ ನಾಲ[…] ಗುಂಡುಗಳಲ್ಲಿ ಎರಡನ್ನು ಈಗ ಹೊರತೆಗೆಯಲಾಗಿ[…] ಕಿಮ್ಸ್‌ನಿಂದ ಅವರನ್ನು ಬೆಳಗಾಂನ ಕೆಎಲ್‌ಇ ಆಸ್ಪತ್ರೆ[…]

ಇದು ರಿಯಲ್ ಸ್ಟೋರಿ:
ಆಶ್ರಯ ಫ್ಲಾಟು ಹಗರಣ ಸಿಓಡಿ ತನಿಖೆಯಾಗಲಿ

ಕೊಪ್ಪಳದ ಮಾಜಿ ಶಾಸಕ ಹಾಗೂ ಜೆಡಿಎಸ್ ಜಿಲ್ಲಾಧ್ಯಕ್ಷ ಸಂಗಣ್ಣ ಕರಡಿ ಹಾಗೂ ಏನೇನೂ ಅಲ್ಲದ ಆದರೆ ಆತನ ಕೈಚೀಲವಾದ ವಿರುಪಾಕ್ಷಯ್ಯ ಗದುಗಿನ ಮಠ ನಾಲ್ಕು ವರ್ಷಗಳ ಹಿಂದೆ ಎಸಗಿದ ಆಶ್ರಯ ಮನೆಗಳ ಹಗರಣ ಈಗ ಕೊಪ್ಪಳದಲ್ಲಿ ಪ್ರತಿಧ್ವನಿಸುತ್ತಿದೆ.

ಬಡವರಿಗೆ ಆಶ್ರಯ ಮನೆ ಕೊಡುವ ನೆಪದಲ್ಲಿ ಇಬ್ಬರೂ 1995 ರಿಂದಲೇ ರಿಯಲ್ ಎಸ್ಟೇಟ್ ತರಹದ್ದು ಬಿಸಿನೆಸ್ ಕಂ ವಂಚನೆ ಮಾಡಿ ಕಮ್ಮಿಯೆಂದರೂ ಮೂರು ಕೋಟಿ ರೂಪಾಯಿಗಳ ಹಗರಣ ಮಾಡಿದ್ದರ ಕಥೆಯಿದು.

ಸಂಗಣ್ಣ ಕರಡಿಯ ಕೃಪಾಪೋಷಿತದಲ್ಲಿ ವಿರುಪಾಕ್ಷಯ್ಯ ಗದುಗಿನ ಮಠ ಎಸಗಿದ ಈ ವಂಚನೆ ತಿಳಿದುಬಿಟ್ಟರೆ ಸಾಕ್ಷಾತ್ ದೇವೇಗೌಡರೇ ಕೊಪ್ಪಳದ ಸತ್ಯಧ್ಯಾನಪುರದಲ್ಲಿರುವ ಜೆಡಿಎಸ್ ಕಚೇರಿಗೆ ಬಂದು 'ನನಗೂ ಸ್ವಲ್ಪ ಹೇಳಿಕೊಡೋ ಸಂಗಣ್ಣ ಇಂತಹವನ್ನೆಲ್ಲಾ...' ಅಂತ ಸತ್ಯಾಗ್ರಹ ಕೂಡುವುದು ನಿಜ.


1994 ರಲ್ಲಿ ಪಕ್ಷೇತರನಾಗಿ ಶಾಸಕನಾದ ಸಂಗಣ್ಣ ನಿಯಮದ ಪ್ರಕಾರ ತಾಲ್ಲೂಕು ಆಶ್ರಯ ಕಮಿಟಿಗೆ ಅಧ್ಯಕ್ಷನಾಗಿದ್ದ. ಅದ್ಯಾವ ಹೊತ್ತಿನಲ್ಲಿ ಸಂಗಣ್ಣನಿಗೆ ಗದುಗಿನಮಠ ತಗುಲಿಕೊಂಡನೋ, ಗದುಗಿನಮಠನೇ ಸಂಗಣ್ಣನಿಗೆ ಅಮರಿಕೊಂಡನೋ ಗೊತ್ತಿಲ್ಲ, ಇಬ್ಬರೂ ಸೇರಿದ ಮೇಲೆ ಬಿಟ್ಟಿಯಾಗಿ ರೊಕ್ಕ ಮಾಡುವ ಪ್ಲಾನ್ ಮಾಡಿದ್ದಾರೆ. ಅದರ ಮೊದಲ ಹೆಜ್ಜೆಯೆಂದರೆ ಇದೇ ಗದುಗಿನಮಠ ಯಾರದಾದರೂ ಭೂಮಿಯನ್ನು ಕಡಿಮೆ ದರಕ್ಕೆ ಖರೀದಿಸಿ ಅದನ್ನು ತನ್ನ ಹೆಸರಿಗೆ ಬರಕೊಳ್ಳದೇ, ಬಂಡಿ ಹಮಾಲರ ಸಂಘ, ಬಿಲ್ವಾರ ಸಂಘಗಳಿಗೆ ದಾನದ ರೂಪದಲ್ಲಿ ಈ ಭೂಮಿ ಬಂದಿದೆ ಅಂತ ಆಶ್ರಯ ಕಮಿಟಿಗೆ ವರ್ಗಾಯಿಸುತ್ತಿದ್ದ. ಅದೇ ಭೂಮಿಯಲ್ಲಿ ನಕಲಿ ಫಲಾನುಭವಿಗಳ ಪಟ್ಟಿ ತಯಾರಿಸುತ್ತಿದ್ದ ಅಥವಾ ನೇರವಾಗಿ ಆ ಭೂಮಿಯಲ್ಲಿ ಪ್ಲಾಟುಗಳನ್ನು ಸೃಷ್ಟಿಸಿ, ಬೇಕಾದವರಿಗೆ 10 ರಿಂದ 20 ಸಾವಿರಕ್ಕೆ ಮಾರುತ್ತಿದ್ದ ಹೇಗಂತೀರಾ?

ಕೊಪ್ಪಳ

ಸದರಿ ಆಶ್ರಯ ಬಡಾವಣೆಯ ಪ್ಲಾಟುಗಳನ್ನು ಹಂಚಿ ಅವರಿಗೆ ಕೊಡುವ ಹಕ್ಕುಪತ್ರಗಳನ್ನು ಪಕ್ಕದ ಗದಗನಲ್ಲಿ ಮುದ್ರಿಸಿ, ಅಲ್ಲಿಯೇ ತಯಾರಿಸಲಾದ ಸೀಲ್‌ಗಳನ್ನು ಅಂದ್ರೆ ಪುರಸಭೆ, ತಹಶೀಲ್ದಾರರ ಸೀಲ್‌ಗಳನ್ನು ಒತ್ತಿ ತಾನೇ ಸಹಿ ಜಡಿದು ಹಣ ಜೇಬಿಗಿಳಿಸುತ್ತಿದ್ದ. ಒಂದೆಡೆ ಸರ್ಕಾರದಲ್ಲಿ ಇವುಗಳ ದಾಖಲೆ ಇದ್ದರೆ ಇತ್ತು ಇಲ್ಲ ಅಂದ್ರೆ ಇಲ್ಲ. ಏಕೆಂದರೆ ಇದರಲ್ಲಿ ಭಾಗಿಯಾದಾತ ಆಗಿನ ಶಾಸಕ ಕಂ ಆಶ್ರಯ ಕಮಿಟಿ ಅಧ್ಯಕ್ಷ ಸಂಗಣ್ಣ ಕರಡಿ.

ಕೊಪ್ಪಳದಲ್ಲೂ ರಿಯಲ್ ಎಸ್ಟೇಟ್ ಈಗ ಚಿಗುರುತ್ತಿದೆ. ಖಾಸಗಿಯಾಗಿ ಲೇಔಟ್ ಮಾಡಿ, ಮಾರಬೇಕೆಂದರೆ ಮೊದಲು ಲಕ್ಷಾಂತರ ರೂಪಾಯಿ ಹಾಕಿ ಅಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸಬೇಕು. ಅದರ ಬದಲು ಕಡಿಮೆ ದರಕ್ಕೆ ಭೂಮಿ ಖರೀದಿಸಿ, ಸಂಘಗಳ ಹೆಸರಿನಲ್ಲಿ ಅಲ್ಲಿ ಆಶ್ರಯ ಪ್ಲಾಟು ಮಾಡಿ, ತಾವೇ ಮಾಲೀಕರಂತೆ ಮಾರಿ ದುಡ್ಡು ಮಾಡುವ ಯೋಜನೆಯೇ ಇಂತಹವರಿಗೆ ಸರಿಯಾದುದು. ಈವರೆಗೆ ಗದುಗಿನ ಮಠ 64 ಎಕರೆ ಭೂಮಿಯಲ್ಲಿ 20x20 ಸೈಟಿನಂತೆ ಒಂದು ಅಂದಾಜು ಪ್ರಕಾರ ಎರಡೂವರೆ ಸಾವಿರ ಪ್ಲಾಟ್ ಮಾರಿದ್ದಾನೆ. ಒಂದಕ್ಕೆ 8 ಸಾವಿರದಂತೆ ಅಲ್ಲದೆ, ಕಾರ್ನರ್ ಸೈಟ್‌ಗಳನ್ನು 20 ಸಾವಿರದಂತೆ ಮಾರಿದರೆ ಒಟ್ಟು ಮೊತ್ತವೇ 2 ರಿಂದ 3 ಕೋಟಿ ರೂಪಾಯಿ.

ಏಳೆಂಟು ವರ್ಷಗಳ ಹಿಂದೆ ಒಂದು ಲಟಾರಿ M 80 ಯಲ್ಲಿ ತಿರುಗುತ್ತಿದ್ದ ವಿರುಪಾಕ್ಷಯ್ಯ ಅದ್ಹೇಗೆ ಹೈಟೆಕ್ ಸಫಾರಿ ಗಾಡಿ ತಂದ, ಎಂಟರಿಂದ ಹತ್ತು ಲಕ್ಷ ರೂಪಾಯಿ ಪೇಪರ್ ಮಾರ್ಟ್ ಅಂಗಡಿ ಹಾಕಿದ ಎಂಬ ಪ್ರಶ್ನೆಗಳಿಗೆ ಈಗ ಉತ್ತರ ಸಿಕ್ಕುತ್ತಿದೆ. ಮೊದಲು ಸಣ್ಣದೊಂದು ಚಹ ಅಂಗಡಿ ಇಟ್ಟವ ಆಗಾಗ ರೈತಸಂಘ, ಕಮ್ಯೂನಿಸ್ಟ್ ಸಂಘಗಳಲ್ಲಿದ್ದ. ಕಾಮ್ರೇಡ್‌ಗಳೊಂದಿಗೆ ತಿರುಗುತ್ತಿದ್ದ. ಸಂಗಣ್ಣನ ದೋಸ್ತಿ ಮಾಡಿ ಕೇಂದ್ರ ಪ್ರಾಥಮಿಕ ಶಾಲೆ ಎಸ್‌ಡಿಎಂಸಿ ಅಧ್ಯಕ್ಷನಾಗಿ, ಅದನ್ನು ಇಸ್ಪೀಟ್ ಅಡ್ಡೆಯನ್ನಾಗಿ ಪರಿವರ್ತಿಸಿದ್ದ. ಆವತ್ತಿನ ಈ ಢೋಂಗಿ ಕಮ್ಯೂನಿಸ್ಟ್ ಇವತ್ತು ಮನೆಯಲ್ಲಿ ಜ್ಯೋತಿಷ್ಯ ಹೇಳುವ, ನಿಂಬೆಹಣ್ಣು ಮಂತ್ರಿಸಿ ಕೊಡುವ ಮಂತ್ರವಾದಿಯಾಗಿ 'ನಿಂಬೆಹಣ್ಣು ಸ್ವಾಮಿ' ಎಂದೇ ಫೇಮಸ್ ಆಗಿಬಿಟ್ಟಿದ್ದಾನೆ. ಈತ ಬಿಜೆಪಿಯ ಕಟ್ಟಾ ಫ್ಯಾನ್ ಕೂಡ ಹೌದು. ಇದಿಷ್ಟು ಈತನ ಪರಿಚಯ ವಿವರ.


ಸಂಗಣ್ಣ ಕರಡಿ


ಮತ್ತೆ ಹಗರಣಕ್ಕೆ ಬರೋಣ. ಆಶ್ರಯ ಕಮಿಟಿ ಅಂದ್ರೆ ಶಾಸಕನ ನೇತೃತ್ವದಲ್ಲಿ ಫಲಾನುಭವಿಗಳ ಲಿಸ್ಟ್ ಸರ್ಕಾರಕ್ಕೆ ಕಳಿಸಬೇಕು. ಹಕ್ಕುಪತ್ರಗಳನ್ನು ಸರ್ಕಾರವೇ ತಹಶೀಲ್ದಾರರಿಗೆ ಕಳಿಸುತ್ತದೆ. ಅಲ್ಲಿಂದ ಅವು ನಗರಸಭೆಗೆ ಬಂದು ಅರ್ಹರಿಗೆ ತಲುಪಬೇಕು. ಆದರೆ ಸರ್ಕಾರದ ಲಿಸ್ಟಲ್ಲಿ ಇರೋರೆ ಬೇರೆ, ಮನೆ ಮಾಲೀಕರೇ ಬೇರೆ, ಸದ್ಯ ಈ ಮನೆಗಳಲ್ಲಿ ವಾಸವಾಗಿರುವವರೂ ಬೇರೆಯವರೇ. ಸರ್ಕಾರದಿಂದ ಬೇರೆಯವರ ಹೆಸರಿಗೆ ಹಕ್ಕುಪತ್ರ ತಂದು, ಅದನ್ನು ತಾನು ಸೂಚಿಸಿರುವ ವ್ಯಕ್ತಿಗೆ ಹಸ್ತಾಂತರಿಸಿ ಅಂತ ಆಶ್ರಯ ಕಮಿಟಿ ಅಧ್ಯಕ್ಷನಾಗಿದ್ದ ಸಂಗಣ್ಣನೇ ಪತ್ರ ಕೊಡುತ್ತಿ[…] ಹೀಗೆಯೇ ಕಂದಾರಿ ಕುಟುಂಬಕ್ಕೆ 10 ಪ್ಲಾಟುಗಳನ್ನು ಹಗಲುದಿವಟಗೆ ಕುಟುಂಬಕ್ಕೆ 13 ಪ್ಲಾಟ್‌ಗಳನ್ನು ಪಾಟೀಲ್ ಕುಟುಂಬಕ್ಕೆ 4, ಅಲ್ಲದೇ ಶಿಕ್ಷಕರಿಗೆ, ರಾ[…]ಕಾರಣಿಗಳಿಗೆ ಗುತ್ತಿಗೆದಾರರಿಗೆ ಬೇಕಾಬಿಟ್ಟಿ ಆಶ್ರಯ ಮನೆ ಹಂಚಿದ್ದೂ ಅಲ್ಲದೇ ಪಕ್ಕದ ಹಳ್ಳಿಗಳವರೆಗೂ ಮನೆ ಕೊಡಲಾಗಿದೆ. ಆಶ್ರಯ ಪ್ಲಾಟುಗಳಲ್ಲಿ ಬಂಗಲೆಗಳು ಏಳುತ್ತಿವೆ. ಸ್ವತಃ ವಿರುಪಾಕ್ಷಯ್ಯನ ಕುಟುಂಬದವರೆಲ್ಲ ಹೆಸರಿನಲ್ಲಿ ಮನೆಗಳಿವೆ. ಸರ್ವೆ ನಂ. 407 ರಲ್ಲಿನ ತ[…] ಆಶ್ರಯ ಮನೆಯನ್ನು ಜಾಫರ್ ಖಾನ್‌ಗೆ ಮತ್ತು ವಸಂತಗೌಡ ಸಿಂಧನೂರು ಬಾಡಿಗೆ ನೀಡಿದ್ದಾನೆ.

ಸರ್ವೆ ನಂ. 423/2 ರ 2 ಎಕರೆ 34 ಗುಂಟೆಯ 92 ಪ್ಲಾಟ್ ಮಾರಿದ್ದು ಅಲ್ಲಿ ಶಾಲೆ, ಪಾರ್ಕ್, ಧಾರ್ಮಿ[…] ಕೇಂದ್ರಗಳಿಗೆ ಜಾಗವೇ ಬಿಟ್ಟಿಲ್ಲ. 423/4 ರ 3 ಎಕರೆ 25 ಗುಂಟೆಯ 174 ಪ್ಲಾಟ್, 423/3 ರಲ್ಲಿ 2 ಎಕರೆ 8 ಗುಂಟೆ 118 ಪ್ಲಾಟ್‌ಗಳನ್ನು ಮಾರಿದ್ದು ಈಗ ತನಿಖೆಯ ಸಂದರ್ಭದಲ್ಲಿ ಮೂಲೆಯಲ್ಲಿ ಉಳಿದ 20x19 ಜಾಗ ಸ್ಕೂಲ್, 20x14 ಸೈಜಿನ ಜಾಗ ದೇವಸ್ಥಾನಕ್ಕೆ, 10x9 ಸೈಜಿನಲ್ಲಿ ಮಸೀದಿಗೆ ಜಾಗ ಎಂದು ಈಗ ಹೇಳುತ್ತಿದ್ದಾನೆ. ಇವೆಲ್ಲವೂ ಒಂದು ಆಶ್ರಯ ಪ್ಲಾಟ್‌ಗಿಂತ ಚಿಕ್ಕವು. ಇದರಲ್ಲಿ ಶಾಲೆ, ದೇವಸ್ಥಾನ, ಮಸೀದಿ ಕಟ್ಟಲು ಆಗುತ್ತಾ? ಸರ್ವೆ ನಂ 439/D ಯ 4 ಎಕರೆ 4 ಗುಂಟೆಯಲ್ಲಿ 225 ಪ್ಲಾಟ್ ಮಾಡಿ[…] ಅಲ್ಲಿಯೂ ಸಾರ್ವಜನಿಕ ಉಪಯೋಗಕ್ಕೆ ಜಾಗ ಬಿಟ್ಟಿಲ್ಲ, ಸರ್ವೆ ನಂ. 439/B, 228 ಪ್ಲಾಟ್, 439/C, 225 ಪ್ಲಾಟ್‌ಗಳು ಮಾರಾಟಕ್ಕೆ ನಿಂತಿವೆ.

ಅಲ್ಲದೇ ಸರ್ವೆ ನಂ. 423/3 ರಲ್ಲಿ ಒಂದು ಆಶ್ರಯ ಮನೆ ಹಕ್ಕುಪತ್ರ ಗೋಣಪ್ಪ ಮೂಲಿಮನಿ ಹೆಸರಿಗಿದ್ದ[…]

ರವಾನಿಸಲಾಗಿದೆ. ಈ ಮಧ್ಯದಲ್ಲಿ ಅವರ ಆರೋಗ್ಯವನ್ನು ವಿಚಾರಿಸಲು ಮಾಜಿ ಸಚಿವರಾದ ಜಗದೀಶ್ ಶೆಟ್ಟರ್, ಬಸವರಾಜ್ ಹೊರಟ್ಟಿ, ಎ.ಎಂ. ಹಿಂಡಸಗೇರಿ, ಎಂ.ಪಿ ನಾಡಗೌಡ ಮುಂತಾದವರು ಬಂದು ಹೋಗಿದ್ದಾರೆ. ಇತ್ತ ಹುಬ್ಬಳ್ಳಿಯಲ್ಲಿ ಜಗದೀಶ್ ಶೆಟ್ಟರ್ ಕಿಮ್ಸ್ ನಿರ್ದೇಶಕ ಹಿರೇಮಠ್ ಅವರನ್ನು ಭೇಟಿ ಮಾಡಿ 'ಡೋಂಟ್ ವರಿ' ಎಂತ ಅಭಯಹಸ್ತ ಚಾಚಿದ್ದಾರೆ. ಹಿರೇಮಠ್ ಅವರನ್ನು ಕಿಮ್ಸ್ ನಿರ್ದೇಶಕರನ್ನಾಗಿ ಮಾಡಿದ್ದೇ ಜಗದೀಶ್ ಶೆಟ್ಟರ್. ಇನ್ನೊಂದೆಡೆ ಬಸವರಾಜ್ ಹೊರಟ್ಟಿ ಬಂದು ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಗುಡುಗಿ ಹೋಗಿದ್ದಾರೆ.

ಹಿರೇಮಠ್-ದೊಡಮನಿ ಜಿದ್ದಾಜಿದ್ದಿ



ವಿಜಯ್ ಕುಲಕರ್ಣಿ

ವಾಸ್ತವದಲ್ಲಿ ಕೆಲ ವರ್ಷಗಳ ಹಿಂದೆ ಹಿರೇಮಠ್ ಮತ್ತು ದೊಡಮನಿ ಇಬ್ಬರೂ ಭಾಯಿ, ಭಾಯಿ ಎಂದುಕೊಂಡಿದ್ದವರು. ಐದಾರು ವರ್ಷಗಳ ಹಿಂದೆ ಕಿಮ್ಸ್‌ನಲ್ಲಿ ಡಾ. ಹಿರೇಮಠ್, ಡಾ. ಕಲಾದಗಿ ಮತ್ತು ಡಾ. ಹಂಗರಗಾ ನಡುವೆ ಅಧಿಕಾರಕ್ಕಾಗಿ ದೊಡ್ಡ ಮಟ್ಟದ ಕಿತ್ತಾಟ ನಡೆದಾಗ ಹಿರೇಮಠ್‌ನ ಬೆಂಬಲಕ್ಕೆ ಇದೇ ದೊಡಮನಿ ನಿಂತಿದ್ದರು. ಆ ಹೊತ್ತಿನಲ್ಲಿ ದಲಿತ ಹಿನ್ನೆಲೆಯಿಂದ ಬಂದಿರುವ ದೊಡಮನಿಗೆ ಬೇಗ ಪ್ರಮೋಶನ್ ಸಿಕ್ಕಿ, ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಬರುಬರುತ್ತ ಅದೇಕೋ ಹಿರೇಮಠ್ ಮತ್ತು ದೊಡಮನಿ ನಡುವೆ ಮೊದಲಿದ್ದ ಸ್ನೇಹ ಹಳಸುತ್ತಾ ಹೋಯಿತು. ಕೊನೆಗೆ ಅದು ಜಿದ್ದಾಜಿದ್ದಿನ ಹೋರಾಟವಾಗುವ ಹಂತಕ್ಕೆ ತಲುಪಿಬಿಟ್ಟಿತು. ಹಿರೇಮಠ್ ಕಿಮ್ಸ್‌ಗೆ ಅಗತ್ಯವಿರುವ ವಸ್ತುಗಳ ಖರೀದಿಯ ಕಾಂಟ್ರಾಕ್ಟ್ ವಿಚಾರದಲ್ಲಿ ಲೂಟಿ ಹೊಡೆಯುತ್ತಿದ್ದುದು ದೊಡಮನಿಗೆ ಹೊಟ್ಟೆಕಿಚ್ಚು ಹಚ್ಚಿತ್ತು. ಲೂಟಿಯಲ್ಲಿ ತನ್ನ ಪಾಲಿನ ಪರ್ಸೆಂಟೇಜ್ ಸಿಗುತ್ತಿಲ್ಲ ಎಂಬ ನೋವು ಇದ್ದರೂ ಇರಬಹುದು.

ಏಕೆಂದರೆ ಇದು ಕೋಟ್ಯಂತರ ರೂಪಾಯಿಗಳ ವ್ಯವಹಾರ. ಕಿಮ್ಸ್ ವಾರ್ಷಿಕ 3 ರಿಂದ 4 ಕೋಟಿ ಮೊತ್ತದ ಔಷಧಿಗಳನ್ನು ಸರಬರಾಜು ಮಾಡಲು ವಿವಿಧ ಕಂಪೆನಿಗಳಿಗೆ ಗುತ್ತಿಗೆ ನೀಡುತ್ತದೆ. ಈ ವ್ಯವಹಾರವನ್ನು ಡಾ. ದೊಡಮನಿಯವರೇ ನೋಡಿಕೊಳ್ಳುತ್ತಿದ್ದರು. ಸವಣೂರ್ ಹಾಗೂ ಸುರೇಶ್ ಎಂಬ ನೌಕರರು ಕಮೀಷನ್ ಕಮಾಯಿಯನ್ನು ದೊಡಮನಿ ಮತ್ತು ಹಿರೇಮಠ್ ಇಬ್ಬರಿಗೂ ತಲುಪಿಸುತ್ತಿದ್ದರು.

ಅಲ್ಲದೆ, ಸಿಬ್ಬಂದಿಯ ನೇಮಕಾತಿಯಲ್ಲೂ ಹಿರೇಮಠ್ ಭಾರಿ ಅವ್ಯವಹಾರ ಎಸಗಿದ್ದರು. ಅನಗತ್ಯವಾಗಿ ಸಾವಿರಾರು ಗುತ್ತಿಗೆ ಕಾರ್ಮಿಕರನ್ನು ಕೇವಲ ಕಾಗದದ ಮೇಲೆ ನೇಮಿಸಿಕೊಂಡು ಅವರು ಕೆಲಸಕ್ಕೆ ಬರದಿದ್ದರೂ ಗುತ್ತಿಗೆದಾರರಿಗೆ ಕಾರ್ಮಿಕರ ಸಂಬಳವನ್ನು ನೀಡಲಾಗುತ್ತಿತ್ತು. ಇದಕ್ಕಾಗಿ ನಿರ್ದೇಶಕ ಹಿರೇಮಠ್‌ಗೆ ಪ್ರತಿತಿಂಗಳಿಗೆ ಏನಿಲ್ಲವೆಂದರೂ ನಲವತ್ತೈದು ಲಕ್ಷ ಕಮೀಷನ್ ಸಿಗುತ್ತಿತ್ತು. ಕಮೀಷನ್ ಹಂಚಿಕೆಯಲ್ಲಿ ಏನೇನು ಜಗಳ ಬಂದಿತೋ ಗೊತ್ತಿಲ್ಲ, ಅಂತೂ ಅದು ದೊಡ್ಡ ರಾದ್ಧಾಂತವಾಗಿ ಕಿಮ್ಸ್‌ನಲ್ಲಿ ಎಲ್ಲರ ಬಾಯಲ್ಲೂ ಅದೇ ಮಾತು ಎಂಬಂತಾಗಿ ಹೋಗಿತ್ತು. ಕೊಲೆ ಮಾಡುವ ಮಟ್ಟಕ್ಕೆ ಅದರ ತೀವ್ರತೆಯಿನ್ನೂ ಬೆಳೆದಿರಲಿಲ್ಲ. ಈ ಕಲಹವನ್ನೇ ಚಂದನರಾಣಿ ದೊಡಮನಿಯನ್ನು ಮುಗಿಸಲು ಬಳಸಿಕೊಂಡಳು.

ದೊಡಮನಿ ಗುಣಮುಖವಾಗಿ ಆಸ್ಪತ್ರೆಯಿಂದ ಹೊರ ಬಂದರೆ ಪ್ರಕರಣದ ವಾಸ್ತವತೆಯನ್ನು ಅರಿಯಲು ಒಂದಿಷ್ಟು ಸಹಾಯವಾಗುತ್ತದೆ. ಈಗಾಗಲೇ ಪೊಲೀಸರು ಪ್ರಕರಣದ ವಾಸನೆಯ ಜಾಡು ಹಿಡಿದು ಹೊರಟಿದ್ದಾರೆ. ಅವರ ಅನುಮಾನ ಚಂದನರಾಣಿಯ ಸುತ್ತವೇ ಸುತ್ತುತ್ತಿರುವುದು ನಿಜವಾದರೂ ಹಿರೇಮಠ್ ಮೇಲೂ ಒಂದು ಕಣ್ಣು ಇಟ್ಟಿದ್ದಾರೆ. ನಿಷ್ಪಕ್ಷಪಾತ ತನಿಖೆ ನಡೆದರೆ ನೈಜ ಅಪರಾಧಿಗಳು ಯಾರೆಂದು ಕಂಡು ಹಿಡಿಯುವುದು ಕಷ್ಟವೇನಲ್ಲ. ಚಂದನರಾಣಿ ಕಾಂಗ್ರೆಸ್‌ನ ರಾಜಕಾರಣಿ ಎಂಬ ಕಾರಣಕ್ಕೆ, ರಾಜ್ಯ ಕಾಂಗ್ರೆಸ್ ನಾಯಕರ ಬೆಂಬಲವಿದೆ ಎಂಬ ಕಾರಣಕ್ಕೆ ಪ್ರಕರಣವನ್ನು ಸಡಿಲಗೊಳಿಸುವ ಕೆಲಸವನ್ನು ಪೊಲೀಸರು ಮಾಡದಂತೆ ನೋಡಿಕೊಳ್ಳುವ ಜವಾಬ್ದಾರಿ ಕಮೀಷನರ್ ನಾರಾಯಣ ನಡುಮನಿಯ ಮೇಲಿದೆ.

-ವರದಿಗಾರ

ಜಾರಿ ಬಿದ್ದ ಜಾಣ ಕರಿಯಣ್ಣ

ಒಂದು ಹುಡುಗಿಗೆ ತಾನು ಸುಂದರವಾಗಿದ್ದೇನೆ ಅಂತ ಗೊತ್ತಾದರೆ ಸಾಕು ಆಕೆಯ ಮಾತು, ನಗು, ವರ್ತನೆಯಲ್ಲಿ ವಿಪರೀತ ಬದಲಾವಣೆಯಾಗಿ ಬಿಡುತ್ತೆ. ಹಾಗೇ ಒಬ್ಬ ರಾಜಕಾರಣಿಗೆ ತಾನು ಜಾಣ ಅಂತ ಗೊತ್ತಾಗಿ ಬಿಟ್ಟರೆ ಏನು ಮಾಡುತ್ತಾನೆ? ಕೊಪ್ಪಳದಲ್ಲಿ ಕರಿಯಣ್ಣ ಸಂಗಟ ಮಾಡುವುದನ್ನೇ ಮಾಡುತ್ತಾನೆ.

ಕಾಂಗ್ರೆಸ್‌ನಲ್ಲಿದ್ದುಕೊಂಡು ಹಿಂದುಳಿದ ವರ್ಗಕ್ಕೆ ಸೇರಿದವನು ಅನ್ನೋ ಕಾರಣಕ್ಕೆ ಜಿ.ಪಂ. ಸದಸ್ಯನಾಗಿ, ಅಧ್ಯಕ್ಷನಾಗಿ, ನಿಷ್ಠೆ ಬದಲಿಸಿ ಎಂಎಲ್‌ಸಿಯೂ ಆಗಿಬಿಟ್ಟ ಕರಿಯಣ್ಣ ಸಂಗಟಿ. ನಂತರ ಟಿಸಿಎಚ್, ಬಿಎಡ್ ಕಾಲೇಜು ಚಾಲೂ ಮಾಡಿ ಅದರಲ್ಲಿ ಮೂರು ಹಿರೇಮಠನ ಹೆಸರಿಗೆ ಹೋದಾಗ ಇಡೀ ಕೊಪ್ಪಳ ಆಡಿಕೊಂಡು ನಕ್ಕಿತ್ತು. ಇಂತಹ ಕರಿಯಣ್ಣ ತನ್ನನ್ನು ಬೆಳೆಸಿದ ಕಾಂಗ್ರೆಸ್‌ನ್ನು ಎಡಗಾಲಿನಿಂದ ಒದ್ದು ಯಾವುದೇ ಗಣಿ ಲೈಸೆನ್ಸ್ ಮತ್ತು ಎಂ.ಎಡ್. ಕಾಲೇಜ್ ಅನುಮತಿಗಾಗಿ ಜೆಡಿಎಸ್ ಸೇರಿದ್ದ. ಹಾಗೆ ಸೇರಿ 3 ತಿಂಗಳಾಗಿಲ್ಲ ಆಗಲೇ ಕಾಂಗ್ರೆಸ್‌ನ ಎಂಎಲ್‌ಸಿ ಎಚ್.ಆರ್. ಶ್ರೀನಾಥನ 43ನೇ ಹುಟ್ಟುಹಬ್ಬಕ್ಕೆ ಶುಭಾಶಯ ಮತ್ತು ಶ್ರೀನಾಥನ ಕಲ್ಯಾಣ ಕಾರ್ಯ ವಿವರಿಸಿ 20 ಜಾಹೀರಾತು ನೀಡಿದ್ದಾನೆ ಕರಿಯಣ್ಣ ಸಂಗಟಿ.

ಕಾಂಗ್ರೆಸ್‌ನಲ್ಲಿನ ತನ್ನ ಹಳೆಯ ಗೆಳೆಯರ ಹೆಸರಲ್ಲಿ 20 ಜಾಹೀರಾತು ನೀಡಿ ಪ್ರತಿ ಜಾಹೀರಾತಿನಲ್ಲಿ ಪ್ರಕಟಣೆ: ಕರಿಯಣ್ಣ ಸಂಗಟಿ ಅಂತ ಪ್ರಿಂಟಾಕಿಸಿಕೊಂಡಿದ್ದಾನೆ. ಆ ಮೂಲಕ ಜೆಡಿಎಸ್ ಸೇರಿದ್ದ ಕರಿಯಣ್ಣ ಈಗ ಸಂಗಣ್ಣನಿಗೆ ಸಂಕಟ ತಂದು ಇಡುತ್ತಿದ್ದಾನೆ. ಮೊದಲೇ ಜೆಡಿಎಸ್ ವಾಂತಿ-ಭೇದಿಗೀಡಾದ ಪೇಶಂಟ್‌ನಂತಾಗಿರುವಾಗ ಕರಿಯಣ್ಣನನ್ನು ಆಚೆ ಅಟ್ಟುವುದು ಸಾಧ್ಯವೇ?

ಸದ್ಯದಲ್ಲೇ ವಿಧಾನಸಭೆಗೆ ಚುನಾವಣೆ ಬರುವ ಹೊತ್ತಿನಲ್ಲಿ ಹೀಗೆ 20 ಕ್ಕೂ ಹೆಚ್ಚು ಜಾಹೀರಾತು ನೀಡಿ ಆ ಮೂಲಕ ಜೆಡಿಎಸ್ ಹಾಗೂ ಕಾಂಗ್ರೆಸ್ ಹೈಕಮಾಂಡ್‌ನ ಗಮನ ಸೆಳೆಯುವ ತಂತ್ರವಿದು ಎನ್ನಲಾಗುತ್ತಿದೆ. ಏನೇ ಆಗಲಿ, ಈಗ ಕರಿಯಣ್ಣ ಜಾರಿ ಬಿದ್ದ ಜಾಣ ಅಲ್ಲವೇ?

ಅದನ್ನು ಶಿವಮೂರ್ತಿ ಗುತ್ತೂರು ಎಂಬುವವರಿಗೆ ಮಾರಾಟ ಮಾಡಲಾಗಿದೆ. ಅಲ್ಲದೇ ಜಿ.ಎಲ್. ಚಂದ್ರಶೇಖರಯ್ಯ ಎಂಬ ಬಕಾಸುರ ಜಿಲ್ಲಾಧಿಕಾರಿಯಾಗಿದ್ದಾಗ ಇದೇ ಸಂಗಣ್ಣ, ವಿರುಪಾಕ್ಷಯ್ಯ ಸೇರಿ ಇಂತಹವೇ 320 ಪ್ಲಾಟ್ ಮಾಡಿದ್ದಾರೆ. ಅದರಲ್ಲಿ ಪ್ಲಾಟಿಗೆ 10 ಸಾವಿರ, ಕಾರ್ನರ್ ಸೈಟ್‌ಗಳಿಗೆ 20 ಸಾವಿರದಂತೆ ಮಾರಾಟವಾಗುತ್ತಿವೆ. ಈ ಎಲ್ಲ ಹಗರಣ ಬಯಲಿಗೆ ತಂದದ್ದು ಸಿರಿಗನ್ನಡ ವೇದಿಕೆ ಕಾರ್ಯದರ್ಶಿ ಪೀರಾ ಹುಸೇನ ಬೆಳಗಟ್ಟಿ. ಎಲ್ಲ ದಾಖಲೆಗಳನ್ನು ಹಿಂದಿನ ಜಿಲ್ಲಾಧಿಕಾರಿ ಸಮೀರರಾಜ್ ಸಿಂಗ್‌ಗೆ ನೀಡಿದಾಗ ಅವರೇ ಪರಿಶೀಲಿಸಿ ಆಶ್ರಯ ಪ್ಲಾಟಗಳಲ್ಲಿನ ಅನಧಿಕೃತ 4 ಕಾಂಪ್ಲೆಕ್ಸ್‌ಗಳನ್ನು ಒಡೆಸಿ ಹಾಕಿದ್ದರು. ಇಲ್ಲಿವರೆಗೆ ಸಮೀರರಾಜ್ ಇದ್ದಿದ್ದರೆ ಇಷ್ಟೊತ್ತಿಗೆ ಇವರೆಲ್ಲ ಚಿತ್ತಲೆ ಯಾಗಿರುತ್ತಿದ್ದರು. ಈಗ ಉಪವಿಭಾಗ ಅಧಿಕಾರಿ ಗಂಗೂಬಾಯಿ ಮಾನಕರ್ ವಿಶೇಷ ಆಸಕ್ತಿಯಿಂದ ಈ ಪ್ರಕರಣದ ತನಿಖೆ ನಡೆಸುತ್ತಿದ್ದಾರೆ. ಆದರೆ ಅವರ ವರ್ಗಾವಣೆಯಾದ ಪಕ್ಷದಲ್ಲಿ ಎಲ್ಲವೂ ಬಯಲಾಗಲಿದೆ.

ಒಂದು ಮೂಲದ ಪ್ರಕಾರ 1994 ರಿಂದ 2007 ರವರೆಗೆ ಸರ್ಕಾರದಿಂದ ಅಧಿಕೃತ ಹಕ್ಕುಪತ್ರಗಳು ವಿತರಣೆಯಾಗಿದ್ದು ಬರೀ 394. ಆದರೆ ಸಂಗಣ್ಣ ಗದಗಿನಮಠ ಹಂಚಿದ ಹಕ್ಕುಪತ್ರಗಳು ಎರಡೂವರೆ ಸಾವಿರ ಹತ್ತಿರ.

ಹಿಂದೆ ಆಶ್ರಯ ಮನೆ ನೀಡಿ ಅಂತ DYFI ತಿಂಗಳಾನುಗಟ್ಟಲೇ ನಗರಸಭೆ ಮುಂದೆ ಟೆಂಟು ಹೊಡೆದಿತ್ತು, ಈಗ ಇಷ್ಟೊಂದು ಬೃಹತ್ ಹಗರಣ ಬಯಲಾಗುತ್ತಿದ್ದರೂ ಯಾಕೋ ಅದು ಪ್ರತಿಭಟಿಸುತ್ತಿಲ್ಲ. ಒಂದೆಡೆ ಸರ್ಕಾರಕ್ಕೆ ಪಂಗನಾಮ, ಇನ್ನೊಂದೆಡೆ ಬಡವರಿಂದ ವಸೂಲಿ, ಇದು ಕೊಪ್ಪಳದ ಭಾರೀ ಜನಪ್ರಿಯ ಮಾಜಿ ಶಾಸಕ ಹಾಗೂ ದೇವೇಗೌಡರ ಪಾರ್ಟಿಯ ಜಿಲ್ಲಾಧ್ಯಕ್ಷ ಸಂಗಣ್ಣ ಕರಡಿ ತನ್ನ ಅಧಿಕಾರಾವಧಿಯಲ್ಲಿ ಬಂಟನೊಂದಿಗೆ ಸೇರಿ ಎಸಗಿದ ರಿಯಲ್, ರಿಯಲ್ ಎಸ್ಟೇಟ್ ಸ್ಟೋರಿ. ಇದೇ ಸಂಗಣ್ಣ ಮತ್ತೆ ಎಲೆಕ್ಷನ್‌ಗೆ ರೆಡಿಯಾಗುತ್ತಿದ್ದಾನೆ.

-ವರದಿಗಾರ


ಓ ದೇವರೇ, ಇಂತ ಜನಗಳಿಂದ ನಮಗೆ ಬಿಡುಗಡೆಯೇ ಇಲ್ಲವೇ?

ಥೂತ್ತೇರಿ — ಯಾಹೂ

ಅಷ್ಟಮಠಗಳ ಪಾಕಶಾಲೆಯಂತಿರುವ ಉಡುಪಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಉಂಡವನೇ ಜಾಣ, ಉಣ್ಣದವನೇ ಕೋಣ ಎಂಬಂತಾಯ್ತಂತಲ್ಲಾ, ಉಣ್ಣಲೋಸ್ಕರವೇ ನಾನಾ ಅವತಾರಗಳನ್ನೆತ್ತುವ ಮಾನವ ಉಣ್ಣಲೋಸ್ಕರವೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುತ್ತಿರುವಂತಾಗಿದೆಯಂತಲ್ಲಾ, ಇಂತಹ ಆರೋಪಕ್ಕೆ ಸಾಕ್ಷಿಯಾಗಿ ಮಾಧ್ಯಮದ ಮೂರ್ಖ ಜನರು ನೆದರಿಲ್ಲದೆ ಕೈ ಸಡಿಲಬಿಟ್ಟು ತಟ್ಟೆತುಂಬ ಇಕ್ಕಿಸಿಕೊಂಡು ಬಾರಿಸುವುದನ್ನು ವರ್ಣಿಸಿ ತೋರಿದರೆ ಏನಃ, ಅರ್ಥ ಪೂರ್ಣವಾಗಿ ನಡೆದಂತಹ ಯಾವ ಗೋಷ್ಠಿಯನ್ನು ತೋರಲಿಲ್ಲವಂತಲ್ಲಾ, ಗೋಷ್ಠಿ ಬಗ್ಗೆ ಹೇಳುವುದೇನಿದೆ; ಊಟದ ವಿಷಯದಲ್ಲಾದರೆ ಅರ್ಧ ರಾತ್ರಿಯಲ್ಲೂ ಬಾರಿಸುತ್ತ ಕುಳಿತಿದ್ದ ಭೋಜನಪ್ರಿಯರ ಎಲೆಯಲ್ಲಿದ್ದ ಮಾವಿನಹುಳಿ, ಸುವರ್ಣಗೆಡ್ಡೆ ಪಲ್ಯ, ಕುಂಬಳಕಾಯಿ ಹುಳಿ, ದ್ರಾಕ್ಷಿ ಗೋಡಂಬಿ ಮಿಶ್ರಿತ ಅಕ್ಕಿ ಪಾಯಸ, ಬಿಸಿಬಿಸಿ ಜಿಲೇಬಿ. ಆಹಾ ನಿಜಕ್ಕೂ ಅದು ಸಮ್ಮೇಳನಾ ಧ್ಯಕ್ಷರ ಕಾರ್ಯದ ಊಟದಂತಿತ್ತು ಎಂದು ಹೊಗಳುವ ಪಿಂಜರಾಪೋಲು ಪತ್ರಕರ್ತರಿಗೆ ನಮ್ಮ ಶೇಷಗಿರಿ ಏನು ಬರೆದಿದ್ದರೇನು, ಏನು ಕೆರೆದಿದ್ದರೇನು, ಥೂತ್ತೇರಿ!

* * * * * * *

ಆತ ಖೂಳ, ಆತ ಮೂಲತಃ ಕಳ್ಳ, ದ್ರೋಹಿ, ವಂಚಕ ಎಂಬಂತಹ ಕೂಗೊಂದು ಸಮ್ಮೇಳನದ ಮಧ್ಯಭಾಗದಿಂದಲೇ ಆರಂಭವಾಯ್ತಂತಲ್ಲಾ, ಜನರೆಲ್ಲಾ ಇದು ಎಡೂರಪ್ಪ ಕಡೆಯವರು ಕುಮಾರಸ್ವಾಮಿಗೆ ಬೈಯುತ್ತಿರುವ ಬೈಗುಳವೆಂದು ಭಾವಿಸುತ್ತಿರಬೇಕಾದರೆ, ಬೈಗುಳ ಮತ್ತೂ ತಾರಕಕ್ಕೇರಿ "ಆತ ಹಣ ಮಾಡಿದ್ದಾನೆ, ರೋಲ್‌ಕಾಲ್ ಗಿರಾಕಿ. ಅಂತಹ ವ್ಯಕ್ತಿ ಸಾಹಿತ್ಯ ಸಮ್ಮೇಳನದ ವೇದಿಕೆ ಹತ್ತಲು ಯೋಗ್ಯನಲ್ಲ" ಎಂಬ ಕೂಗು ನಿರಂತರವಾಗಿ ನಡೆಯುತ್ತಲೇ ಇತ್ತಂತ್ತಲ್ಲಾ, ಬೈಗುಳಕ್ಕೆ ಬೇಕಾದ ವ್ಯಕ್ತಿ ಸಾಹಿತ್ಯ ವೇದಿಕೆ ಏರಿ ಸಸ್ಪೆಂಡಾದ ಸ್ವಾಮಿ ಗತ್ತಿನಲ್ಲಿ ಎಲ್ಲರಿಗೂ ಕೈ ಮುಗಿಯಿತಂತಲ್ಲಾ, ಸದರಿ ವ್ಯಕ್ತಿ ಕರ್ನಾಟಕ ರಕ್ಷಣಾ ವೇದಿಕೆಯ ಏಕಮೇವಾದ್ವಿತೀಯ ನಾರಾಯಣಗೌಡನೆಂಬುದು ಆತ ತನ್ನನ್ನು ಬೈಯುತ್ತಿರುವವರಿಗೆ ಉತ್ತರ ಕೊಟ್ಟ ನಂತರ ಅರ್ಥವಾಗಿ ಹೋಯ್ತಂತಲ್ಲಾ, ಸದರಿ ನಾರಾಯಣಗೌಡನ ಭಾಷಾ ವೈಖರಿಗೆ ಸಾಹಿತಿಗಳು ಸುಸ್ತಾದರಂತಲ್ಲಾ ಥೂತ್ತೇರಿ!!



* * * * * * *

"ಕನ್ನಡ ಭಾಷೆ ಉಳಿಸಲೋಸ್ಕರ ಕೈಯೊಡ್ಡಿ ನಿಂತಿರುವ ಈ ನಾರಾಯಣನಿಗೆ ತಪ್ಪಿಲ್ಲದೆ ಒಂದು ಪತ್ರ ಬರೆಯಲು ಬರಲ್ಲ, ತಪ್ಪಿಲ್ಲದೆ ಕನ್ನಡ ಮಾತನಾಡಲೂ ಬರುವುದಿಲ್ಲವೆಂಬುದನ್ನು ಟಿವಿ ಮುಖಾಂತರ ನಾಡಿನ ಜನರೆಲ್ಲಾ ನೋಡಿದ್ದಾರೆ. ಆದರೂ ಇಡೀ ನಾಡಿನ ತುಂಬ ಸರ್ಕಲ್‌ಗಳಲ್ಲಿ ಈತ ಕಟೌಟ್‌ಗಳು, ಫ್ಲೆಕ್ಸ್‌ಗಳು ಪ್ರಕಾಶಿಸುತ್ತಿವೆ. ಈತನ ಮುಸುಡಿ ನೋಡಿದ ಅನ್ಯಭಾಷಿಕರೋಗಲಿ, ಕನ್ನಡಿಗರೇ ಕನ್ನಡಬಿಟ್ಟು ತೆಲುಗು ಕಲಿಯುತ್ತಾರೆ. ಇಂತಹ ಅಸಂಬದ್ಧ ಆಕೃತಿಯೊಂದು ಕುಮಾರಸ್ವಾಮಿ ಕಾಲದಲ್ಲಿ ಉತ್ತುಂಗ ಸ್ಥಿತಿ ತಲುಪಿತ್ತಂತೆ. ನಮ್ಮನ್ನು ಮೀನು ತಿನ್ನುವವರು ಎಂದು ಜರಿಯುವ ಈತ ಮೀನು ತಿನ್ನಲ್ಲವ? ಹಾವು ತಿನ್ನುವುದುಂಟ! ನಮ್ಮನ್ನು ಲೋಟ ತೊಳೆಯುವವರು ಎನ್ನುವ ಈತ ತಟ್ಟೆ ತೊಳೆಯುತ್ತಿದ್ದುದು ನಮಗೆ ಗೊತ್ತಿಲ್ಲವಾ? ಇವ ಬೆಂಗಳೂರಿನಲ್ಲಿ ಇದ್ದಷ್ಟು ಕನ್ನಡದ ಕತೆ ಮುಗಿಯುತ್ತದೆ. ಬೇಗ ಕನ್ನಡಿಗರು ಎಚ್ಚೆತ್ತುಕೊಂಡು ನಮ್ಮ ಸಂಕೋಚದ ಕನ್ನಡವನ್ನು ಕಾಪಾಡಿಕೊಳ್ಳಬೇಕಿದೆ" ಎಂದು ನಾರಾಯಣಗೌಡನ ಎದುರು ಬಣ-ಅಂದರೆ ಪ್ರವೀಣ್ ಶೆಟ್ಟಿ ಬಣ-ಸಾಹಿತ್ಯ ಸಮ್ಮೇಳನದ ಎದುರು ಶೆಡ್ಡು ಹೊಡೆದು ನಿಂತಿತ್ತಲ್ಲಾ, ಇದನ್ನು ನೋಡಿ ದ.ಕ. ಜನ "ಒಳ್ಳೆ ತಮಾಷೆ ಮಾರಾಯ್ರೆ" ಎಂದರಂತಲ್ಲಾ, ಥೂತ್ತೇರಿ!!

* * * * * * *

ಉಡುಪಿಯ ಭೋಜನ ಶಾಲೆಯಲ್ಲಿ ಎಲ್ಲರೂ ಸರಿಸುಮಾರು ಐದು ದಿನ ಉಂಡ ನಂತರ ಬರೋಬರಿ ಹದಿನೈದು ನಿರ್ಣಯಗಳನ್ನು ತೆಗೆದುಕೊಂಡರಂತಲ್ಲಾ, ಈ ನಿರ್ಣಯಗಳ ಪೈಕಿ ಕೆಲವು ದಕ್ಷಿಣ ಕನ್ನಡಕ್ಕೆ ಮಾತ್ರ ಅನ್ವಯಿಸುತ್ತ, ಬೇಗ ಅಭಿವೃದ್ಧಿಗೊಳ್ಳುವಂತಿದ್ದು ಇನ್ನುಳಿದವುಗಳೆಲ್ಲಾ ಇದುವರೆವಿಗೂ ನಡೆದ ಸಾಹಿತ್ಯ ಸಮ್ಮೇಳನಗಳಲ್ಲಿ ತೆಗೆದುಕೊಂಡ ನಿರ್ಣಯಗಳ ಜೊತೆ ಸೇರಿ, ಮಹಿಷಿ ವರದಿ, ನಂಜುಂಡಪ್ಪನ ವರದಿಯಂತಾಗಲಿವೆಯಂತಲ್ಲಾ, ಹದಿನೈದು ವರದಿಗಳನ್ನು ಓದಿದ ಕನ್ನಡ ರಕ್ಷಣಾ ವೇದಿಕೆಯ ಪ್ರವೀಣ ಶೆಟ್ಟಿ ಬಣ "ಓಹ್ ಇನ್ನೊಂದು ನಿರ್ಣಯ ಸೇರಿಸಬೇಕಿತ್ತಲ್ಲ ಮಾರಾಯ್ರೆ" ಎಂದು ಪೇಚಾಡಿಕೊಂಡರಂತಲ್ಲಾ, ಅದೇನೆಂದು ಕೇಳಲಾಗಿ "ಕರ್ನಾಟಕ ರಕ್ಷಣಾ ವೇದಿಕೆಯನ್ನು ಕೆಎಸ್‌ಆರ್‌ಟಿಸಿಯಂತೆ ವಿಭಾಗ ಮಾಡಿ ವಲಯಗಳನ್ನು ಮಾಡಬೇಕು. ಒಂದೊಂದು ವಲಯಕ್ಕೆ ಒಬ್ಬೊಬ್ಬನನ್ನು ಅಧ್ಯಕ್ಷನಾಗಿ ಮಾಡಿ ಅವರುಗಳ ಆದಾಯದಿಂದಲೇ ಸಾಹಿತ್ಯ ಸಮ್ಮೇಳನ ನಡೆಸಬೇಕು" ಎಂಬ ನಾರಾಯಣ ಗೌಡ ವಿರೋಧಿ ನಿರ್ಣಯವನ್ನು ಹೇಳಿದರಂತಲ್ಲಾ, ಥೂತ್ತೇರಿ!

* * * * * * *

ಉಡುಪಿ ಸಾಹಿತ್ಯ ಸಮ್ಮೇಳನದ ಬಗ್ಗೆ ಇನ್ನಷ್ಟು ತಿಳಿಯುವ ಕುತೂಹಲದಿಂದ ನಮ್ಮ ಬದಿಯಡ್ಕದ ತಾತ್ಕಾಲಿಕ ಬಾತ್ಮೀದಾರನನ್ನು ಮಾತನಾಡಿಸಬೇಕೆನಿಸಿತಲ್ಲಾ, ಆ ಕೂಡಲೇ ಆತನಿಗೆ ಫೋನ್ ಮಾಡಿ "ವಿನೋದ್ ಪೈ, ಸಾಹಿತ್ಯ ಸಮ್ಮೇಳನದಲ್ಲಿ ಏನು ನಡೆಯಿತು ಹೇಳಿ, ಸಂಕ್ಷಿಪ್ತವಾಗಿ ಎರಡೇ ಮಾತಲ್ಲಿ ಹೇಳಿ."

"ಏನು ನಡೆಯಿತು ಅಂತ ಕೇಳಿದರೆ ಯಂತ ಹೇಳುವುದು? ಇದನ್ನು ಸಾಹಿತ್ಯ ಸಮ್ಮೇಳನ ಅಂತ ಹೇಳುವುದು ಕಷ್ಟ. ಭೋಜನ ಸಮ್ಮೇಳನ ಅಂತ ಹೇಳಬಹುದು. ಒಂದು ಪೋಲಿಸ್ ಮಂತ್ರೀ ಛೆ, ಅವರು ಯಂತಕ್ಕೆ ಅಷ್ಟೊಂದು ಜನ ಇಲ್ಲಿ ಬಂದಿದಾರೆ ಅಂತ ನನಗೆ ಅರ್ಥವಾಗಲಿಲ್ಲ, ಸಾಹಿತ್ಯ ಸಮ್ಮೇಳನ ಅಂದರೆ ಅದೊಂದು ನಿರ್ಭೀತಿ ಜಾಗ ಹೌದಲ್ಲವ. ತರಹಾವರಿ ಡ್ರೆಸ್ಸಿನ ಪೊಲೀಸರು ಬಂದಿಲ್ಲಿ ಕವಾಯತು ನಡೆಸಿದ್ದು ನೋಡುವಾಗ ಪೊಲೀಸ್ ಇಲಾಖೆಯ ಪೆರೇಡ್ ಗ್ರೌಂಡ್ ನೋಡಿದಂತಾಯ್ತು. ಸಾರಿ ಮಾರಾಯ, ನಾನಾಗಲೆ ಎರಡು ಬಾರಿ ಇಂಗ್ಲಿಷ್ ಪದ ಬಳಸಿದೆ. ಮೊನ್ನೆ ಇಲ್ಲಿ ಆದರದ್ದೆ ಒಂದು ದೊಡ್ಡ ಗಲಾಟೆ. ಸಾಹಿತ್ಯ ಸಮ್ಮೇಳನ ನಡೆಯುವ ಒಂದು ದಿನದ ಮಟ್ಟಿಗೆ ಕನ್ನಡ ಪದವನ್ನು ಮಾತ್ರ ಬಳಸಬೇಕು ಅಂತ ನನಗೆ ಗೊತ್ತಿರಲಿಲ್ಲ. ಮೊನ್ನೆ ಇವ ಬಂದ, ಯಾರೆಂದರೆ, ಆಸ್ಕರ್ ಫರ್ನಾಂಡಿಸ್. ಅವ ಯಂತದೋ ಬರೆದುಕೊಂಡು ಬಂದದ್ದು ಓದಿ, ಓದಿಹೋದ. ಯಂತಕ್ಕೆ ಗೊತ್ತುಂಟ? ಚೆಡ್ಡಿಗಳು ಗಲಭೆ ಮಾಡಿದರು ಅದಕ್ಕೆ. ಆನಂತರ ಇವ ಬಂದ, ಆ ಜನ ಬಂದ ನಂತರ ಸರೀ ಗದ್ದಲವಾಯ್ತು, ಕಾರ್ಯಕ್ರಮ ಯಲ್ಲ ಪದ್ದ, ಅವ ಯಂತಕ್ಕೆ ಇಲ್ಲಿ ಬರಬೇಕು? ಗದ್ದಲ ಮಾಡೋದಕ್ಕೆ ಬೆಂಗಳೂರಿಲ್ಲವ? ಅಲ್ಲಿ ಮಾಡಿಕೊಳ್ಳಲಿ. ಇವರೇ ವಸೂಲಾತಿಯನ್ನು ಅಲ್ಲಿ ಹಂಚಿಕೊಳ್ಳಲಿ. ಸಾಯಲಿ ಮಾರ್ರೆ, ಆದರೆ ಸಾಹಿತ್ಯ ಸಮ್ಮೇಳನ ಹೀಗೆ ಆಗುವುದು ಬೇಡ. ಮೊದಲೆ ನಮ್ಮ ಉಡುಪಿಯಲ್ಲಿ ಪರ್ಯಾಯದ ಗದ್ದಲವುಂಟು. ಅಲ್ಲಿನ ಸ್ವಾಮಿಗಳಿಗೆ ತಲೆಬಿಸಿ ಎಷ್ಟಾಗಿತ್ತೆಂದರೆ, ಈ ಸಾಹಿತ್ಯ ಸಮ್ಮೇಳನಕ್ಕೆ ಬೇರೆ ಜಾಗ ಇಲ್ಲವ ಅಂದುಕೊಂಡು ಈ ಕಡೆ ಬರಲೇಯಿಲ್ಲ, ಸಾಯಲಿ ಮಾರ್ರೆ ನಾನು ಹೇಳುವುದೇನೆಂದರೆ, ಮುಂದೆ ಈ ಭೋಜನಕೂಟ ಮತ್ತು ಸಾಹಿತ್ಯ ಕೂಟ ಬೇರೆಬೇರೆ ಆಗಬೇಕು. ಇಲ್ಲೊಂದು ತಮಾಷೆ ಯಿತ್ತು, ಅದನ್ನು ಹೇಳಲೇಬೇಕು. ಇಲ್ಲೊಂದು ಜನ ಮುಂದಿನ ಸಾಹಿತ್ಯ ಪರಿಷತ್ ಅಧ್ಯಕ್ಷ ನಾನು ಎಂದು ಹೇಳಿಕೊಂಡು ಕರಪತ್ರ ಹಂಚುತ್ತ ಓಡಾಡುತ್ತಿತ್ತು, ಅದನ್ನು ನೋಡಿದಾಗ ಚಂದ್ರಶೇಖರ ಪಾಟೀಲರ ಭಾವ ಮೈದುನನಂತೆ ಕಾಣುತ್ತಿತ್ತು. ಓಹ್ ದೇವರೆ ನಮಗೆ ಇಂತ ಜನಗಳಿಂದ ಬಿಡುಗಡೆಯೇ ಇಲ್ಲವೆ? ಮತ್ತೆ ನಾನೆ ಫೋನ್ ಮಾಡ್ತೇನೆ."

ಥೂ, ಥೂ, ಥೂತ್ತೇರಿ!!!

ಆನೆ ಬಂತೊಂದಾನೆ ಯಾವೂರಾನೆ...

ಬಿ.ಎಂ. ಪುಟ್ಟಯ್ಯ



> ಕರ್ನಾಟಕದಲ್ಲಿ ಆಳುವ ವರ್ಗದ ರಾಜಕೀಯ ಪಕ್ಷಗಳ ಅಧಿಕಾರ ದಾಹದ ಕಿತ್ತಾಟದಿಂದ ಸರಕಾರ ಉರುಳಿದೆ. ಕಾಂಗ್ರೆಸ್ ತನ್ನ ಸೋಗಲಾಡಿತನವನ್ನು, ಬಿಜೆಪಿ ತನ್ನ ಕೋಮುವಾದವನ್ನು, ದಳ ಚಿಂತಾಜನಕ ಸ್ಥಿತಿಯಲ್ಲಿದೆ. ಇಂತಹ ಸನ್ನಿವೇಶದಲ್ಲಿ ಶೋಷಕ ರಾಜಕೀಯ ವಿಚಾರಗಳು, ಕೋಮುವಾದಿ ವಿಚಾರಗಳು ಅದಕ್ಕಿಂತ ಹೆಚ್ಚಾಗಿ ಸಾಮ್ರಾಜ್ಯಶಾಹಿ ಪರವಾದ ವಿಚಾರಗಳು ಬಿಎಸ್‌ಪಿ ಮೂಲಕ ಅತ್ಯಂತ ಪ್ರಗತಿಪರ. ಇಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿರುವ ಪ್ರಗತಿಪರ ಶಕ್ತಿಗಳು, ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳ ಒಂದು ಸಾಮಾನ್ಯ ವೇದಿಕೆಯ ಅಗತ್ಯ.

ಕರ್ನಾಟಕದಲ್ಲಿ ಆಳುವ ವರ್ಗದ ರಾಜಕೀಯ ಪಕ್ಷಗಳ ಅಧಿಕಾರ ದಾಹದ ಕಿತ್ತಾಟದಿಂದ ಸರಕಾರ ಉರುಳಿದೆ. ಖಾಲಿ ಇರುವ ವಿಧಾನಸೌಧವನ್ನು ಮತ್ತೆ ಏರಲು ವಿಕೃತ ಪ್ರಯತ್ನಗಳು ಸಾಗಿವೆ. ಕಾಂಗ್ರೆಸ್ ತನ್ನ ಸೋಗಲಾಡಿತನವನ್ನು, ಬಿಜೆಪಿ ತನ್ನ ಕೋಮುವಾದವನ್ನು ವರ್ತಮಾನಕ್ಕೆ ಸರಿಯಾಗಿ ಹದಗೊಳಿಸುವ ಕೆಲಸ ನಡೆಸಿವೆ. ದಳ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಚಿಂತಾಜನಕ ಸ್ಥಿತಿಯಲ್ಲಿದೆ. ಈ ಪಕ್ಷಗಳು ಕರ್ನಾಟಕದ ಜನತೆಯ ಪ್ರಗತಿಯ ಬಗ್ಗೆ ಕಿಂಚಿತ್ತೂ ಆಲೋಚನೆ ಮಾಡುತ್ತಿಲ್ಲ. ಬದಲಿಗೆ ಓಟುಗಳನ್ನು ಕದಿಯುವ, ಮತದಾರರನ್ನು ಹೊಸ ವಿಧಾನದಲ್ಲಿ ಮೋಸಮಾಡುವ, ಹೆಂಡ ಸೀರೆ ಇತ್ಯಾದಿಗಳನ್ನು ಹಂಚಿ ಓಟು ಹಾಕಿಕೊಳ್ಳುವ ಮತ್ತು ಉಳಿದಿರುವ ಕರ್ನಾಟಕವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಎಷ್ಟು ಬೇಗ ಮಾರಾಟ ಮಾಡಬೇಕು ಎಂಬ ವಿಕೃತ ಲೆಕ್ಕದಲ್ಲಿ ತೊಡಗಿವೆ. ಮತ್ತೊಂದು ಕಡೆ ಆಳುವ ವರ್ಗದ ರಾಜಕೀಯದ ಬಗ್ಗೆ ಆಸಕ್ತಿ ಇರುವ ಜನ ಯಾವ ಪಕ್ಷ ಅಧಿಕಾರಕ್ಕೆ ಬಂದರೂ ರೈತರ, ಕಾರ್ಮಿಕರ, ದಲಿತರ, ಆದಿವಾಸಿಗಳ ಮತ್ತು ನಿರುದ್ಯೋಗಿಗಳ ಬದುಕು ಹಸನಾಗುವುದಿಲ್ಲ, ಜಾಗತೀಕರಣದ ಶೋಷಣೆಯಿಂದ ಅವು ಕರ್ನಾಟಕವನ್ನು ವಿಮೋಚನೆ ಮಾಡುವುದಿಲ್ಲ ಎಂಬ ಚಿಂತೆಯಲ್ಲಿ ತೊಡಗಿದ್ದಾರೆ. ಆದ್ದರಿಂದಲೇ ಕರ್ನಾಟಕದ ಕಳೆದ ಎರಡು ಚುನಾವಣೆಗಳಲ್ಲಿ ಮತದಾರರು ಸರಕಾರ ನಡೆಸಲು ಯಾವುದೇ ರಾಜಕೀಯ ಪಕ್ಷಕ್ಕೆ ಅರ್ಹತೆ ಇಲ್ಲ ಎಂಬಂತೆ ಮತ ಚಲಾಯಿಸಿದ್ದಾರೆ. ಆದರಿಂದಲೇ ಯಾವ ಪಕ್ಷಕ್ಕೂ ಅಧಿಕಾರ ನಡೆಸುವಷ್ಟು ಬಹುಮತ ಬರಲಿಲ್ಲ. ಈ ಆತಂಕ ಈಗ ಮತ್ತೆ ನಿರ್ಮಾಣವಾಗಿದೆ.

ಈ ನಡುವೆ ಬಿಎಸ್‌ಪಿ ತಾನು ಕರ್ನಾಟಕದ ವಿಧಾನಸೌಧ ಏರಲು ಪೂರ್ವಭಾವಿ ಕೆಲಸದಲ್ಲಿ ತೊಡಗಿದೆ. ಬೇರೆ ಪಕ್ಷಗಳಿಗೆ ಸರಿಯಾಗಿ ಬುದ್ಧಿಕಲಿಸಿರುವ ಮತದಾರರು ಬಿಎಸ್‌ಪಿಗೆ ಮತ ಹಾಕುತ್ತಾರೆಯೇ? ಅಥವಾ ಬಿಎಸ್‌ಪಿ ಬೇರೆ ಪಕ್ಷಗಳಿಗಿಂತ ಭಿನ್ನವಾದ ಶೋಷಿತರ ಪರವಾದ ಕಾರ್ಯಸೂಚಿಯನ್ನು ಹೊಂದಿದೆಯೇ? ಅದು ಕರ್ನಾಟಕದ ವಿವಿಧ ಶೋಷಿತರನ್ನು ಪ್ರಗತಿಯತ್ತ ಕೊಂಡೊಯ್ಯುತ್ತದೆಯೇ? ಎಂಬುದು ಚರ್ಚೆಗೆ ಗ್ರಾಸವಾಗಿದೆ. ಬೇರೆ ಪಕ್ಷಗಳಲ್ಲಿ ಟಿಕೆಟ್ ಸಿಗದವರು, ಟಿಕೆಟ್ಟಿಗಾಗಿ ಪ್ರಯತ್ನಿಸಿ ಸೋತವರು ಈಗ ಬಿಎಸ್‌ಪಿ ಸೇರುತ್ತಿದ್ದಾರೆ. ಇದು ಬಿಎಸ್‌ಪಿಯ ಸಾಮರ್ಥ್ಯದ ಸೂಚನೆ ಅಲ್ಲ; ಬದಲಿಗೆ ಎಲ್ಲೂ ನೆಲೆ ಸಿಗದ ಅಸಹಾಯಕರ ತಂಗುದಾಣದ ಸೂಚನೆ ಅಷ್ಟೆ. ಉತ್ತರಪ್ರದೇಶದ ಬಿಎಸ್‌ಪಿ ಬಗ್ಗೆ ಅಜ್ಞಕತೆ ದಂತಕತೆಗಳನ್ನು ಉಚಿತವಾಗಿ ಸೃಷ್ಟಿಸಲಾಗಿದೆ. ಅವನ್ನು ಮತದಾರರು ನಂಬುವಂತೆ ಮಾಡುವ ಕುಪ್ರಯತ್ನ ಸಾಗಿದೆ. ಪಶ್ಚಿಮ ಬಂಗಾಳದ ಪರಿಷ್ಕರಣವಾದಿ ಕಮ್ಯುನಿಸ್ಟ್ ಸರಕಾರದ ಬಗ್ಗೆ ಇದೇ ಬಗೆಯ ಅಜ್ಞಕತೆ ದಂತಕತೆಗಳನ್ನು ಕಟ್ಟಲಾಗಿತ್ತು. ಆದರೆ ನಂದಿಗ್ರಾಮದಲ್ಲಿ ಎಸ್‌ಇಜೆಡ್ ವಿರೋಧಿಸಿ ಜನರು ನಡೆಸಿದ ರಾಜಿರಹಿತ ಹೋರಾಟಗಳು ಅಲ್ಲಿರುವ ಸಿಪಿಎಂ ಸರಕಾರ ಬಹುರಾಷ್ಟ್ರೀಯ ಕಂಪನಿಗಳ ಸೇವಕ ಮತ್ತು ಅದು ಜನತೆಯ ಪರವಾಗಿ ಇಲ್ಲ ಎಂಬುದನ್ನು ಬಹಿರಂಗವಾಗಿ ಸಾಬೀತುಪಡಿಸಿವೆ.

ಬಿಎಸ್‌ಪಿಯನ್ನು ಹುಟ್ಟಿಸಿದ ಸಾಮ್ರಾಜ್ಯಶಾಹಿ ಉದಾರವಾದಿ ನೀತಿಗಳು...

ಬಿಎಸ್‌ಪಿಯು ಭಾರತದಲ್ಲಿ ಎಂತಹ ರಾಜಕೀಯ ಆರ್ಥಿಕ ಪರಿಸ್ಥಿತಿಯಲ್ಲಿ ಜನ್ಮ ತಾಳಿತು ಎಂಬುದನ್ನು ಚಾರಿತ್ರಿಕವಾಗಿ ಸ್ಪಷ್ಟಪಡಿಸಿಕೊಳ್ಳಬೇಕಿದೆ. 90ರ ದಶಕದ ನಂತರ ಸಾಮ್ರಾಜ್ಯಶಾಹಿ ನೀತಿಗಳನ್ನು ನೇರವಾಗಿ ಭಾರತದ ಎಲ್ಲ ಕ್ಷೇತ್ರಗಳ ಮೇಲೆ ಬಲವಂತವಾಗಿ ಜಾರಿಗೊಳಿಸಲಾಯಿತು. ಇದಕ್ಕಾಗಿ 1984ರಿಂದ 90ರ ವರೆಗೆ ಭಾರತದ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಸಾಮ್ರಾಜ್ಯಶಾಹಿಯ ಉದಾರವಾದಿ ನೀತಿಗಳನ್ನು ಜಾರಿ ಮಾಡಲಾಯಿತು. ಆ ಮೂಲಕ ಸಾಮ್ರಾಜ್ಯಶಾಹಿ ಜಾಗತೀಕರಣವನ್ನು ಸಹಜವೆಂಬಂತೆ ಜಾರಿ ಮಾಡಲು ಒಂದು ಭೂಮಿಕೆಯನ್ನು ನಿರ್ಮಾಣ ಮಾಡಲಾಯಿತು. ಆ ಸಂದರ್ಭದಲ್ಲಿ ಕೆಳಜಾತಿ ಕೆಳವರ್ಗಗಳು ಜಾತಿ, ಸಮುದಾಯ, ಸಂಸ್ಕೃತಿಯ ನೆಲೆಗಳಲ್ಲಿ ಕಟ್ಟಿಕೊಂಡಿದ್ದ ಸಂಘಟನೆಗಳನ್ನು ರಾಜಕೀಯ ಪಕ್ಷಗಳಾಗಿ ರೂಪಾಂತರಿಸಲಾಯಿತು. ಸರಕಾರಿ ಇಲಾಖೆಗಳ ಮುಂದೆ ಸಾಮಾಜಿಕ ನ್ಯಾಯಕ್ಕಾಗಿ ಕೈಯೊಡ್ಡುವ ಬದಲು ಒಂದು ಸಂಘಟನೆಯೇ ರಾಜಕೀಯ ಪಕ್ಷವಾಗಿ ಸಾಮಾಜಿಕ ನ್ಯಾಯವನ್ನು ಜಾರಿಗೊಳಿಸಬಹುದು ಎಂಬ ಭ್ರಮೆಯನ್ನು ಮೂಡಿಸಲಾಯಿತು. ಫಲವಾಗಿ ಸಾಮಾಜಿಕ ನ್ಯಾಯವನ್ನು ಸಾಮಾಜಿಕ ನ್ಯಾಯದ ವಿಶಾಲವಾದ ಭೂಮಿಕೆಯಿಂದ ಪ್ರತ್ಯೇಕಿಸಿ ಕೇವಲ ಜಾತಿ ಮೀಸಲಾತಿ ಪಡೆಯುವುದು ಎಂಬುದಕ್ಕೆ ಸೀಮಿತಗೊಳಿಸಲಾಯಿತು. ಸಾಮಾಜಿಕ ನ್ಯಾಯದ ಪ್ರಧಾನ ಪ್ರಶ್ನೆಗಳಾದ ಭೂಮಿ ಹಂಚಿಕೆಯ ಪ್ರಶ್ನೆ ಮತ್ತು ಸಂಪತ್ತಿನ ಸಮಾನ ಹಂಚಿಕೆಯ ಪ್ರಶ್ನೆಗಳನ್ನು ಸಂಪೂರ್ಣ ಹತ್ತಿಕ್ಕಲಾಯಿತು. ದಲಿತರಿಗೆ ಸಾಮಾಜಿಕ ಸ್ಥಾನ ಮಾನ ಬೇಕು ಎಂಬುದಾಗಿ ಪೆಟಿಬೂರ್ಷ್ವಾ ಬುದ್ಧಿಜೀವಿಗಳು ಗೋಗರೆಯತೊಡಗಿದರು. ಈ ಹುಸಿ ಸಾಮಾಜಿಕ ನ್ಯಾಯದ ಹಿಂದೆ ಮುಖ್ಯವಾಗಿ ಮೂರು ಶಕ್ತಿಗಳು ಕೆಲಸ ಮಾಡಿದವು.

1. ಎನ್‌ಜಿಓಗಳು ವರ್ಣಶ್ರೇಣೀಕರಣವೇ ಇಲ್ಲಿಯ ಪ್ರಧಾನ ಪ್ರಶ್ನೆ ಎಂದವು. 2. ಕೆಲವು ಸಂಘಟನೆಗಳು ದಲಿತರು ಹಿಂದುಳಿದವರಿಗೆ ಸಾಮಾಜಿಕ ನ್ಯಾಯ ಸಿಗಬೇಕಾದರೆ ಸರಕಾರಿ ಸವಲತ್ತುಗಳಲ್ಲಿ ಪಾಲು ಸಿಗಬೇಕು ಎಂದವು. 3. ಈ ಎರಡರ ಮೂಲಕ ವರ್ಗ ಸಂಘರ್ಷವನ್ನು ಮುಚ್ಚಿಹಾಕಿ ಸಾಮ್ರಾಜ್ಯಶಾಹಿ ನವ ಉದಾರವಾದಿ ನೀತಿಗಳ ಲಾಭ ಪಡೆಯಬೇಕು ಎಂದು ಪ್ರಚಾರ ಮಾಡಲಾಯಿತು. ಮಂಡಲ್ ವರದಿ ಜಾರಿಯ ಬಗೆಗಿನ ಸಂಘರ್ಷಕ್ಕೂ ಇಡೀ ದೇಶವನ್ನು ಜಾಗತೀಕರಣಕ್ಕೆ ಒಪ್ಪಿಸಿದ್ದಕ್ಕೂ ನೇರವಾದ ಸಂಬಂಧವಿದೆ. ಹಾಗಾಗಿ ಬಿಎಸ್‌ಪಿ ಭಾರತದ ಶೋಷಿತರ ಒಡಲಿನಿಂದ ಹುಟ್ಟಲಿಲ್ಲ; ಬದಲಾಗಿ ಸಾಮ್ರಾಜ್ಯಶಾಹಿ ನೀತಿಗಳನ್ನು ಜಾರಿಗೊಳಿಸಲು ಭಾರತದಲ್ಲಿ ಭೂಮಿಕೆಯನ್ನು ಸಿದ್ಧಪಡಿಸುವ ಭಾಗವಾಗಿ ಮಾತ್ರವೇ ಬಿಎಸ್‌ಪಿ ಹುಟ್ಟಿದೆ.

ಕರ್ನಾಟಕದ ಮುಂದಿರುವ ರಾಜಕೀಯ ಸವಾಲುಗಳು...

ಕರ್ನಾಟಕದ ಮುಂದಿರುವ ರಾಜಕೀಯ ಸವಾಲುಗಳೆಂದರೆ ಅವು ಭಾರತದ ಮುಂದಿರುವ ಸವಾಲುಗಳ ಒಂದು ಭಾಗ ಅಷ್ಟೆ. ಕಳೆದ 60 ವರುಷಗಳಲ್ಲಿ ಕೇಂದ್ರದಲ್ಲಿ ಅಧಿಕಾರ ನಡೆಸಿರುವ ಎಲ್ಲ ರಾಜಕೀಯ ಪಕ್ಷಗಳು ದೇಶದ ಸಂಪತ್ತನ್ನು ಖೈಮೋಟಿಯ ಮೇಲೆ ವಿದೇಶಿ ದರೋಡೆಕೋರರಿಗೆ ಒತ್ತೆ ಇಟ್ಟು ಇಡೀ ದೇಶವನ್ನು ಮಾರಾಟ ಮಾಡಿದ್ದಾರೆ. ಪರಿಣಾಮವಾಗಿ ದೇಶದುದ್ದಗಲಕ್ಕೂ ಹಸಿವು, ಬಡತನ, ನಿರುದ್ಯೋಗ, ರೈತರ ಒತ್ತಾಯಪೂರ್ವಕ ಸಾವು, ಕೋಮು ಸಮಸ್ಯೆ ಮುಂತಾದವು ಮುಗಿಲು ಮುಟ್ಟಿವೆ. ಈ ಪ್ರಕ್ರಿಯೆಗೆ ಕರ್ನಾಟಕದ ರಾಜಕೀಯ ಕೂಡ ಹೊರತಾಗಿಲ್ಲ. ಕರ್ನಾಟಕದ ನೆಲ ಜಲ ಕೃಷಿ ಕೈಗಾರಿಕೆ ಸೇವಾವಲಯ ಎಲ್ಲವನ್ನೂ ಮಾರಾಟ ಮಾಡಿ ಜನಸಾಮಾನ್ಯರನ್ನು ಹಸಿವು ನಿರುದ್ಯೋಗ ಅಸಹಾಯಕತೆ ಅಭದ್ರತೆ ಮತ್ತು ಅಪಮಾನಗಳ ವಿಷಕೂಪಕ್ಕೆ ತಳ್ಳಲಾಗಿದೆ. ಇವುಗಳ ವಿರುದ್ಧ ಜನತೆ ನಡೆಸುವ ಹೋರಾಟಗಳನ್ನು ಪ್ರಭುತ್ವ ಬಲವಂತದಿಂದ ಹತ್ತಿಕ್ಕುತ್ತಿದೆ. ಅವುಗಳ ವಿರುದ್ಧ ಅಪಪ್ರಚಾರ ಮಾಡುತ್ತಿದೆ. ಪ್ರಗತಿಪರ ಶಕ್ತಿಗಳು, ರೈತ ದಲಿತ ಕಾರ್ಮಿಕರ ಪರ ಹೋರಾಟಗಳು ಐಕ್ಯಗೊಳ್ಳದ ವಾತಾವರಣ ಕರ್ನಾಟಕದಲ್ಲಿದೆ. ಇಂತಹ ಪರಿಸ್ಥಿತಿಯಲ್ಲಿ ಬಿಎಸ್‌ಪಿ ಓಟಿನಲ್ಲಿ ಪಾಲು, ಅಧಿಕಾರದಲ್ಲಿ ಪಾಲು ಕೇಳಲು ಮುಂದಾಗಿದೆ. ಆದರೆ ಅಧಿಕಾರ ನಡೆಸುವ ಎಲ್ಲ ಪಕ್ಷಗಳೂ ಇಡೀ ಕರ್ನಾಟಕವನ್ನು ಸಾಮ್ರಾಜ್ಯಶಾಹಿ ಶೋಷಣೆಗೆ ಮುಕ್ತವಾಗಿ ತೆರೆದಿಡುತ್ತಿರುವಾಗ ಬಿಎಸ್‌ಪಿ ಕೂಡ ತನ್ನ ಪಾಲಿನ ಕೆಲಸವನ್ನು ಶಿರಸಾವಹಿಸಿ ಮಾಡುತ್ತದೆ. ಕರ್ನಾಟಕವನ್ನು ಸಾಮ್ರಾಜ್ಯಶಾಹಿ ಶೋಷಣೆಗೆ ಎದುರಾಗಿ ನಿಲ್ಲಿಸುವ ರಾಜಕೀಯ ಪಕ್ಷದ ಬಹುದೊಡ್ಡ ಗೈರುಹಾಜರಿಯೇ ಇಂತಹ ವಿಕೃತ ಬೆಳವಣಿಗೆಗೆ ಕಾರಣವಾಗಿದೆ.

ಬಿಎಸ್‌ಪಿ ಮತ್ತು ಅಂಬೇಡ್ಕರ್ ವಿಚಾರಧಾರೆ

ಬಿಎಸ್‌ಪಿ ಅಂಬೇಡ್ಕರ್ ವಿಚಾರಧಾರೆಯ ಮೇಲೆ ನಿಂತಿದೆ ಎಂಬಂತೆ ಬಿಂಬಿಸಲಾಗುತ್ತಿದೆ. ಇದು ನಿಜವೇ ಎಂಬುದನ್ನು ಪರಿಶೀಲಿಸೋಣ. ಅಂಬೇಡ್ಕರ್ ಭೂಮಿ ಮತ್ತು ದೇಶದ ಸಂಪತ್ತನ್ನು ರಾಷ್ಟ್ರೀಕರಣ ಮಾಡಬೇಕು ಎಂಬುದಾಗಿ ಹೋರಾಡಿದ್ದರು. ಜಾತಿಯನ್ನು ಸಂಪೂರ್ಣ ನಿರ್ಮೂಲನೆ ಮಾಡುವುದು ಮತ್ತು ಜನತಂತ್ರವನ್ನು ಜಾರಿಗೊಳಿಸುವುದು ಅಂಬೇಡ್ಕರರ ಹೋರಾಟದ ಪ್ರಧಾನ ಭಾಗವಾಗಿತ್ತು. ಹಾಗಾದರೆ ಬಿಎಸ್‌ಪಿ ಭೂಮಿ ಪ್ರಶ್ನೆಯನ್ನು ಹೇಗೆ ನಿರ್ವಹಿಸಿದೆ ಮತ್ತು ಜಾತಿ ನಿರ್ಮೂಲನಕ್ಕೆ ಅದರ ನಿರ್ದಿಷ್ಟ ಕಾರ್ಯಕ್ರಮಗಳೇನು? ಅಂದರೆ ಅಂಬೇಡ್ಕರರು ಯಾವುದನ್ನು ಹೋರಾಟದ ಕೇಂದ್ರದಲ್ಲಿ ಇಟ್ಟಿದ್ದರೊ ಅವನ್ನು ಬಿಎಸ್‌ಪಿ ಸಂಪೂರ್ಣ ಪರಿಧಿಗೆ ತಳ್ಳಿದೆ. ಅಂಬೇಡ್ಕರ್ ಯಾವುದನ್ನು ಪರಿಧಿಯ ಪ್ರಶ್ನೆಯನ್ನಾಗಿ ಪರಿಗಣಿಸಿದ್ದರೊ ಅದನ್ನು ಬಿಎಸ್‌ಪಿ ಕೇಂದ್ರಕ್ಕೆ ತಂದಿದೆ. ಉದಾ: ಬೌದ್ಧಧರ್ಮ. ಆ ಮೂಲಕ ಅಂಬೇಡ್ಕರ್ ವಿಚಾರಧಾರೆಯನ್ನು ಸಂಪೂರ್ಣ ಪಕ್ಕಕ್ಕಿಟ್ಟು ಅದರ ಜಾಗದಲ್ಲಿ ಎನ್‌ಜಿಓ ವಿಚಾರಧಾರೆ ಮತ್ತು ಸಾಮ್ರಾಜ್ಯಶಾಹಿಪರವಾದ ಕ್ರಾಂತಿಕಾರಿ ವಿರೋಧಿ ಆಲೋಚನೆಗಳನ್ನು ಬಿಎಸ್‌ಪಿ ಹೊಂದಿದೆ.



ರಾಜ್ಯಾಧಿಕಾರ ಹಿಡಿಯುವುದೆಂದರೇನು...

'ದಲಿತರು ರಾಜ್ಯಾಧಿಕಾರ ಹಿಡಿಯಬೇಕು ಎಂದು ಅಂಬೇಡ್ಕರ್ ಹೇಳಿದ್ದಾರೆ' ಎಂಬುದು ಬಿಎಸ್‌ಪಿಯ ವಾದ. ರಾಜ್ಯಾಧಿಕಾರ ಹಿಡಿಯುವುದು ಎಂದರೆ ಶೋಷಕ ಪ್ರಭುತ್ವದಲ್ಲಿ ಎಂಎಲ್‌ಎ, ಎಂಪಿಗಳಾಗಿ ಮಂತ್ರಿಮಂಡಲ ರಚಿಸಿ ಅಧಿಕಾರ ನಡೆಸುವುದು ಎಂದು ತಪ್ಪು ತಿಳಿದಿದ್ದಾರೆ. ಶೋಷಿತರು ಮತ್ತು ದಲಿತರು ರಾಜ್ಯಾಧಿಕಾರ ಹಿಡಿಯುವುದು ಎಂದರೆ ಇವರದೇ ಆದ ಸಂವಿಧಾನ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳನ್ನು ಹೊಸದಾಗಿ ನಿರ್ಮಿಸುವುದು ಎಂದು ಅರ್ಥ. ಇಂಡಿಯಾದಲ್ಲಿ ಈಗ ಸಂಸದೀಯ ಪ್ರಜಾಪ್ರಭುತ್ವ ಇದೆ. ಇದು ಸಾಮ್ರಾಜ್ಯಶಾಹಿ ಶೋಷಣೆಗೆ ದೇಶದ ಸಂವಿಧಾ... ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗ... ಒತ್ತೆ ಇಟ್ಟಿದೆ. ಅದರಿಂದಲೆ ಸಾಮ್ರಾಜ್ಯಶಾಹಿ ಶೋ... ಇವುಗಳ ನೆರವಿನಿಂದಲೆ ನಡೆಯುತ್ತಿದೆ. ಹಾಗಾಗಿ ... ಬಂಡವಾಳಶಾಹಿ ಪ್ರಭುತ್ವ. ಇದರಲ್ಲಿ ಸರಕಾರ... ಸಾಮ್ರಾಜ್ಯಶಾಹಿ ಶೋಷಣೆಗೆ ಮಧ್ಯವರ್ತಿಗಳಾಗಿ ... ಮಾಡುವ ಏಜೆಂಟ್‌ಗಳಾಗಿವೆ. ಇದೇ ಮಾತು ಕ... ಟಕಕ್ಕೂ ನೇರವಾಗಿ ಅನ್ವಯಿಸುತ್ತದೆ. ಇಲ್ಲಿನ ಸರಕಾರ... ಎಂದರೆ ಎಸ್‌ಇಜೆಡ್‌ನಂತಹ ಜನವಿರೋಧಿ ಕ... ಯೋಜನೆಗಳನ್ನು ಜಾರಿ ಮಾಡಿ, ರೈತ ದಲಿತ ಕಾ... ನಿರುದ್ಯೋಗಿಗಳ ಬದುಕನ್ನು ಬೀದಿಪಾಲು ಮಾ... ಏಜೆಂಟ್‌ಗಳು. ಇಂತಹ ಏಜೆಂಟ್ ಕೆಲಸ ಮಾ... ಯಾವ ಪಕ್ಷ ಇದ್ದರೇನು? ಅದು ಕಾಂಗ್ರೆಸ್ಸೊ, ದಳ... ಬಿಎಸ್‌ಪಿಯೊ. ಅಂದರೆ ಸಾಮ್ರಾಜ್ಯಶಾಹಿ ಲೂ... ಅನುವು ಮಾಡಿಕೊಡುವ ಮತ್ತು ದೇಶದ ಜನತೆಯ... ಕ್ರೂರ ಸ್ಥಿತಿಗೆ ತಳ್ಳುವ ರಾಜಕೀಯವನ್ನು ರಾಜ್ಯಾಧಿ... ಎಂದು ವಿವರಿಸಿಕೊಂಡಿದ್ದಾರೆ. ಈ ದೇಶದ ಸಂವಿಧಾ... ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳೆಲ್ಲ... ಈ ಕೆಲಸದಲ್ಲಿ ನಿರತವಾಗಿವೆ. ಹಾಗಾಗಿ ಇವುಗಳ... ಈ ದೇಶದ ಶೋಷಿತ ದಲಿತ ರೈತ ಕಾರ್ಮಿ... ಬದುಕು ಬದಲಾಗುವುದಿಲ್ಲ, ಇವು ಶೋಷಣೆಯ... ಲೂಟಿಯನ್ನು ಇನ್ನಷ್ಟು ಹೆಚ್ಚಿಸುತ್ತವೆ. ಆದ್ದರಿಂದ... ಶೋಷಕರೆಲ್ಲರೂ ಅವುಗಳನ್ನು ಶ್ರೇಷ್ಠವಾದವೆಂ... ಅವುಗಳಿಂದಲೇ ಶೋಷಿತರ ಬಿಡುಗಡೆ ಎಂ... ಬೊಗಳೆ ಹೊಡೆಯುತ್ತಿದ್ದಾರೆ.

ಕತ್ತಿ ಪರಕೀಯರದಾದರೆ ಮಾತ್ರ ನೋವೆ! ನಮ್ಮವರೆ ಹದಹಾಕಿ ತಿವಿದರೆ ಅದು ಹೂವೆ!

ವಸಾಹತು ಶೋಷಣೆಯ ಸಂದರ್ಭ... ದೇಶದೊಳಗಿನ ಶೋಷಕರು ಮಾಡುತ್ತಿದ್ದ ಶೋ... ಯನ್ನು ಕುವೆಂಪು ಅವರು ಮೇಲಿನಂತೆ ವಿ... ದ್ದರು. ಅದು ಈಗ ಬಿಎಸ್‌ಪಿಗೆ ಸರಿಯ... ಹೊಂದುತ್ತದೆ. 'ದಲಿ... ಅಭಿವೃದ್ಧಿಯಾಗಬೇ... ದರೆ ದಲಿತರ ಬಂಡ... ಬೆಳೆಯಬೇಕು' ಎಂಬುದು ಬಿಎಸ್‌ಪಿ... ಮುಖ್ಯ ಆಲೋಚನ... ದಲಿತರ ಬಂಡವಾಳ ಎಂದರೆ ದಲಿತರು ಬಂಡವಾಳಶಾ... ಗಳಾಗಬೇಕು ಎಂದೇ ಅರ್ಥ. ಬಂಡವಾಳಯಾರದ... ರೇನು? ಶೋಷಣೆಯೇ ಅದರ ಸ್ವಭಾವ ಮತ್ತು ಶೋ... ಮಾಡುವುದರಿಂದಲೇ ಬಂಡವಾಳ ಸೃಷ್ಟಿಯಾಗು... ಅಂದರೆ ದಲಿತರು, ಅವರಲ್ಲಿ ಎಲ್ಲರೂ ಅಲ್ಲ ಕೆಲ... ಮಾತ್ರ ಬಂಡವಾಳಶಾಹಿ ಶೋಷಕರಾಗಬೇಕು; ಉಳಿದ... ಅವರ ಶೋಷಣೆಗೆ ಒಳಗಾಗಬೇಕು ಎಂಬುದೇ ಅ... ನಿಜವಾದ ಅರ್ಥ. ಹಾಗಾಗಿ 'ಬಿಎಸ್‌ಪಿ ನಮ್ಮ ... ಎಂದು ಭಾವಿಸುವ ಯಾರೇ ಆಗಲಿ ಆಲೋಚನೆ ಮ... ಬೇಕಾದುದಿಷ್ಟೆ: ಬಿಎಸ್‌ಪಿ ಒಳಗಿನವರೇ ಬಂಡ... ಎಂಬ ಶೋಷಣೆಯ ಕತ್ತಿಗೆ ಹದಹಾಕಿ ತಿವಿಯುತ್ತ... ಹಾಗೆ ತಿವಿಯುವ ಕತ್ತಿ ಹೂವಾಗಿರಲು ಸಾಧ್ಯವೇ? ದುರ... ವೆಂದರೆ ಹದಹಾಕಿ ರೆಡಿ ಮಾಡಿರುವ ಕತ್ತಿಯನ್ನೇ ಜನ... ಹೂವು ಎಂದು ನಂಬುವಂತೆ ಒಪ್ಪಿಸುವ ಕೆಲಸ ಭರದಿ... ನಡೆಯುತ್ತಿದೆ. ಇಂದಲ್ಲ ನಾಳೆ ಕರ್ನಾಟಕವು ಪಶ್ಚಿ... ಬಂಗಾಳದ ನಂದಿಗ್ರಾಮ ಆಗುವ ಸೂ... ದೂರವಿಲ್ಲ; ಆಗ ಬಿಎಸ್‌ಪಿಯನ್ನು ಬೆಂ... ಸುವ ಇದೇ ಜನ ಸಾಮ್ರಾಜ್ಯಶಾಹಿ ಏಜೆಂ... ಗುಂಡಿಗೆ ಎದೆಕೊಡಬೇಕಾಗುತ್ತದೆ. ಅಂ... ದುರಂತ ಭವಿಷ್ಯದ ಅಂದಾಜು ಮಾಡಲಾ... ಜನರನ್ನು ತಪ್ಪು ದಾರಿಗೆ ಎಳೆಯಲಾಗುತ್ತ...

ಮುಂದೇನು . . .

ಕರ್ನಾಟಕವನ್ನು ಉಳಿಸುವುದು ಇಲ್ಲಿ... ಶೋಷಿತ ದುಡಿವ ಜನರ ಕೈಯಲ್ಲಿ... ಮುಂದಿನ ಚುನಾವಣೆಯಲ್ಲಿ ಬಿಎಸ್‌ಪಿ ಎಷ್ಟು ಸ್ಥಾನಗಳ... ಪಡೆಯಬಹುದು ಎಂಬುದು ಪ್ರಶ್ನೆಯಲ್ಲ; ಬದಲ... ಅದು ಎಂತಹ ರಾಜಕೀಯ ವಿಚಾರಗಳನ್ನು ಹರಡುತ್ತ... ಅದು ಯಾರಿಗೆ ಲಾಭ ತರುತ್ತದೆ ಎಂಬುದು ಮು... ಪ್ರಶ್ನೆ. ಬೇರೆಬೇರೆ ಪಕ್ಷಗಳಲ್ಲಿದ್ದವರು ಬಿಎಸ್‌... ಬರುತ್ತಿರುವುದರಿಂದ ಶೋಷಕ ರಾಜಕೀಯ ವಿಚಾರಗಳು... ಕೋಮುವಾದಿ ವಿಚಾರಗಳು ಅದಕ್ಕಿಂತ ಹೆಚ್ಚಾಗಿ ಸಾಮ್ರಾಜ್ಯ... ಶಾಹಿ ಪರವಾದ ವಿಚಾರಗಳು ಬಿಎಸ್‌ಪಿ ಮೂ... ಅತ್ಯಂತ ಪ್ರಗತಿಪರ ಎಂಬಂತೆ ಹರಡುತ್ತವೆ. ಇದು ಶೋ... ಮತ್ತು ಕೋಮುವಾದಿ ರಾಜಕೀಯ ಪಕ್ಷಗಳಿಗೆ ಹಾ... ಹಾಕುತ್ತದೆ. ಇಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿರು... ಪ್ರಗತಿಪರ ಶಕ್ತಿಗಳು, ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿ... ಒಂದು ಸಾಮಾನ್ಯ ವೇದಿಕೆಗೆ ಬರುವ ಚಾರಿತ್ರಿಕ ಅ... ವಿದೆ.



ಪ್ರೀತಿಯ ಒಂದು ಸ್ಪರ್ಶದಲ್ಲಿಯೇ ಪ್ರತಿಯೊಬ್ಬನೂ ಕವಿಯಾಗಿಬಿಡುತ್ತಾನೆ -ಪ್ಲೇಟೋ



ಮೈಸೂರಿನಲ್ಲಿ ಮಹೇಶ್ ಕಸರತ್ತು

[illegible]

ಆದು ಸರಿಸುಮಾರು ಒಂದೂವರೆ ಲಕ್ಷದಷ್ಟು ಶ್ರದ್ಧಾವಂತ ಕೇಡರ್‌ಗಳ ನಿಗೂಢ ಜಾಲ. ಯಾವುದೇ ಕುಗ್ರಾಮದಿಂದ ಹಿಡಿದು ನಗರವೊಂದರ ಯಕಶ್ಚಿತ್ ಮತಗಟ್ಟೆಗೆ ಬಂದರೂ ಕನಿಷ್ಠ ಹನ್ನೊಂದು ಮಂದಿಯ ಬೂತ್ ಕಮಿಟಿಯಿದೆಯಲ್ಲ; ಅದೇ ಅದರ ತಾಕತ್ತು, ಅಂಬೇಡ್ಕರ್ ಫೋಟೋ, ಮಾಯಾವತಿಯ ಬ್ಯಾನರ್ ಮತ್ತು ಆನೆ ಗುರುತಿನ ನೀಲಿ ಪತಾಕೆಯೇ ಅದರ ಅಸ್ತ್ರ. ಜೈಭೀಮ್ ಎಂಬುದು ಇವರೆಲ್ಲರ ತಾರಕ ಮಂತ್ರ!

ಇವತ್ತು ಆರೆಸ್ಸೆಸ್ ತನ್ನ ಕೇಸರಿ ಭಗವಾಧ್ವಜದಲ್ಲಿ ಸೋಲುತ್ತಿರಲಿಲ್ಲ. ಸಕಲೇಶಪುರವನ್ನು ಆ ಕಾಲದಿಂದಲೂ ಪ್ರತಿನಿಧಿಸುತ್ತಲೇ ಬಂದಿದ್ದ ಬಿ.ಬಿ. ಶಿವಪ್ಪ ಜೆಡಿಎಸ್‌ನ ರೈತನಾಯಕ ವಿಶ್ವನಾಥ್ ವಿರುದ್ಧ ಸೋತಿದ್ದು ಕೇವಲ 8 ಸಾವಿರ ಮತಗಳ ಅಂತರದಲ್ಲಾದರೂ ಬಿಎಸ್‌ಪಿ ರಾಜ್ಯ ನಾಯಕ ಶ್ರೀಧರ್ ಕಲಿವೀರರಿಗೆ 17 ಸಾವಿರದಷ್ಟು ಮತಗಳು ಬಿದ್ದಿದ್ದವು.


ಇದರರ್ಥ ಕಾಂಗ್ರೆಸ್ ನಾಯಕ ಶಿವಪ್ಪ ಸೋತಿದ್ದೇ ಬಿಎಸ್‌ಪಿಯಿಂದಾಗಿ!

ಇನ್ನು ಕೆ.ಆರ್. ನಗರಕ್ಕೆ ಬಂದರೆ ಅಲ್ಲಿ ಮಾಜಿ ಮಂತ್ರಿ ವಿಶ್ವನಾಥ್‌ರನ್ನು ಜೆಡಿಎಸ್‌ನ ಮಂಚನಹಳ್ಳಿ ಮಹದೇವ್ ಸಾವಿರ ಓಟುಗಳು ಬರದಿದ್ದರೆ ದೇವೇಗೌಡರೆಲ್ಲಿ ಲೋಕಸಭಾ ಸದಸ್ಯರಾಗುತ್ತಿದ್ದರು? ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಬಿಎಸ್‌ಪಿ ಅಭ್ಯರ್ಥಿಯಾಗಿದ್ದ [illegible] 99 ಸಾವಿರದಷ್ಟು ಓಟು ಕಬಳಿಸದೇ ಹೋಗಿದ್ದರೆ ಕಾಂಗ್ರೆಸ್ಸಿನ ಸಿದ್ಧರಾಜು ಸೋತು ಜೆಡಿಎಸ್‌ನ ಶಿವಣ್ಣ ಹಾಗೇ ಹೇಗೆ ಗೆಲ್ಲುತ್ತಿದ್ದರು?

ಯಾವ ಬಿಎಸ್‌ಪಿಯನ್ನು ಕಾಂಗ್ರೆಸ್, ಬಿಜೆಪಿ, ದಳಗಳೆಲ್ಲ ಲೆಕ್ಕಕ್ಕಿಟ್ಟಿರಲಿಲ್ಲವೋ ಅದೇ ಬಿಎಸ್‌ಪಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕಾಂಗ್ರೆಸ್ಸಿಗೇ ಅಧಿಕಾರ ತಪ್ಪಿಸಿತ್ತು, ಅತಂತ್ರ ವಿಧಾನಸಭೆಯನ್ನು ಸೃಷ್ಟಿಸಿತ್ತು, ಕುಮಾರಸ್ವಾಮಿ [illegible]

ಹಾರುತಿಹುದು ಏರುತಿಹುದು ನೀಲಿ ಬಣ್ಣದ ಬಾವುಟ

ಬಿಎಸ್‌ಪಿ ಎಂಬ ನಿಗೂಢ ಶಕ್ತಿ!



ಡಾ. [illegible]

ಗೋಲ್ವಾಲ್‌ಕರ್ ಪಕ್ಷಕ್ಕೇ ಅಂಬೇಡ್ಕರ್ ಫೋಟೋ ಹಾಕುತ್ತಿದೆಯೆಂದರೆ, ಸೋನಿಯಾ ಗಾಂಧಿ ಕರೆಕರೆದು ಮಾಯಾವತಿಗೆ ಮಸ್ಕಾ ಹೊಡೆಯುತ್ತಾರೆಂದರೆ, ಅಂಥಾ ಅಮಿತಾಬ್ ಬಚ್ಚನ್ನೇ ಬಂದು ಮುಲಾಯಂಸಿಂಗ್‌ಗೆ ಓಟು ಕೊಡಿ ಎಂದರೂ ಉತ್ತರ ಪ್ರದೇಶ ಆತನನ್ನು ಸೋಲಿಸುತ್ತದೆಯೆಂದರೆ; ಅದಕ್ಕೆ ಕಾರಣವೇ ಬಹುಜನ ಸಮಾಜ ಪಕ್ಷ ಅರ್ಥಾತ್ ಬಿಎಸ್‌ಪಿ.

ಸದ್ಯ ಕನ್ನಡಿಗರ ಪಾಲಿಗದು ಹೊಚ್ಚ ಹೊಸ ಕುದುರೆ!

ಅದು 1994 ರ ಮಾತು. ಆವತ್ತಿನ ವಿಧಾನಸಭಾ ಚುನಾವಣೆಯಲ್ಲಿ ಬೆರಳೆಣಿಕೆಯಷ್ಟು ಕ್ಷೇತ್ರಗಳಿಗೆ ಸ್ಪರ್ಧಿಸಿದ್ದ ಬಹುಜನ ಸಮಾಜ ಪಕ್ಷವೆಂದರೆ ಆವತ್ತಿನ ಮಟ್ಟಿಗದು ಸೋಲುವ ಪಕ್ಷವೆ. ಮುಂದೆ 1999 ರ ಚುನಾವಣೆಯ ಹೊತ್ತಿಗದು ಸೋಲಿಸುವ ಪಕ್ಷವಾಗಿ ಬೆಳೆದಿತ್ತು. ಆನಂತರ 2004 ರ ಚುನಾವಣೆಯಲ್ಲೂ ಬಿಎಸ್‌ಪಿಯೆಂದರೆ ಸೋಲಿಸುವ ಪಕ್ಷವಾಗೇ ಇತ್ತು, ಇವತ್ತಿಗದು ಗೆಲ್ಲುವ ಪಕ್ಷವಲ್ಲದಿರಬಹುದು. ಹಾಗಂತ ಕಡೆಗಣಿಸುವ ಪಕ್ಷವಂತೂ ಖಂಡಿತ ಅಲ್ಲ.

ಏನೀವತ್ತು ಜೆಡಿ(ಎಸ್) ಮತ್ತು ಬಜೆಪಿ ಕೂಟ ಅಧಿಕಾರದ ರುಚಿ ಕಂಡಿದೆಯೋ, ಮಾಮೂಲಿ ಶಾಸಕನಾಗಿದ್ದ ಕುಮಾರಸ್ವಾಮಿ ಮುಖ್ಯಮಂತ್ರಿಯಾದರೋ ಮತ್ತು ಜೀವನ ಪರ್ಯಂತ ಅಧಿಕಾರ ನೋಡಲಸಾಧ್ಯರಂತಿದ್ದ ಯಡ್ಡಿ ಕೂಡ ಮುಖ್ಯಮಂತ್ರಿಯಾಗಿ ಬಿಟ್ಟರೋ; ಇವರೆಲ್ಲರೂ ಋಣಿಯಾಗಬೇಕಿದ್ದದ್ದು ಬಹುಜನ ಸಮಾಜ ಪಕ್ಷಕ್ಕೆ!

ಕಳೆದ ಚುನಾವಣೆಯಲ್ಲಿ ಬಿಎಸ್‌ಪಿಯಿಂದಾಗಿಯೇ ನಲವತ್ತು ಮಂದಿ ಕಾಂಗ್ರೆಸ್ ಅಭ್ಯರ್ಥಿಗಳು ಸೋಲದೇ ಹೋಗಿದ್ದರೆ, ಕುಮಾರಸ್ವಾಮಿ ಎಲ್ಲಿ ಮುಖ್ಯಮಂತ್ರಿಯಾಗುತ್ತಿದ್ದ? ಬಜೆಪಿಗೆ ಎಪ್ಪತ್ತೊಂಭತ್ತು ಮಂದಿ ಎಮ್ಮೆಲ್ಲೇಗಳಾದರೂ ಹೇಗೆ ದಕ್ಕುತ್ತಿದ್ದರು?

ಅದು ಬಹುಜನ ಸಮಾಜ ಪಕ್ಷದ ಕ್ಲುಪ್ತಶಕ್ತಿ!


ಉದಾಹರಣೆಗೆ ಬೆಂಗಳೂರು ಗ್ರಾಮಾಂತರದ ಆನೇಕಲ್ ಕ್ಷೇತ್ರವನ್ನೇ ತೆಗೆದುಕೊಂಡರೆ, ಅಲ್ಲಿ ಬಿಎಸ್‌ಪಿ ಅಭ್ಯರ್ಥಿಯಾಗಿದ್ದದ್ದು ಆದರ ರಾಜ್ಯಾಧ್ಯಕ್ಷ ಬಿ. ಗೋಪಾಲ್. ಅವರಿಗೆ ಬಿದ್ದ ಒಟ್ಟು ಮತ 26 ಸಾವಿರದಷ್ಟು. ಕಾಂಗ್ರೆಸ್ ಅಭ್ಯರ್ಥಿ ಬಿ. ಶಿವಣ್ಣನವರಿಗೆ ಇನ್ನೂ ಮೂರು ಸಾವಿರದಷ್ಟು ಹೆಚ್ಚಗೆ ಮತ ಸಿಕ್ಕಿದ್ದರೆ ಬಜೆಪಿಯ ನಾರಾಯಣಸ್ವಾಮಿ ಗೆಲ್ಲುತ್ತಿರಲಿಲ್ಲ, ಕಾಂಗ್ರೆಸ್ ಪಾಲಿನ 26 ಸಾವಿರದಷ್ಟು ಮತ ಕಿತ್ತ ಬಿಎಸ್‌ಪಿ ಕಾಂಗ್ರೆಸ್ಸಿಗೆ ಮುಳುವಾಗಿದ್ದು ಕೇವಲ ಆನೇಕಲ್ಲಿನಲ್ಲಷ್ಟೇ ಆಗಿದ್ದರೆ ಈ [illegible]

ಚಿಕ್ಕಮಗಳೂರಿನ ಶೃಂಗೇರಿಯಲ್ಲಿ ಬಿಎಸ್‌ಪಿಯ ಕೆ.ಎಂ. ಗೋಪಾಲ್ ಸರಿಸುಮಾರು ಆರು ಸಾವಿರದಷ್ಟು ಮತ ಕೀಳದೇ ಹೋಗಿದ್ದರೆ ಕಾಂಗ್ರೆಸ್ ನಾಯಕ ಡಿ.ಬಿ. ಚಂದ್ರೇಗೌಡರು ಬಜೆಪಿಯ ಜೀವರಾಜ್ ವಿರುದ್ಧ ಅತ್ಯೊಂದು ಹೀನಾಯವಾಗಿ ಸೋಲಿಸುತ್ತಾರೆ. ಇಲ್ಲಿ ಮಹದೇವ್‌ಗೆ 40,341 ಮತಗಳು ಬಿದ್ದರೆ ವಿಶ್ವನಾಥ್‌ಗೆ 40,018 ಮತಗಳು ಬಿದ್ದಿವೆ. ಅದು 323 ಮತಗಳ ಅಂತರದ ಫೋಟೋ ಫಿನಿಷ್. ಬಹುಶಃ ಅಲ್ಲಿನ ಬಿಎಸ್‌ಪಿಯ ಅಭ್ಯರ್ಥಿಯಾಗಿದ್ದ ಮೊಹಮ್ಮದ್ ಅಸಗರ್ ಪಾಷಾ 6048 ಮತಗಳನ್ನು ಕೀಳದೇ ಹೋಗಿದ್ದರೆ ವಿಶ್ವನಾಥ್ ಗೆದ್ದುಬಿಡುತ್ತಿದ್ದರು.

ಇದು ಒಂದೆರಡು ಅಸೆಂಬ್ಲಿ ಕ್ಷೇತ್ರಗಳ ಕತೆಯಲ್ಲ. ಪಿರಿಯಾಪಟ್ಟಣದಲ್ಲಿ ಬಿಎಸ್‌ಪಿಯ ಕೃಷ್ಣ 13 ಸಾವಿರದಷ್ಟು ಓಟು ಕಿತ್ತ ಫಲವಾಗೇ ಕಾಂಗ್ರೆಸ್ ಸೋತು ಜೆಡಿಎಸ್‌ನ ವೆಂಕಟೇಶ್ ಗೆದ್ದರು. ಅರಕಲಗೂಡಿನಲ್ಲಿ ಕಾಂಗ್ರೆಸ್‌ನ ವಾಲೇ ಮಂಜು ಸೋತಿದ್ದು ಕೇವಲ ಮೂರು ಸಾವಿರ ಮತಗಳ ಅಂತರದಲ್ಲಿ, ಅಲ್ಲಿ ಬಿಎಸ್‌ಪಿಯ ರಾಜೇಶ್ ಆರೂವರೆ ಸಾವಿರದಷ್ಟು ಮತ ಗಿಟ್ಟಿಸದೇ ಹೋಗಿದ್ದರೆ ಎ.ಟಿ. ರಾಮಸ್ವಾಮಿ ಗೆಲ್ಲುತ್ತಿರಲಿಲ್ಲ. ಬನ್ನೂರಿನಿಂದ ಗೆದ್ದ ಬಜೆಪಿಯ ಸುನೀತಾ ವೀರಪ್ಪ ಗೌಡ ಕಾಂಗ್ರೆಸ್ಸಿನ ಚಿಕ್ಕ ಮಾದನಾಯ್ಕರಿಗಿಂತ ನಾಲ್ಕೂವರೆ ಸಾವಿರದಷ್ಟು ಲೀಡ್‌ಗಳಿಸಿದ್ದು ಅಲ್ಲಿ ಬಿಎಸ್‌ಪಿಯ ಕೃಷ್ಣಪ್ಪ ಗಿಟ್ಟಿಸಿದ ಏಳು ಸಾವಿರದಷ್ಟು ಓಟುಗಳಿಂದಾಗಿಯೇ.

ಕೊಳ್ಳೇಗಾಲದಲ್ಲಿ ಬಿಎಸ್‌ಪಿ ರಾಜ್ಯ ನಾಯಕ ಎನ್. ಮಹೇಶ್ ಹತ್ತೊಂಭತ್ತು ಸಾವಿರದಷ್ಟು ಅಗಾಧ ಮೊತ್ತದ ಓಟು ಕೀಳದೇ ಹೋಗಿದ್ದರೆ ಪಕ್ಷೇತರ ಬಾಲರಾಜ್ ಬದಲಿಗೆ ಕಾಂಗ್ರೆಸ್ಸಿನ ಜಯಣ್ಣ ಎಮ್ಮೆಲ್ಲೆಯಾಗುತ್ತಿದ್ದರು. ಕರ್ನಾಟಕದುದ್ದಕ್ಕೂ ಬಹುಜನ ಸಮಾಜ ಪಕ್ಷವೊಂದೇ ಸರಿಸುಮಾರು 40 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸೋಲಿಗೆ ಕಾರಣವಾಗಿತ್ತು. ಇನ್ನೂ ನಾಲ್ಕೈದು ಕಡೆ ಜೆಡಿಎಸ್ ಮತ್ತು ಬಜೆಪಿಯ ಸೋಲಿಗೂ ಬಿಎಸ್‌ಪಿಯೇ ಕಾಣಿಕೆ ಸಲ್ಲಿಸಿತ್ತು. ಬಹುಶಃ ಅದರ ತಾಕತ್ತು ಮತ್ತು ಪ್ರಭಾವವನ್ನು ನಿರ್ಲಕ್ಷಿಸಿದ್ದೇ ಕಾಂಗ್ರೆಸ್ಸಿಗೆ ಮುಳುವಾಗಿತ್ತು.

ಇನ್ನೂ ಲೋಕಸಭೆಯ ವಿಷಯಕ್ಕೆ ಬಂದರೆ ಬಳ್ಳಾರಿಯಲ್ಲಿ ಗಣಿ ಖದೀಮ ಬಜೆಪಿಯ ಕರುಣಾಕರ ರೆಡ್ಡಿ ಗೆದ್ದನಲ್ಲ; ಆತನಿಗೂ ಕಾಂಗ್ರೆಸ್ ಅಭ್ಯರ್ಥಿ ಕೊಳೂರು ಬಸವನಗೌಡನಿಗೂ ಇದ್ದ ಅಂತರ ಕೇವಲ 24 ಸಾವಿರ ಮತಗಳು ಮಾತ್ರ. ಅಲ್ಲಿ ಬಿಎಸ್‌ಪಿಯ ಕಮಲನಾಭನ್ ಸರಿಸುಮಾರು 35 ಸಾವಿರ ಮತಗಳನ್ನು ಪಡೆಯದೇ ಹೋಗಿದ್ದರೆ? ಹಾಸನದಲ್ಲಿ ಬಿಎಸ್‌ಪಿಗೆ 52




ಜಿಗಣಿ ಶಂಕರ್

ಯಾಗಲು, ಬಜೆಪಿ ಅಧಿಕಾರಕ್ಕೇರಲು, ಕೋ-ಜಾ ಸರ್ಕಾರದ ಸ್ಥಾಪನೆಗೂ, ಅಧಃಪತನಕ್ಕೂ ಮತ್ತು ಈಗ ಉದ್ಭವಿಸಿರುವ ವಿಚಿತ್ರ ರಾಜಕೀಯ ಸನ್ನಿವೇಶಕ್ಕೂ ಮೂಲಕಾರಣ ಮಾಯಾವತಿಯ ಬಹುಜನ ಸಮಾಜ ಪಕ್ಷ.

ದೇವೇಗೌಡರು ಅದೆಷ್ಟೇ ಭುಜ ತಟ್ಟಿಕೊಂಡರೂ ಜೆಡಿಎಸ್‌ನ ಒಂದು ಡಜನ್ ಶಾಸಕರ ಆಯ್ಕೆಗೆ ಬಿಎಸ್‌ಪಿ ಸ್ಪರ್ಧೆಯೇ ಕಾರಣವಾಗಿತ್ತೆಂಬುದು ವಾಸ್ತವ. ಹಾಗೇ ಬಿಎಸ್‌ಪಿ ಕಣಕ್ಕಿಳಿಯದೇ ಹೋಗಿದ್ದರೆ ಬಜೆಪಿಯ ಸರಿಸುಮಾರು ಎರಡು ಡಜನ್ ಶಾಸಕರು ಗೆಲ್ಲುತ್ತಿರಲಿಲ್ಲ, ಅದು ಬಿಎಸ್‌ಪಿಯ ತಾಕತ್ತಲ್ಲದೇ ಮತ್ತೇನು?

ಅಸಲಿಗೆ ಬಹುಜನ ಸಮಾಜ ಪಕ್ಷದ ಸಂರಚನೆಯೇ ಹಾಗಿತ್ತು. ದಲಿತ ನಾಯಕ ಪ್ರೊ. ಬಿ. ಕೃಷ್ಣಪ್ಪನವರ ಗರಡಿಯಲ್ಲಿ ಪಳಗಿದ ದಲಿತ ಸಂಘರ್ಷ ಸಮಿತಿಯ ನಿಷ್ಠಾವಂತ ಕೇಡರ್‌ಗಳ ದಂಡೊಂದು ಸದ್ದಿಲ್ಲದೇ ಬಿಎಸ್‌ಪಿಯ ಸಂಘಟನೆಗೆ ನಿಂತುಬಿಟ್ಟಿತ್ತು. ಈ ಪೈಕಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯಾಗಿದ್ದ ಎನ್. ಮಹೇಶ್ ಮತ್ತು ಕಟ್ಟಾ ಅಂಬೇಡ್ಕರ್‌ವಾದಿ ಗೋಪಿನಾಥ್ ಕೈತುಂಬಾ ಸಂಬಳ ಬರುತ್ತಿದ್ದ ಕೆಲಸಕ್ಕೇ ಗುಡ್‌ಬೈ ಹೇಳಿ ಹಳ್ಳಿಗಾಡುಗಳಲ್ಲಿ ಅಲೆಯತೊಡಗಿದ್ದು, ಚಿತ್ರದುರ್ಗದ ಮತ್ತೊಬ್ಬ ದಲಿತ ನಾಯಕ ಜಯಣ್ಣನಂಥ ಸಮರ್ಥರು ಬಿಎಸ್‌ಪಿ ಸೇರಿದ್ದು, ಖರ್ಗೆಯನ್ನು ನಂಬಿ ಕೈಸುಟ್ಟುಕೊಂಡ ಜಿಗಣಿ ಶಂಕರ್ ಥರದ ಉಗ್ರ ಅಂಬೇಡ್ಕರ್‌ವಾದಿಗಳೂ ಕಾಂಗ್ರೆಸ್ ತೊರೆದು ಬಿಎಸ್‌ಪಿಗೆ ಬಂದಿದ್ದು ದಲಿತ ಹೋರಾಟಗಾರರಲ್ಲಿ ಹೊಸ ಸಂಚಲನವನ್ನೇ ಮೂಡಿಸಿತ್ತು.

ಇದಕ್ಕೂ ಮುನ್ನ ಅಂದರೆ 1990 ರಿಂದಲೇ ಬಹುಜನ ಸಮಾಜ ಪಕ್ಷಕ್ಕೊಂದು ತಳಪಾಯ ಕಟ್ಟಿಕೊಟ್ಟದ್ದು ಬಿಎಸ್‌ಪಿ ರಾಜ್ಯಾಧ್ಯಕ್ಷ ಬಿ. ಗೋಪಾಲ್ ಮತ್ತು ರಾಜ್ಯ ಉಪಾಧ್ಯಕ್ಷ ಮಾರಸಂದ್ರ ಮುನಿಯಪ್ಪ. ಪ್ರೊ. ಬಿ. ಕೃಷ್ಣಪ್ಪ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಲಕ್ಕೆ ಎ.ಕೆ. ಸುಬ್ಬಯ್ಯ ಬಿಎಸ್‌ಪಿಯ ರಾಜ್ಯಾಧ್ಯಕ್ಷರಾಗಿದ್ದು ಕರ್ನಾಟಕದ ಮಟ್ಟಿಗೆ ಅದಕ್ಕೊಂದು [illegible] ಮಾತಾಡಿದರು. ಈ ಮಧ್ಯೆ ಮತ್ತೊಬ್ಬ ದಲಿತ ನಾಯಕ [illegible] ತನ್ನದೇ ಅಂಬೇಡ್ಕರ್‌ವಾದಿ [illegible]



ಗೋಪಿನಾಥ್ ಕೋರಮಂಗಲ ಮುನಿಯಪ್ಪ ಕಮಲನಾಭನ್ ಆರ್. ಮುನಿಯಪ್ಪ

ಇಷ್ಟಾಗ್ಯೂ ಬಿಎಸ್‌ಪಿಯ ಕೇಡರ್‌ಗಳ್ಯಾರೂ ವಿಚಲಿತರಾಗದೇ ತಮ್ಮ ಹಾದಿಗೆ ತಾವು ಪಕ್ಷ ಕಟ್ಟಲು ನಿಂತುಬಿಟ್ಟರು. ಅದೂ 2004ರ ಚುನಾವಣೆಯ ನಂತರ ತಮ್ಮ ತಾಕತ್ತೇನೆಂಬುದು ಬಿಎಸ್‌ಪಿ ಕೇಡರ್‌ಗಳಿಗೆ ಹಿಂದೆಂದಿಗಿಂತ ಚೆನ್ನಾಗಿ ಗೊತ್ತಾಗಿತ್ತು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿಯೊಂದೇ ರಾಜ್ಯಾದ್ಯಂತ ಐದು ಲಕ್ಷಕ್ಕೂ ಅಧಿಕ ಮತಗಳಿಸಿತ್ತು.

2005ರ ಹೊತ್ತಿಗೆ ಮಾರಸಂದ್ರ ಮುನಿಯಪ್ಪ ಮತ್ತು ಬಿ. ಗೋಪಾಲ್ ಸೇರಿಕೊಂಡು ಸದ್ದಿಲ್ಲದೇ ಹೊಸ ಕಾರ್ಯತಂತ್ರವೊಂದಕ್ಕೆ ಕೈಯಿಟ್ಟರು. ಅದು ಬೂತ್ ಕಮಿಟಗಳ ಪರಿಕಲ್ಪನೆ. ಅಂದರೆ ಪ್ರತಿಯೊಂದು ಮತಗಟ್ಟೆಗೂ ಹನ್ನೊಂದು ಮಂದಿ ಕೇಡರ್‌ಗಳ ಸಮಿತಿ ರಚಿಸುವುದು. ಕಾಂಗ್ರೆಸ್, ಬಿಜೆಪಿ, ದಳಗಳಂಥ ಘಟಾನುಘಟಿ ಪಕ್ಷಗಳೇ ಈತನಕ ಮತಗಟ್ಟೆ ಸಮಿತಿಗಳನ್ನು ರಚಿಸಿರಲಿಲ್ಲ. ಪ್ರತಿಯೊಂದು ಮತಗಟ್ಟೆಯನ್ನು ಆಧಾರವಾಗಿಟ್ಟುಕೊಂಡು ಅಲ್ಲಿನ ಮತದಾರರು, ಅವರ ಪರಿಚಯ, ಇತ್ಯಾದಿ ಲೆಕ್ಕಾಚಾರದ ಆಧಾರದ ಮೇಲೆ ಪಕ್ಷ ಕಟ್ಟುವುದರಿಂದ ಪಕ್ಷಕ್ಕೆ ಕೆಳಮಟ್ಟದಲ್ಲೂ ಹಿಡಿತ ಸಿಕ್ಕಿಬಿಡುತ್ತದೆ.

ಈ ನಿಟ್ಟಿನಲ್ಲಿ ಬೇರೆಲ್ಲ ಪಕ್ಷಗಳಿಗಿಂತಲೂ ವಿಭಿನ್ನ ದಾರಿ ಹಿಡಿದ ಬಿಎಸ್‌ಪಿಯ ನಾಯಕರ ಪೈಕಿ ಶ್ರೀಧರ್ ಕಲಿವೀರ್ ಹಾಸನ, ಮಂಗಳೂರು, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ ಉಸ್ತುವಾರಿ ವಹಿಸಿಕೊಂಡರೆ, ಎನ್. ಮಹೇಶ್ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳನ್ನು ವಹಿಸಿಕೊಂಡರು. ಚಿತ್ರದುರ್ಗ, ದಾವಣಗೆರೆ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳನ್ನು ಚಾಣಾಕ್ಷ ಸಂಘಟಕ ಎನ್. ಜಯಣ್ಣನವರಿಗೆ ವಹಿಸಲಾಯ್ತು, ಹಾಗೇ ಬೆಳಗಾವಿ, ಬಾಗಲಕೋಟೆ, ಬಿಜಾಪುರ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳ ಹಳ್ಳಿಹಳ್ಳಿಗಳನ್ನೂ ಬಿಡದೇ ಸುತ್ತತೊಡಗಿದ ಎಂ. ಗೋಪಿನಾಥ್; ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಸಂಘಟನೆಗೆ ನಿಂತ ಕಮಲನಾಥನ್ ಮತ್ತು ಕನಕಪುರ ಉತ್ತರಹಳ್ಳಿ ಮತ್ತು ಕಾರವಾರ ಜಿಲ್ಲೆಯ ಹೊಣೆ ಹೊತ್ತ ಜಿಗಣಿ ಶಂಕರ್ ಹೀಗೆ ಯಾರೊಬ್ಬರೂ ಕಳೆದೆರಡು ವರ್ಷಗಳಿಂದ ಬಿಟ್ಟ ಮನೆಗೆ ಮತ್ತೆ ಬಂದಿಲ್ಲ, ಅದು ಆರೆಸ್ಸೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳ ಕೇಡರ್‌ಗಳಷ್ಟೇ ಅಪರೂಪದ ತಲ್ಲೀನತೆ.

ಹಾಗೆ ನೋಡಿದರೆ 2004 ರ ವಿಧಾನಸಭಾ ಚುನಾವಣೆಗಿಂತಲೂ 2006ರ ಹೊತ್ತಿಗೆ ಬಿಎಸ್‌ಪಿಯ ಬಲ ಕುಗ್ಗಬೇಕಿತ್ತು, ಏಕೆಂದರೆ ಈ ಹೊತ್ತಿಗಾಗಲೇ ಬರಗೆಟ್ಟ ಜೆಡಿಎಸ್, ಬಿಜೆಪಿಗಳಿಗೆ ಅಧಿಕಾರ ಸಿಕ್ಕಿತ್ತು, ದುಡ್ಡೂ ಕಾಸಿನ ಸಾಮರ್ಥ್ಯವೂ ಇತ್ತು. ಆದರೆ 2005ರ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ಬಿಎಸ್‌ಪಿ ಒಂದು ಜಿಲ್ಲಾ ಪಂಚಾಯ್ತಿ ಮತ್ತು ಆರು ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳಲ್ಲಿ ಗೆದ್ದಿತ್ತು. ಆನಂತರ ಬಂದ ಗ್ರಾಮ ಪಂಚಾಯ್ತಿ ಎಲೆಕ್ಷನ್ನಿನಲ್ಲಿ ರಾಜ್ಯಾದ್ಯಂತ 1650 ಮಂದಿ ಬಿಎಸ್‌ಪಿಯ ಅಭ್ಯರ್ಥಿಗಳು ಪಂಚಾಯ್ತಿ ಸದಸ್ಯರಾದರು. ತೀರ ಇತ್ತೀಚೆಗೆ ಅಂದರೆ ಇಲ್ಲಿಗೆ ಎರಡು ತಿಂಗಳ ಹಿಂದೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಎಸ್‌ಪಿಯ 20 ಮಂದಿ ಗೆದ್ದು ಕೌನ್ಸಿಲರ್‌ಗಳಾದರೆ, ಕನಿಷ್ಠ ಐನೂರು ವಾರ್ಡುಗಳಲ್ಲಿ ಬಿಎಸ್‌ಪಿಯ ಕೇಡರ್‌ಗಳು ಎರಡನೇ ಸ್ಥಾನದಲ್ಲಿದ್ದರು.

2004ರ ಚುನಾವಣೆಗೆ ಹೋಲಿಸಿದರೆ ಬಿಎಸ್‌ಪಿ ತಾಕತ್ತು ಅದರ ನಾಲ್ಕು ಪಟ್ಟು ಹೆಚ್ಚಾಗಿತ್ತು!

ಇದೇ ಹೊತ್ತಿಗೆ ಸರಿಯಾಗಿ ಉತ್ತರ ಪ್ರದೇಶದಲ್ಲಿ ಪವಾಡವೇ ನಡೆದುಹೋಗಿತ್ತು, ಬಲಾಢ್ಯ ಬಿಜೆಪಿ, ಮುಲಾಯಂನ ಸಮಾಜವಾದಿ ಪಾರ್ಟಿ ಮತ್ತು ಕೇಂದ್ರದ ಕಾಂಗ್ರೆಸ್ ಪಕ್ಷಗಳೆಲ್ಲ ನೆಲಕಚ್ಚಿ ಮಾಯಾವತಿ ಸರ್ಕಾರ ಸ್ಥಾಪನೆಯಾಗುವುದಕ್ಕೂ, ಇತ್ತ ಕರ್ನಾಟಕದಲ್ಲಿ ಬಿಜೆಪಿ-ಜೆಡಿಎಸ್ ಕೂಟದ ಕಚ್ಚಾಟ ಉಲ್ಬಣಿಸುವುದಕ್ಕೂ ಸರಿ ಹೋಗಿತ್ತು, ಅಲ್ಲಿಗೆ ಮಾಯಾವತಿ ಮಹಿಮೆ ಏನೆಂಬುದು ಇಡೀ ದೇಶಕ್ಕೆ ಗೊತ್ತಾಗಿತ್ತು. ಇದರ ಪರಿಣಾಮವೇ ಮಾಜಿ ಮಂತ್ರಿ ಸಿಂಧ್ಯಾ ಮತ್ತು ಚಿಕ್ಕಪೇಟೆಯ ಮಾಜಿ ಶಾಸಕ ಪ್ರಕಾಶ್ ಬಿಎಸ್‌ಪಿ ಸೇರಿದ್ದು. ಬೆನ್ನಿಗೇ ಬೀದರ್‌ನ ವೈಜನಾಥ್ ಸೂರ್ಯವಂಶಿ, ಬನ್ನೂರಿನ ಮಾಜಿ ಶಾಸಕ ಕೃಷ್ಣಪ್ಪ, ಮಾಜಿ ಮುಖ್ಯಮಂತ್ರಿ ಜೆ.ಎಚ್. ಪಟೇಲರ ಮಗ ತ್ರಿಶೂಲ ಪಾಣಿ ಪಟೇಲ್, ಬ್ರಾಹ್ಮಣ ಮುಖಂಡರಾದ ರಾಜ್‌ಕುಮಾರ್ ಶ್ರೀವತ್ಸ, ಗಣೇಶ್ ಮುಂತಾದವರೆಲ್ಲ ಸಾಲುಗಟ್ಟಿ ಬಿಎಸ್‌ಪಿ ಸೇರಿದ್ದಾರೆ.

ಜೆಡಿಎಸ್‌ಗೋ, ಬಿಜೆಪಿಗೋ, ಕಾಂಗ್ರೆಸ್ಸಿಗೋ ಜನ ಸೇರುತ್ತಾರೆಂದರೆ ಅದು ಸಹಜ. ಆದರೆ ಇನ್ನೂ ಅಧಿಕಾರವನ್ನೇ ಕಾಣದ, ದೊಡ್ಡದೊಡ್ಡ ನಾಯಕರಿಲ್ಲದ, ಆರ್ಥಿಕವಾಗಿ ಏನೇನೂ ಅಲ್ಲದ ಬಹುಜನ ಸಮಾಜ ಪಕ್ಷಕ್ಕೆ ಏಕೆ ಈ ಮಟ್ಟದಲ್ಲಿ ಜನ ಬರುತ್ತಿದ್ದಾರೆ?

ಅದನ್ನು ಮಾಯಾವತಿಯ ಶಕ್ತಿಯೆನ್ನಿ, ಅಂಬೇಡ್ಕರ್ ಚಿತ್ರದ ಪ್ರಭಾವವೆನ್ನಿ, ನಿಷ್ಠಾವಂತ ಕೇಡರ್‌ಗಳ ದುಡಿಮೆಯೆನ್ನಿ, ಒಂದಂತೂ ಸತ್ಯ: ಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಬಹುಜನ ಸಮಾಜ ಪಕ್ಷದ ಸಾಧನೆ ಒಂದು ನಿರ್ಣಾಯಕಪಾತ್ರ ವಹಿಸಲಿದೆಯ

ಬಿಜಾಪುರದಿಂದ ಬೀದರ್‌ವರೆಗೆ....!




ಝುಲ್ಫಿಕರ್ ಹಷ್ಮಿ

ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ 2004 ರಲ್ಲಿ ಕೇವಲ ಎರಡು ಕ್ಷೇತ್ರಗಳಲ್ಲಷ್ಟೇ ಅಭ್ಯರ್ಥಿಗಳನ್ನು ಹಾಕಲು ಸಾಧ್ಯವಾಗಿದ್ದ ಬಿಎಸ್‌ಪಿ ಈ ಭಾಗವನ್ನು ಯಾವ ವೇಗದಲ್ಲಿ ವ್ಯಾಪಿಸುತ್ತಿದೆ ಎಂಬುದಕ್ಕೆ ಈ ಬಾರಿಯ ಸ್ಥಳೀಯ ಸಂಸ್ಥೆ ಚುನಾವಣೆಯೇ ಉತ್ತರವಾಗುತ್ತದೆ.

ಕಳೆದ ಮೂರು ವರ್ಷಗಳಿಂದ ಬೆಳಗಾವಿಯಲ್ಲೇ ಠಿಕಾಣಿ ಹೂಡಿರುವ ರಾಜ್ಯ ಪ್ರಧಾನ ಕಾರ್ಯದರ್ಶಿ ಗೋಪಿನಾಥ್ ಈ ಬಾರಿ 150 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರು. ಈ ಪೈಕಿ ಗುಲ್ಬರ್ಗಾ ಕಾರ್ಪೊರೇಷನ್ನಿಗೆ ಒಬ್ಬ ಬಿಎಸ್‌ಪಿ ಕೌನ್ಸಿಲರ್ ಗೆದ್ದರೆ, ಜೇವರ್ಗಿ ನಗರಸಭೆಯಲ್ಲಿ ಮೊಟ್ಟ ಮೊದಲ ಬಾರಿಗೆ ಬಿಎಸ್‌ಪಿ ಖಾತೆ ತೆರೆಯಿತು. ಬಾಗಲಕೋಟೆ ನಗರಸಭೆಯ ಒಂದು ಸ್ಥಾನ, ಅಲ್ಲಿನ ಪಟ್ಟಣ ಪಂಚಾಯ್ತಿಯ ಮತ್ತೊಂದು ಸ್ಥಾನ ಬಿಎಸ್‌ಪಿ ಪಾಲಾಯಿತು. ಬೀದರ್ ನಗರಸಭೆಯ ಆರು ಸ್ಥಾನಗಳಲ್ಲಿ ಬಿಎಸ್‌ಪಿ ಅಭ್ಯರ್ಥಿಗಳು 6 ರಿಂದ 30 ಮತಗಳ ಅಂತರದಲ್ಲಿ ಸೋತರು. ಅದೇ ಬೀದರ್‌ನಲ್ಲಿ ಈ ಹಿಂದೆ ಬಿಎಸ್‌ಪಿಯಿಂದಲೇ ಗೆದ್ದು ಶಾಸಕರಾಗಿದ್ದ ಝುಲ್ಫಿಕರ್ ಹಷ್ಮಿ ಕೂಡ ಮತ್ತೆ ಬಿಎಸ್‌ಪಿಗೆ ಬಂದಮೇಲೆ ಒಂದು ಜಿಲ್ಲಾ ಪಂಚಾಯ್ತಿ ಮತ್ತು ಭಾಲ್ಕಿಯ ಒಂದು ತಾಲ್ಲೂಕು ಪಂಚಾಯ್ತಿ ಸೀಟುಗಳು ಬಿಎಸ್‌ಪಿ ಪಾಲಾದವು. ಈ ಹಿಂದೆ ಪರಿಶಿಷ್ಟರಿಗಷ್ಟೇ ಮೀಸಲಾಗಿದ್ದ ಪಕ್ಷ ಎಂಬಂತಿದ್ದ ಬಿಎಸ್‌ಪಿಯ ಸೈಕಲ್ ರ್‍ಯಾಲಿಯನ್ನು ಸದ್ಯ ಅನುಭವ ಮಂಟಪದ ಸುಶೀಲಾಭಾಯಿ ಪಟೇಲ್ ತರದ ಲಿಂಗಾಯತರ ನಾಯಕಿಯೇ ನಿಂತು ಉದ್ಘಾಟಿಸುವಂತಾಗಿದೆ.

ಇದೇ ಡಿಸೆಂಬರ್ 23ರ ಬೆಂಗಳೂರಿನ ಮಾಯಾವತಿ ಸಭೆಗೆ ಪ್ರತಿ ಊರಿನಲ್ಲೂ ಬಿಎಸ್‌ಪಿಯ ಸೈಕಲ್ ರ್‍ಯಾಲಿಗಳಾಗುತ್ತಿವೆ. ಬರುವ ವಿಧಾನಸಭೆ ಚುನಾವಣೆಯಲ್ಲಿ ಚಿಕ್ಕೋಡಿ ಮತ್ತು ಬೀದರ್‌ಗಳಲ್ಲಿ ಬಿಎಸ್‌ಪಿ ಗೆದ್ದೇ ತೀರುವ ಉಮೇದಿನಲ್ಲಿದೆ. ರಾಯಭಾಗ, ಕಾಗವಾಡ, ಸದಲಗಾ, ನಿಪ್ಪಾಣಿ, ಹುಕ್ಕೇರಿ, ಸಂಕೇಶ್ವರ್ ಮತ್ತು ಅಥಣಿಗಳಲ್ಲಿ ಬಿಎಸ್‌ಪಿ ಜಿದ್ದಾಜಿದ್ದಿಯ ಪೈಪೋಟಿ ಕೊಡುವುದು ಗ್ಯಾರಂಟಿ. ಗುಲ್ಬರ್ಗಾದ ಕಮಲಾಪುರ, ಆಳಂದ, ಖರ್ಗೆಯ ಗುರು ಮಿಠಕಲ್, ಜಮಖಂಡಿ ಬೀಳಗಿ, ಬಾಗಲಕೋಟೆ, ಸಿಂಧಗಿಯಂಥ ಕ್ಷೇತ್ರಗಳು ಬಿಎಸ್‌ಪಿ ಪಾಲಿಗೆ ಫಲವತ್ತಾಗಿಬಿಟ್ಟವೆ. ■

ದಾವಣಗೆರೆ: ಕೂಲಿ ಕದ್ದ ಸಿಂಪಲ್ ಸಂಗಪ್ಪ



ಉದ್ಯೋಗ ಖಾತ್ರಿ ಯೋಜನೆಯನ್ನು ಸರಿಯಾಗಿ ಕಾರ್ಯಗತಗೊಳಿಸಿದ್ದರೆ ಕರ್ನಾಟಕದ ಲಕ್ಷಾಂತರ ಬಡವರಿಗೆ ಸಾಕಷ್ಟು ಉಪಕಾರವಾಗುತ್ತಿತ್ತು. ಉದ್ದೇಶಿತ ಕಾಮಗಾರಿಗಳನ್ನು ಮಾಡಿಸದೇ ರಸ್ತೆ ಚರಂಡಿಗಳ ರಿಪೇರಿ ಮಾಡಿಸುವುದು ಅಥವಾ ಗ್ರಾಮ ಪಂಚಾಯತಿ ಮಟ್ಟದ ರಾಜಕೀಯ ಪುಢಾರಿಗಳೊಂದಿಗೆ ಅಧಿಕಾರಿಗಳು ಶಾಮೀಲಾಗಿ ಜೆ.ಸಿ.ಬಿ. ಯಂತ್ರಗಳಿಂದ ಬೇಕಾಬಿಟ್ಟಿ ಕಾಮಗಾರಿ ಮಾಡಿಸಿ ಹಣವನ್ನು ನುಂಗಿ ಉದ್ಯೋಗ ಖಾತ್ರಿ ಯೋಜನೆಯ ಇಡೀ ಉದ್ದೇಶವನ್ನು ಹಳ್ಳ ಹಿಡಿಸಿರುವುದು ಹಳೆಯ ವಿಚಾರ. ಆದರೆ ಅಧಿಕಾರಿಗಳ ಹಾಗೂ ಈ ಯೋಜನೆಯನ್ನು ಕಾರ್ಯಗತಗೊಳಿಸ ಬೇಕಾದ ಗ್ರಾಮ ಪಂಚಾಯತಿ ಪುಢಾರಿಗಳ ಲೂಟಿಯ ಒಪ್ಪಂದದಿಂದಾಗಿ ಈ ಯೋಜನೆಯಲ್ಲಿ ನೊಂದಣಿಗೊಂಡು, ಬೆವರು ಸುರಿಸಿ ದುಡಿದ ಕೂಲಿಯ ಹಣವನ್ನು ಕೊಡದೇ ಕೂಲಿಕಾರರ ಸಹಿ ಮತ್ತು ಹೆಬ್ಬೆಟ್ಟುಗಳ ಗುರುತುಗಳನ್ನು ತಮಗೆ ಬೇಕಾದವರಿಂದ ಮಾಡಿಸಿಕೊಂಡು ಲಕ್ಷಾಂತರ ರೂ. ಲಪಟಾಯಿಸಿ ಸಿಕ್ಕಿ ಬೀಳುತ್ತಿರುವುದು ಮಾತ್ರ ತಾಜಾ ವಿಚಾರ.

ಈ ಯೋಜನೆ ಜಾರಿಯಲ್ಲಿರುವ ಎಲ್ಲಾ ಕಡೆ ಇದೇ ನಡೆಯುತ್ತಿರಬಹುದಾದರೂ ದಾವಣಗೆರೆ ಜಿಲ್ಲೆಯಲ್ಲಿ ಕೂಲಿ ಹಣವನ್ನು ಕದ್ದ ವ್ಯವಸ್ಥಿತ ಮೋಸವೊಂದನ್ನು ಇಲ್ಲಿನ ಅಧಿಕಾರಿ ವರ್ಗ ಸಂರಕ್ಷಿಸಿಕೊಂಡು ಬರುತ್ತಿರುವುದನ್ನು ಗಮನಿಸಿದರೆ ಈ ಯೋಜನೆಯ ನಿಜವಾದ ಫಲಾನುಭವಿಗಳು ರಾಜಕೀಯ ಪುಢಾರಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಮಾತ್ರವೇ ಎನ್ನುವುದು ಋಜುವಾತಾಗುತ್ತದೆ.

ದಾವಣಗೆರೆ ತಾಲ್ಲೂಕು ನೇರ್ಲಿಗೆ ಗ್ರಾಮವು ಹಾಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷನಾಗಿರುವ ವೈ. ರಾಮಪ್ಪನ ಊರು. ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಇಲ್ಲಿ 1.25 ಕೋಟಿ ರೂ.ಗಳ ಕಾಮಗಾರಿ ಕೆಲಸ ನಡೆದಿದೆ. ಆದರೆ ಕೆಲಸ ಮಾಡಿದವರಿಗೆ ಒಂದು ಪೈಸೆಯೂ ಸಿಕ್ಕಿಲ್ಲ! ಕೆಲಸ ಮಾಡಿದವರು ನಾಲ್ಕೈದು ತಿಂಗಳಿಂದ ನಿರಂತರವಾಗಿ ಕೂಲಿಯ ಹಣವನ್ನು ಕೇಳುತ್ತಾ ಬರುತ್ತಿದ್ದರೂ 'ಹಣ ಮಂಜೂರಾಗಿಲ್ಲ' ಎಂಬ ಸಿದ್ಧ ಉತ್ತರವನ್ನು ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಹೇಳುತ್ತಾ ಬಂದಿದ್ದಾನೆ. ರೋಸಿಹೋದ ಗ್ರಾಮಸ್ಥರು ತಮ್ಮ ಹಣ ಎಲ್ಲಿ ಹೋಯಿತೆಂದು ಮಾಹಿತಿ ಹಕ್ಕು ಕಾಯಿದೆಯ ಮೂಲಕ ತನಿಖೆಗೆ ಇಳಿದಾಗ ಬೆಳಕಿಗೆ ಬಂದಿದ್ದೇನೆಂದರೆ: ಈಗಾಗಲೇ ಕೂಲಿ ಮಾಡಿದವರ ಬದಲಿಗೆ ಬೇರೆ ಯಾರಾರದೋ ಸಹಿ/ಹೆಬ್ಬೆಟ್ಟಿನ ಗುರುತುಗಳನ್ನು ಹಾಕಿಸಿ ಬರೋಬರಿ ರೂ. 40 ಲಕ್ಷಗಳನ್ನು ತಿಂದು ಹಾಕಿರುವುದು!

ಈ ಪಾತಕ ಕೆಲಸದಲ್ಲಿ ಅಧಿಕಾರಿಗಳನ್ನೆಲ್ಲಾ ತನ್ನ ಕಾಲ ಕಸವನ್ನಾಗಿಸಿಕೊಂಡು ಪ್ರಧಾನ ಪಾತ್ರ ವಹಿಸಿದವನು ಗಂಗನಕಟ್ಟೆಯ ಜಿ. ಎನ್. ಸಂಗಪ್ಪನೆಂಬ ಗ್ರಾಮ ಪಂಚಾಯಿತಿ ಅಧ್ಯಕ್ಷ! ಸಿಂಪಲ್ ಅಂಡ್ ಇನೋಸೆಂಟ್ ಎನಿಸಿಕೊಂಡಿರುವ ಇವನ ವಂಚಕ ಕೆಲಸಗಳಿಗೆ ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿಯೇ ತಲೆದೂಗುತ್ತಾನೆಂದರೆ ಊಹಿಸಿ! ಸಂಗಪ್ಪ ತನ್ನ ಜಾತಿ ಬಲದಿಂದ ಕಾಂಗ್ರೆಸ್ಸಿನ ಮಾಜಿ ಮಂತ್ರಿ ಎಸ್. ಎಸ್. ಮಲ್ಲಿಕಾರ್ಜುನ, ಬಿ.ಜೆ.ಪಿ.ಯ ಮಾಜಿ ಮಂತ್ರಿ ರವೀಂದ್ರನಾಥ ಈ ಇಬ್ಬರೊಂದಿಗೂ ಹಿತವಾಗಿದ್ದುಕೊಂಡು ಜನರಿಗೆ ಸೇರಬೇಕಾಗಿದ್ದ ಹಣವನ್ನು ಲೂಟಿ ಹೊಡೆದಿದ್ದಾನೆ.

ನೇರ್ಲಿಗೆ ಗ್ರಾಮದಲ್ಲಿ 150 ಮಂದಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ನೊಂದಾಯಿತರಾಗಿ ಕೆಲಸ ಮಾಡಿದ್ದರೂ ಇವರಿಗೆ ನ್ಯಾಯವಾಗಿ ಕೊಡಬೇಕಾಗಿದ್ದ ಹಣವನ್ನು ಕೊಡದೆ ಗ್ರಾಮ ಪಂಚಾಯತಿಯ ಈ ಹಿಂದಿನ ಕಾರ್ಯದರ್ಶಿ ಗುರುಮೂರ್ತಿ ಎನ್ನುವವನನ್ನು ಮತ್ತು ಆನಗೋಡು ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ಅಧಿಕಾರಿಗಳನ್ನು ಒಳಹಾಕಿಕೊಂಡು, ಕೆಲಸ ಮಾಡಿದವರ ಸಹಿಗಳನ್ನು ವೋಚರ್‌ಗಳ ಮೇಲೆ ಬೇರೆಯವರಿಂದ ಫೋರ್ಜರಿಯಾಗಿ ಪಡೆದುಕೊಂಡು, ಇಡೀ ಹಣವನ್ನು ಪಾವತಿ ಮಾಡಿಸಿಕೊಂಡು, ಜಿ. ಎನ್. ಸಂಗಪ್ಪ ತಿಂದು ಹಾಕಿದ್ದಾನೆ. ನೇರ್ಲಿಗೆ ಗ್ರಾಮದ ರಂಗಪ್ಪ ಮತ್ತು ಪ್ರಭು ಮುಂತಾದವರು ಸಾಕಷ್ಟು ಪ್ರಯತ್ನವನ್ನು ಮಾಡಿ ಹೊರ ಹಾಕಿದ ಹಗರಣದ ಫೋರ್ಜರಿ ದಾಖಲೆಗಳನ್ನು ನೋಡಿದರೆ 'ನನ್ನನ್ನೇನೂ ಮಾಡಿಕೊಳ್ಳಲಾಗುವುದಿಲ್ಲ' ಎಂಬ ಸಂಗಪ್ಪನ ಅಹಂಕಾರದ ಪರಾಕಾಷ್ಠತೆ ಅರ್ಥವಾಗುತ್ತದೆ. ಹಣ ಬಿಡಿಸಿಕೊಳ್ಳಲು ಕೊಡಲಾಗಿರುವ ವೋಚರುಗಳಲ್ಲಿ ಸಹಿ ಮಾಡಲು ಬಾರದೇ ಹೆಬ್ಬೆಟ್ಟು ಒತ್ತುವವರ ಹೆಬ್ಬೆಟ್ಟಿನ ಗುರುತಿಗೆ ಬದಲಾಗಿ ಇಂಗ್ಲಿಷಿನಲ್ಲಿ ಸಹಿ ಹೊಡೆಯಲಾಗಿದೆ! ನೇರ್ಲಿಗೆ ಗ್ರಾಮದವರ ನೊಂದಾಯಿತಗೊಂಡ ಹೆಸರಿನ ಪಟ್ಟಿಯನ್ನೇ ಚನ್ನಸಮುದ್ರ ಗ್ರಾಮದಲ್ಲಿ ಕಾಮಗಾರಿ ನಡೆಸಿದ್ದೇವೆಂದು ತೋರಿಸಿ ಅಕ್ರಮವಾಗಿ ಲಕ್ಷಾಂತರ ರೂ.ಗಳನ್ನು ಬಿಡಿಸಿಕೊಳ್ಳಲಾಗಿದೆ. ಮೇಲ್ನೋಟಕ್ಕೆ ಹೀಗೆ ಹಲವು ಹತ್ತು ಮೋಸಗಳು ಈ ದಾಖಲೆಗಳಿಂದ ಹೊರಬೀಳುತ್ತವೆ.

ಹೀಗೆ ದಾಖಲೆಗಳ ಸಮೇತ ನೇರ್ಲಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಣ ದುರುಪಯೋಗದ ಪ್ರಕರಣ ಹೊರಬಂದಿರುವುದು ಒಂದು ಉದಾಹರಣೆ ಮಾತ್ರ. ಉದ್ಯೋಗ ಖಾತ್ರಿ ಯೋಜನೆ ಜಾರಿಯಲ್ಲಿರುವ ಕರ್ನಾಟಕದ ಎಲ್ಲಾ ಕಡೆಯೂ ಸ್ವಲ್ಪವೇ ಪ್ರಯತ್ನಪಟ್ಟರೂ ಕೂಡ ಅಧಿಕಾರಿಗಳು ಮತ್ತು ರಾಜಕೀಯ ಪುಢಾರಿಗಳು ಒಂದಾಗಿ ಎಸಗಿರುವ ಈ ರೀತಿಯ ವಂಚನೆಯ ಪ್ರಕರಣಗಳು ದಂಡಿಯಾಗಿ ಹೊರಬೀಳುತ್ತವೆಂಬುವುದರಲ್ಲಿ ಯಾವುದೇ ಅನುಮಾನವಿಲ್ಲ.

ದಾಖಲೆಗಳ ಸಮೇತ ಈ ವಂಚನೆಯ ಹಗರಣ ಹೊರಬಿದ್ದ ಮೇಲೆ ಕೂಲಿ ಕೆಲಸ ಮಾಡಿದ ಹೆಣ್ಣು ಮಕ್ಕಳಾದಿಯಾಗಿ ಪೊಲೀಸರ ನಿರ್ಬಂಧವನ್ನು ಲೆಕ್ಕಿಸದೆ ಡಿಸೆಂಬರ್ 12 ರಂದು ತೀವ್ರವಾಗಿ ಪ್ರತಿಭಟಿಸಿ ಗ್ರಾಮ ಪಂಚಾಯತಿ ಕಚೇರಿಗೆ ಬೀಗ ಜಡಿದಿದ್ದಾರೆ. ಪೊಲೀಸರನ್ನು ಹೊರತುಪಡಿಸಿ ಇವರ ಸಮಸ್ಯೆಯನ್ನು ವಿಚಾರಿಸಲು ಅಧಿಕಾರಿಗಳು ಮಾತ್ರ ಸ್ಥಳಕ್ಕೆ ಬರಲೇ ಇಲ್ಲ. ಜಿಲ್ಲಾ ಪಂಚಾಯತಿಯವರಾಗಲೀ, ಜಿಲ್ಲಾಧಿಕಾರಿ ದ್ಯಾಬೇರಿಯಾಗಲೀ ಈ ಹಗರಣದ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದೆ ಇದು ತಮಗೆ ಸಂಬಂಧಪಡದ ವಿಷಯವೆಂಬಂತೆ ವರ್ತಿಸುತ್ತಿರುವುದು ಗ್ರಾಮ ಪಂಚಾಯತಿ ಅಧ್ಯಕ್ಷ ಸಂಗಪ್ಪನನ್ನು ರಕ್ಷಿಸುವುದಕ್ಕಾಗಿಯೇ? ಎನ್ನುವ ಪ್ರಶ್ನೆಗಳು ಏಳುತ್ತಿವೆ. ಅಧಿಕಾರಿಗಳು ಕೂಲಿ ಜನರಿಗೆ ಸ್ಪಂದಿಸದಿದ್ದರೆ ಸಿಂಪಲ್ ಸಂಗಪ್ಪನಿಗೆ ಜನರಿಂದಲೇ ಗೂಸಾ ಬೀಳುವುದು ಖಂಡಿತ.

■ ಚಂದ್ರಶೇಖರ ತೋರಣಘಟ್ಟ

ಗ್ರಾ.ಪಂ. ಅಧ್ಯಕ್ಷನ ಆಸ್ತಿ ಎಷ್ಟು?

ಈಗಾಗಲೇ ಮೂರು ಬಾರಿ ಗ್ರಾಮ ಪಂಚಾಯತಿ ಅಧ್ಯಕ್ಷನಾಗಿರುವ ಸಿಂಪಲ್ ಸಂಗಪ್ಪನಿಗೆ ಇರುವ ಆಸ್ತಿ ಎಷ್ಟು ಗೊತ್ತೇ? 25 ಲಕ್ಷ ಬೆಲೆ ಬಾಳಬಹುದಾದ ಒಂದು ಇಟಾಚಿ ಯಂತ್ರ, ನಾಲ್ಕು ಲಾರಿ, ನಾಲ್ಕು ಟ್ರ್ಯಾಕ್ಟರುಗಳು, 2 ಕಾರು, 4 ಬೈಕುಗಳು, 12 ಎಕರೆ ಸಪೋಟ ತೋಟ, 10 ಎಕರೆ ಅಡಿಕೆ ತೋಟ, 6 ಎಕರೆ ಬಾಳೆ ತೋಟ ಹೀಗೆ ಒಟ್ಟು 52 ಎಕರೆ ಆಸ್ತಿ ಇವನಿಗಿದ್ದು ದಾವಣಗೆರೆಯ ನಿಜಲಿಂಗಪ್ಪ ಬಡಾವಣೆಯಲ್ಲಿ 50 ಲಕ್ಷ ಬೆಲೆಬಾಳುವ ಒಂದು ಬಂಗಲೆ ಇದೆ! ಕೆಎಸ್‌ಆರ್‌ಟಿಸಿ, ಬಸ್ ನಿಲ್ದಾಣದ ಎದುರು ತಿರುಮಲ ಎಂಟರ್‌ಪ್ರೈಸಸ್ ಎಂಬ ಒಂದು ಪ್ರಾವಿಜನ್ ಸ್ಟೋರ್ ಕೂಡಾ ಇವನದೇ. ಜಾತಿ ಮತ್ತು ರಾಜಕೀಯ ಬಲ ಹಾಗೂ ಹಲ್ಕಾ ಕೆಲಸಗಳಿಗೆ ಬೆಂಗಾವಲಾಗಿ ನಿಲ್ಲುವ ಅಧಿಕಾರಿ ವರ್ಗ ಸಂಗಪ್ಪನ ಜೊತೆಗಿರುವಾಗ ಕೂಲಿಕಾರರ ಕೂಲಿ ಹಣವನ್ನಷ್ಟೇ ಅಲ್ಲ, ಕೂಲಿಯವರನ್ನೇ ಸಿಂಪಲ್ ಸಂಗಪ್ಪ ತಿಂದು ಮುಗಿಸುತ್ತಾನೆ!




ರೈತಸಂಘದ ಕಾರ್ಯಕರ್ತರಿಂದ ಬ್ಯಾಂಕಿಗೆ ಮುತ್ತಿಗೆ

ಮೈಸೂರು: ಐಸಿಐಸಿಐ ಬ್ಯಾಂಕಿನ ಗೂಂಡಾಗಿರಿ

ಐಸಿಐಸಿಐನಂತಹ ಬ್ಯಾಂಕ್‌ಗಳು ಸಾಲ ಕೊಡುತ್ತೇವೆಂದು ಹೇಳಿ ತಾವೇ ಮುಗಿಬೀಳುತ್ತವೆ. ಸಾಲ ಕೊಡಿಸಲೆಂದೇ ಇರುವ ಅವರ ಏಜೆಂಟರು, ಮೊದಲು ಸಾಲದ ಬಡ್ಡಿ ಕೇವಲ ಶೇ.6 ಎಂದು ಹೇಳಿ ಸಾಲಕ್ಕೆ ಸಿಲುಕಿಸುತ್ತಾರೆ. ನಗರದ ವಿದ್ಯಾವಂತ, ಸುಶಿಕ್ಷಿತ ಜನರೇ ಇವರ ಮಾತಿಗೆ ಮೋಸ ಹೋಗುತ್ತಾರೆಂದರೆ, ಇನ್ನು ಸದಾ ಸಾಲದ ಸುಳಿಯಲ್ಲೇ ಸಿಕ್ಕು ಒದ್ದಾಡುವ ನಮ್ಮ ರೈತರನ್ನು ಇದೇ ಜನ ತಮ್ಮ ಬುಟ್ಟಿಗೆ ಕೆಡವಿಕೊಂಡರೆ ಏನಾಗಬಹುದು?

ಮೊಬೈಲ್ ಹೊಂದಿರುವ ಯಾರಿಗಾದರೂ ಈ ಅನುಭವ ಆಗಿರುತ್ತದೆ. ನಿಮಗೆ ಪರಿಚಿತವಲ್ಲದ ಯಾವುದೋ ಒಂದು ನಂಬರಿನಿಂದ ನಿಮಗೊಂದು ಕರೆ ಬರುತ್ತದೆ. ಯಥಾಪ್ರಕಾರ ನೀವು ಕರೆಯನ್ನು ರಿಸೀವ್ ಮಾಡಿ "ಹಲೋ'' ಎನ್ನುತ್ತೀರಿ. ಆ ಕಡೆಯಿಂದ ತಾವು ಯಾವುದೋ ಒಂದು ಕಂಪೆನಿಯವರೆಂದು ಮೃದುವಾಗಿ ಹೇಳಿ, "ನಿಮ್ಮೊಂದಿಗೆ ಒಂದೆರಡು ನಿಮಿಷ ಮಾತನಾಡಬಹುದಾ?'' ಎಂದು ಕೇಳುತ್ತಾರೆ. ಅವರ ಸೌಜನ್ಯಕ್ಕೆ ಮಾರು ಹೋಗಿ ನೀವು "ಹೇಳಿ'' ಎಂದರೆ, ನಿಮಗೆ ಇನ್ನೊಂದು ಅಚ್ಚರಿ ಕಾದಿರುತ್ತದೆ. ನಿಮಗಾಗಿ ಅವರು ಸುಲಭವಾಗಿ ಸಿಗುವ, ಕಡಿಮೆ ಬಡ್ಡಿ ದರದ ಸಾಲ ಸೌಲಭ್ಯವನ್ನು ಒದಗಿಸಲು ಕಾತುರರಾಗಿರುತ್ತಾರೆ. ಇದಕ್ಕಿಂತ ನಿಮಗೇನು ಬೇಕು ಹೇಳಿ?

ಆದರೆ ಅದರ ನಂತರದ ಅನುಭವದ ಪರಿಚಯ ಬಹಳ ಜನರಿಗಿರಲಿಕ್ಕಿಲ್ಲ. ತಾವೇ ಫೋನ್ ಮಾಡಿ ಸಾಲ ಕೊಡುತ್ತೇವೆಂದು ಹೇಳಿದ ಜನ ನಿಮಗೆ ನೀವು ಊಹಿಸಿದ್ದಕ್ಕಿಂತ ಸುಲಭವಾಗಿ ಸಾಲ ಕೊಡುತ್ತಾರೆ. ನಿಮ್ಮಿಂದ 50 ಕಡೆಗಳಲ್ಲಿ ಸಹಿ ಪಡೆಯುತ್ತಾರೆ. ನಂತರ ನೀವು ಮೊದಲ ಕಂತು ಕಟ್ಟಬೇಕಾದ ದಿನ ಬಂದ ಮೇಲೆ ನಿಜವಾದ ಸಮಸ್ಯೆ ಶುರುವಾಗುತ್ತದೆ. ಆಗ ನಿಮಗೆ ಗೊತ್ತಾಗುತ್ತದೆ ಈಗ "ಕೊಟ್ಟೋನು ವೀರಭದ್ರ, ಇಸ್ಕೊಂಡೋನು ಕೋಡಂಗಿ'' ಎಂದು.

ನಗರದ ವಿದ್ಯಾವಂತ, ಸುಶಿಕ್ಷಿತ ಜನರೇ ಈ ರೀತಿ ಮೋಸ ಹೋಗುತ್ತಾರೆಂದರೆ, ಇನ್ನು ಸದಾ ಸಾಲದ ಸುಳಿಯಲ್ಲೇ ಸಿಕ್ಕು ಒದ್ದಾಡುವ ನಮ್ಮ ರೈತರನ್ನು ಇದೇ ಜನ ತಮ್ಮ ಬುಟ್ಟಿಗೆ ಕೆಡವಿಕೊಂಡರೆ ಏನಾಗಬಹುದು? ಅದೇ ನಂಜನಗೂಡು ತಾಲೂಕಿನ ಮಂಜುನಾಥರಿಗೂ ಆಗಿದ್ದು.

ನಂಜನಗೂಡು ತಾಲೂಕಿನ ಹೊಸಪುರ ಗ್ರಾಮದ ಮಂಜುನಾಥರು ನಾಲ್ಕೂವರೆ ಎಕರೆ ಒಣಭೂಮಿಯನ್ನು ಹೊಂದಿದ್ದರು. ಹೆಚ್ಚಿನ ಸಾಲಸೋಲಗಳಿರಲಿಲ್ಲ. ಒಂದು ವರ್ಷ ಎರಡು ತಿಂಗಳ ಕೆಳಗೆ ಅವರು ಐಸಿಐಸಿಐ ಬ್ಯಾಂಕಿನ ರಾಜೇಂದ್ರ ವಿಲಾಸ ರಸ್ತೆ ಶಾಖೆಯಿಂದ ಟ್ರಾಕ್ಟರ್ ಸಾಲವನ್ನು ಪಡೆದುಕೊಂಡಿದ್ದರು. ಮೊದಲ ಆರು ತಿಂಗಳಿಗೆ ಬಂದ 48 ಸಾವಿರ ರೂಪಾಯಿನ ಕಂತನ್ನೂ ಸಹ ಕಟ್ಟಿದ್ದಾರೆ. ಎರಡನೆಯ ಕಂತಿನ ದಿನ ನವೆಂಬರ್ ಐದನೆಯ ತಾರೀಖಿನದ್ದಾಗಿತ್ತು. ಅಂದು ಕಳಿಸಿದ ನೋಟೀಸಿನಲ್ಲಿ ಟ್ರಾಕ್ಟರ್ ಮತ್ತು ಟ್ರೈಲರ್ ಇತ್ಯಾದಿಗಳಿಗೆ ಸಂಬಂಧಿಸಿದಂತೆ 42,194 ರೂ., 3,866 ರೂ. ಮತ್ತು 7,839 ರೂ.ಗಳನ್ನು ಅಂದರೆ ಒಟ್ಟು 53,899 ರೂ.ಗಳನ್ನು ಕಟ್ಟಬೇಕೆಂದು ಹೇಳಲಾಗಿತ್ತು. ಇದರ ಬಗ್ಗೆ ಬ್ಯಾಂಕ್ ಕಳಿಸಿರುವ ನೋಟೀಸ್ ಮಂಜುನಾಥರಿಗೆ ತಲುಪಿದ್ದು ಡಿಸೆಂಬರ್ ನಾಲ್ಕನೆಯ ತಾರೀಖಿನಂದು. ಅವರಿಗೆ ತಲುಪಿರುವ ಕವರ್‌ನ ಮೇಲಿರುವ ಪೋಸ್ಟಾಫೀಸಿನ ಸೀಲ್ ಸಹ ಈ ದಿನಾಂಕವನ್ನು ದೃಢೀಕರಿಸುತ್ತದೆ. ನಾಲ್ಕರ ಬೆಳಿಗ್ಗೆ ಮಂಜುನಾಥ್ ನಂಜನಗೂಡಿಗೆ ಹೋಗಿದ್ದರು. ಅಂದು ಹೊಸಪುರಕ್ಕೆ ಐಸಿಐಸಿಐ ಸಿಬ್ಬಂದಿಯೆಂದು ಹೇಳಿಕೊಂಡ ಮೂವರು ತೆರಳಿದ್ದಾರೆ. ಸೀದಾ ಮಂಜುನಾಥ್ ಅವರ ಟ್ರಾಕ್ಟರ್ ಕೆಲಸ ಮಾಡುತ್ತಿದ್ದಲ್ಲಿಗೆ ಹೋಗಿ, ಅದರ ಡ್ರೈವರ್‌ಗೆ ಧಮಕಿ ಹಾಕಿದ್ದಾರೆ. ಅದರಲ್ಲಿ ತುಂಬಿದ್ದ ಹುಲ್ಲು ಕೆಡವಿ ಟ್ರಾಕ್ಟರ್ ತೆಗೆದುಕೊಂಡು ಹೋಗಿದ್ದಾರೆ. ಇದು ನಂಜನಗೂಡಿನಲ್ಲಿದ್ದ ಮಂಜುನಾಥ್‌ಗೆ ಗೊತ್ತಾಗಿದೆ. ತನ್ನ ಭಾವ ಮೈದುನ ರೇವಣ್ಣನಿಗೆ ನಂಜನಗೂಡಿಗೆ ಬರಲು ಹೇಳಿದ್ದಾರೆ. ನಂತರ ಅದರ ಅಗತ್ಯವಿಲ್ಲವೆಂದು ಹೇಳಿದ್ದರಿಂದ ಅವರು ವಾಪಸ್ಸು ಹೋಗಿದ್ದಾರೆ.

ಆ ರಾತ್ರಿ ಮಂಜುನಾಥ್ ಮನೆಗೆ ಬಂದಿಲ್ಲ. ವಿಷ ಸೇವಿಸಿ ನಂತರ ತಮ್ಮ ಹೊಲದಲ್ಲಿಯೇ ಇದ್ದ ತೊಟ್ಟಿಯಲ್ಲಿ ಮುಳುಗಿದ್ದಾರೆ. ಐದರ ಬೆಳಿಗ್ಗೆ ಸುಮಾರು 10.30 ರ ಹೊತ್ತಿಗೆ ಮಂಜುನಾಥ್ ಅವರು ಸತ್ತು ಹೋಗಿರುವುದು ಅವರ ಸಂಬಂಧಿಗಳು ಮತ್ತು ಸ್ನೇಹಿತರಿಗೆ ತಿಳಿದು ಬಂದಿದೆ. ತಾನು ಆ ದಿನವಷ್ಟೇ ಪಡೆದುಕೊಂಡಿದ್ದ ನೋಟೀಸಿನ ಹಿಂಬದಿಯಲ್ಲಿಯೇ ತನ್ನ 'ಡೆತ್‌ನೋಟ್' ಬರೆದಿಟ್ಟಿದ್ದಾರೆ. ಅದರಲ್ಲಿ ತಾನು ಈಗಾಗಲೇ 48 ಸಾವಿರ ರೂ.ಗಳನ್ನು ಕಟ್ಟಿರುವುದಾಗಿಯೂ, ಈಗ ಟ್ರಾಕ್ಟರ್ ಎತ್ತಿಕೊಂಡು ಹೋಗಿರುವುದರಿಂದ ಊರವರಿಗೆ ಮುಖ ತೋರಿಸುವುದು ಸಾಧ್ಯವಿಲ್ಲ; ಹಾಗಾಗಿ ಸಾಯುತ್ತಿದ್ದೇನೆ ಎಂಬರ್ಥದಲ್ಲಿ ಅದನ್ನು ಬರೆದಿದ್ದಾರೆ.

ಇದು ಮಂಜುನಾಥ್ ಒಬ್ಬರ ಕಥೆಯಲ್ಲವಾದ್ದರಿಂದ ನಾವು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಇತರ ರೈತರ ಅನುಭವವನ್ನೂ ಪರಿಶೀಲಿಸಬೇಕು. ಡಿಸೆಂಬರ್ 10ರ ರಾತ್ರಿಯಿಂದ ಹಗಲು ರಾತ್ರಿಯೆನ್ನದೆ ಧರಣಿ ನಡೆಸುತ್ತಿದ್ದ ರೈತರನ್ನು ಮಾತನಾಡಿಸಿದಾಗ ಅವರು ಐಸಿಐಸಿಐ ಬ್ಯಾಂಕಿನ ಬಂಡವಾಳವನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ಈ ವರದಿಯ ಮೊದಲಲ್ಲೇ ಹೇಳಿರುವಂತೆ ಐಸಿಐಸಿಐನಂತಹ ಬ್ಯಾಂಕ್‌ಗಳು ಸಾಲ ಕೊಡುತ್ತೇವೆಂದು ಹೇಳಿ ತಾವೇ ಮುಗಿಬೀಳುತ್ತವೆ. ಸಾಲ ಕೊಡಿಸಲೆಂದೇ ಇರುವ ಅವರ ಏಜೆಂಟರು, ಮೊದಲು ಸಾಲದ ಬಡ್ಡಿ ಕೇವಲ ಶೇ.6 ಎಂದು ಹೇಳುತ್ತಾರೆ. ಸಹಕಾರಿ ಬ್ಯಾಂಕ್ ಅಥವಾ ಇತರ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿಯಂತೆ ನಿಮಗೆ ಸಾಲ ಪಡೆಯಲು ಅಲೆಯಬೇಕಾಗಿಲ್ಲ, ಕಿರಿಕಿರಿಗಳಿರುವುದಿಲ್ಲ ಎಂದು ಹೇಳಲಾಗುತ್ತದೆ. ರೈತ ಬ್ಯಾಂಕನ್ನು ನೋಡುವ ಅಗತ್ಯವೇ ಇಲ್ಲದಂತೆ ತಾವೇ ಎಲ್ಲವನ್ನೂ ಮಾಡಿಸಿಕೊಡುವುದಾಗಿ ಹೇಳಿರುತ್ತಾರೆ. ಸಾಲ ನೀಡಿಕೆಗೆ ಇಂತಿಷ್ಟು ಜನರನ್ನು ಹಿಡಿಯಲೇಬೇಕೆಂಬ ಟಾರ್ಗೆಟ್ ಇಟ್ಟುಕೊಂಡು, ಅದನ್ನು ಸಾಧಿಸಲು ಸಾಧ್ಯವಿರುವ ಹಲವು ರೀತಿಯ ತಂತ್ರಗಳನ್ನು ಬಳಸಲಾಗುತ್ತದೆ. ಇತರ ಬ್ಯಾಂಕ್‌ಗಳಲ್ಲಿ ಟ್ರಾಕ್ಟರ್ ಸಾಲ ಪಡೆಯಲು ಇಂತಿಷ್ಟು ಜಮೀನಿರಲೇಬೇಕೆಂಬ ನಿಯಮವಿದೆ. ಆದರೆ ಐಸಿಐಸಿಐ ಅದನ್ನೂ ನೋಡದೆ, ಕೇಳದಿದ್ದವರಿಗೂ ಎಳೆತಂದು ಸಾಲ ಕೊಡುತ್ತದೆ. ಒಪ್ಪಿಕೊಂಡ ರೈತರ ಕೈಯಲ್ಲಿ ಸುಮಾರು 40ಕ್ಕೂ ಹೆಚ್ಚು ಕಡೆ ಸಹಿಗಳನ್ನು ಪಡೆಯುತ್ತಾರೆ. ಸಾಲದ ಎಲ್ಲಾ ಫಾರಂಗಳೂ ಇಂಗ್ಲಿಷ್‌ನಲ್ಲಿರುತ್ತವೆ. ಇದಲ್ಲದೆ ಕೆಲವು ಖಾಲಿ ಚೆಕ್ಕುಗಳಿಗೂ ಸಹಿ ಪಡೆಯಲಾಗುತ್ತದೆ. ಟ್ರಾಕ್ಟರ್ ಶೋರೂಂ ಹೊಂದಿರುವ ಡೀಲರ್, ಸಾಲ ಕೊಡಿಸುವ ಏಜೆಂಟರು (ಬಹುತೇಕ ಸಂದರ್ಭಗಳಲ್ಲಿ ಇವರು ಆಯಾ ಊರಿನ ಪುಢಾರಿಗಳೇ ಆಗಿರುತ್ತಾರೆ). ಮತ್ತು ಬ್ಯಾಂಕ್ ಇವರುಗಳ ಕೂಟವು ರೈತರನ್ನು ತಮ್ಮ ಬಲೆಗೆ ಬೀಳಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಶೇ.6 ಎಂದು ನಂಬಿಸಿ ಸಹಿ ಹಾಕಿಸಿಕೊಂಡಿದ್ದರೂ, ಬಡ್ಡಿಯ ದರ ಶೇ.15 ಎಂದು ಗೊತ್ತಾಗುವುದು ಸಂಬಂಧಿಸಿದ ಪತ್ರಗಳು ಕೈಗೆ ಬಂದಾಗಲೇ.

ಅಲ್ಲಿಂದ ಮುಂದಕ್ಕೆ ರೈತರಿಗೆ ಸಮಸ್ಯೆಗಳು ಆರಂಭವಾಗುತ್ತವೆ. ಟ್ರಾಕ್ಟರ್ ಡೀಲರ್ ಹತ್ತಿರಕ್ಕೆ ಅವರ ಅಲೆದಾಟ ಆರಂಭವಾಗುತ್ತದೆ. ಕಂಪೆನಿಗಳು ನೀಡುವ ಸ್ಟಾಂಡರ್ಡ್ ಉಪಕರಣಗಳು, ಉಚಿತ ಇನ್ಶೂರೆನ್ಸ್, ದ್ವಿಚಕ್ರ ವಾಹನ ಮುಂತಾದ ಕೊಡುಗೆಗಳನ್ನು ರೈತರಿಗೆ ವರ್ಗಾಯಿಸುವುದಿಲ್ಲ. ಟ್ರಾಕ್ಟರ್ ಮತ್ತು ಟ್ರೈಲರ್ ಹಾಗೂ ಇತರೆ ಕೃಷಿ ಉಪಕರಣಗಳಿಗೆ ಒಟ್ಟಾಗಿ ಸಾಲ ದಾಖಲಾತಿ ಮಾಡಿಕೊಂಡು ಕೇವಲ ಇಂಜಿನ್ ಮಾತ್ರ ಕೊಟ್ಟು ಉಳಿದ ಟ್ರೈಲರ್ ಮುಂತಾದ ಉಪಕರಣಗಳನ್ನು ಕೊಡದೆ ಹಲವಾರು ಬಾರಿ ರೈತರನ್ನು ಅಲೆಸುತ್ತಾರೆ. ಕೆಲವು ಬಾರಿ ಇಂಜಿನ್‌ನ ಜೊತೆ ಉಳುವ ಉಪಕರಣ (ಕಲ್ಟಿವೇಟರ್)ವನ್ನೂ ನೀಡದೆ ತಿಂಗಳುಗಟ್ಟಲೆ ಸತಾಯಿಸಿರುವುದೂ ಇದೆ. ಇದರಿಂದ ಬೇಸತ್ತು ಹಲವು ರೈತರು ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಹೋದಾಗ, ದೂರು ಸ್ವೀಕರಿಸಲು ಪೊಲೀಸರು ನಿರಾಕರಿಸುತ್ತಾರೆ. ಚಾಮರಾಜನಗರ ತಾಲೂಕಿನ ಹರವೆ ಗ್ರಾಮದ ಶಾಂಭಮೂರ್ತಿ ಇಂತಹ ಹತ್ತಾರು ನಿದರ್ಶನಗಳನ್ನು ಬಿಡಿಸಿಟ್ಟರು.

ಹೇಗೋ ಕಲ್ಟಿವೇಟರ್ ಮತ್ತು ಟ್ರೈಲರ್‌ಗಳನ್ನು ಪಡೆದು ಅದರಿಂದ ತನ್ನ ಕೆಲಸವನ್ನು ಪ್ರಾರಂಭಿಸುವಷ್ಟರಲ್ಲಿ ಮೊದಲ ಕಂತು ಕಟ್ಟಬೇಕಾದ ಸಮಯ ಬಂದೇ ಬಿಟ್ಟಿರುತ್ತದೆ. ಕಂತು ಕಟ್ಟಬೇಕಾದ ದಿನಾಂಕದಿಂದ ಕೇವಲ 7 ದಿನಗಳ ಒಳಗೆ ರೈತ ಹಣ ಪಾವತಿಸಬೇಕು. ಇಲ್ಲವಾದಲ್ಲಿ ರಿಕವರಿ ಏಜೆಂಟರೆಂಬ ವಿಶೇಷ ಅಧಿಕಾರಿಗಳು ಅವತರಿಸುತ್ತಾರೆ. (ಬಾಕ್ಸ್ ನೋಡಿ). ಯಾವ ದಯಾ ದಾಕ್ಷಿಣ್ಯಗಳಿಲ್ಲದೆ ಟ್ರಾಕ್ಟರ್‌ಅನ್ನು ತೆಗೆದುಕೊಂಡು ಹೋಗುತ್ತಾರೆ.

ಹೊಸಪುರದ ಮಂಜುನಾಥರ ವಿಚಾರದಲ್ಲಿ ಆದದ್ದೂ ಇದೇ. ಈ ಹಿಂದೆ ಇನ್ನೂ ಅದೆಷ್ಟೋ ಕಡೆ ಈ ರೀತಿಯ 'ರಿಕವರಿ' ನಡೆದಿದೆ. ನಂಜನಗೂಡು ತಾಲ್ಲೂಕುವೊಂದರಲ್ಲೇ, ಕಾರ್ಯಗ್ರಾಮ, ನಗರ್ಲೆ, ಗಟ್ಟವಾಡಿಗಳಲ್ಲಿ ಈ ರೀತಿ ಟ್ರಾಕ್ಟರ್‌ಗಳನ್ನು ತೆಗೆದುಕೊಂಡ ಉದಾಹರಣೆಗಳನ್ನು ಐಸಿಐಸಿಐ ಬ್ಯಾಂಕಿನ ಮುಂದೆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ನಂಜನಗೂಡು ತಾಲ್ಲೂಕಿನ ನಾಗರಾಜ್ ಹೇಳಿದರು.

ನಂಜನಗೂಡು ತಾಲ್ಲೂಕಿನ ದೊಡ್ಡ ಕವಲಂದೆ ಶೆಟ್ಟಯ್ಯ, ಗಟ್ಟವಾಡಿ ನಾಗರಾಜು, ವೀರೇದೇವನಪುರದ ಆರ್.ರಾಜು, ಗಟ್ಟವಾಡಿಪುರದ ಶಿವಣ್ಣ, ರಂಗರಾಜು, ಕಾರ್ಯದ ನಂಜಯ್ಯ, ಸಿದ್ದಲಿಂಗಯ್ಯ, ಸಿದ್ದರಾಜನಾಯ್ಕ, ಕೆ.ಆರ್.ನಗರ ತಾಲೂಕಿನ ಮೋಟನಾಯ್ಕ, ಚಾಮರಾಜನಗರ ತಾಲೂಕಿನ ಉತ್ತಂಬಳ್ಳಿ ರವಿಶಂಕರ್, ಕೆಂಗಾಕಿ ವೃಷಭೇಂದ್ರಪ್ಪ, ಹೆಚ್.ಡಿ.ಕೋಟೆ ಕಣಿಯನಹುಂಡಿ ಸ್ವಾಮಿಗೌಡ ಹೀಗೆ ಟ್ರಾಕ್ಟರ್ ಸಾಲದಿಂದ ಬವಣೆಗೊಳಗಾದ ರೈತರ ದೊಡ್ಡ ಪಟ್ಟಿಯೇ ಇದೆ. ವಾಸ್ತವದಲ್ಲಿ ಮಂಜುನಾಥರ ಆತ್ಮಹತ್ಯೆಗೆ ಮುಂಚೆಯೇ ಚಾಮರಾಜನಗರದ ರೈತರು ನವೆಂಬರ್ 29ರಂದು ಇದೇ ಐಸಿಐಸಿಐ ಬ್ಯಾಂಕಿನ ವಿರುದ್ಧ ಮೈಸೂರಿನಲ್ಲಿ ಟ್ರಾಕ್ಟರ್ ಸಾಲದ ವಿಚಾರದಲ್ಲಿ ಮಾಡಿದ ಮೋಸದ ಕಾರಣಕ್ಕಾಗಿ ಪ್ರತಿಭಟಿಸಿದ್ದರು.

ಮಂಜುನಾಥ್ ಆತ್ಮಹತ್ಯೆ ಮಾಡಿಕೊಂಡ ನಂತರದಲ್ಲಿ ಈ ವಿಚಾರವನ್ನು ಇನ್ನಷ್ಟು ಗಂಭೀರವಾಗಿ ಪರಿಗಣಿಸಿದ ಚಾಮರಾಜನಗರ ಜಿಲ್ಲೆಯ ರೈತಸಂಘದ ಮುಖಂಡ ಮಹೇಶ್‌ಪ್ರಭು ಅವರು ಮೈಸೂರಿನಲ್ಲಿ ಡಿ.9ರಂದು ಪೂರ್ವಭಾವಿ ಸಭೆಯೊಂದನ್ನು ಕರೆದರು. ರೈತಸಂಘದ ಉಪಾಧ್ಯಕ್ಷ ವೀರಸಂಗಯ್ಯನವರು ಸೇರಿ ಡಿ.10ರಂದು ಐಸಿಐಸಿಐ ಬ್ಯಾಂಕ್‌ನ ರಾಜೇಂದ್ರ ವಿಲಾಸ ರಸ್ತೆಯ ಶಾಖೆಯ ಮುಂದೆ ಪ್ರತಿಭಟನೆ ಆರಂಭಿಸಿದರು. ಮೈಸೂರಿನ ಪ್ರಗತಿಪರರಾದ ಪ.ಮಲ್ಲೇಶ್, ಎಚ್.ಗೋವಿಂದಯ್ಯ, ಡಾ.ಪೂರ್ಣಾನಂದ, ಪ್ರೊ.ವಿ.ಲಕ್ಷ್ಮೀನಾರಾಯಣ, ಸಮಾಲ ಪತಿಶಾ ಬಳಗದ ಗೆಳೆಯರು, ಮುದ್ದುಕೃಷ್ಣ, ಜನಮನ ಗೋಪಾಲಕೃಷ್ಣ ಇನ್ನಿತರರೆಲ್ಲಾ ಭಾಗವಹಿಸಿ ಪ್ರತಿಭಟನೆಯ ಕಾವನ್ನು ಹೆಚ್ಚಿಸಿದರು. ಪ್ರತಿಭಟನೆಗೆ ಹೆಚ್ಚಿನ ಮಹತ್ವ ಬಂದಿದ್ದು, ಕಾವೇರಿ ವಿವಾದದ ವಿಚಾರದಲ್ಲೂ ಒಂದಾಗದೆ ಹೋದ ಕೋಡಿಹಳ್ಳಿ ಚಂದ್ರಶೇಖರ್ ಮತ್ತು ಪುಟ್ಟಣ್ಣಯ್ಯನವರು ಮತ್ತು ಎರಡೂ ಬಣದ ನಾಯಕರು, ಕಾರ್ಯಕರ್ತರುಗಳು ಒಟ್ಟಾಗಿ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರಿಂದ. ನಾಲ್ಕು ದಿನಗಳ ಕಾಲ ನಡೆದ ಪ್ರತಿಭಟನೆಯು ರಾಜ್ಯ ಮಟ್ಟದಲ್ಲಿ ಸುದ್ದಿಯಾಯಿತು.

ಹಗಲೂ ರಾತ್ರಿ ಮುಂದುವರೆದ ಪ್ರತಿಭಟನೆ ಅಂತಿಮವಾಗಿ ಡಿ.14ರಂದು ಮೈಸೂರಿನ ಎಲ್ಲಾ ಐಸಿಐಸಿಐ ಶಾಖೆಗಳನ್ನು ಮುಚ್ಚುವ ಹಂತಕ್ಕೆ ಹೋಯಿತು. ರಾಜ್ಯದ ವಿವಿಧ ಭಾಗಗಳಲ್ಲಿ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಭಟನೆಗಳಾದುವು. ಹಾಗಾಗಿ ಬ್ಯಾಂಕಿನ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿ ಚಳವಳಿನಿರತರೊಂದಿಗೆ ಸಂಧಾನಕ್ಕೆ ಮುಂದಾದರು. ಡಿ.14ರ ರಾತ್ರಿ ನಡೆದ ಮಾತುಕತೆಯಲ್ಲಿ ಮಂಜುನಾಥರ ಸಾಲ ಸಂಪೂರ್ಣ ಮನ್ನಾ ಮಾಡಿ ಟ್ರಾಕ್ಟರ್ ಹಾಗೂ ಜಮೀನಿನ ಕಾಗದ ಪತ್ರಗಳನ್ನು ಹಿಂತಿರುಗಿಸುವುದಕ್ಕೆ ಒಪ್ಪಿಕೊಂಡರು. ಕೂಡಲೇ ತನಿಖೆಯನ್ನು ಆರಂಭಿಸಿ, ತನಿಖೆಯಲ್ಲಿ ಬ್ಯಾಂಕ್‌ನ ತಪ್ಪಿನ ಕಾರಣಕ್ಕಾಗಿಯೇ ಈ ಆತ್ಮಹತ್ಯೆ ಸಂಭವಿಸಿದೆಯೆಂದಾದಲ್ಲಿ 10 ಲಕ್ಷ ರೂಪಾಯಿಗಳನ್ನು ನೀಡುವುದಾಗಿ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿ ಒಪ್ಪಿಕೊಂಡರು. ಅಲ್ಲಿಯವರೆಗೆ ಈ ಹಣವನ್ನು ಠೇವಣಿಯಾಗಿ ಇಡುವುದಾಗಿ ಹೇಳಲಾಗಿದೆ.

ಮೂರು ದಶಕಗಳ ಕೆಳಗೆ ರೈತ ಚಳವಳಿ ಪ್ರಾರಂಭವಾದಾಗ ಇದ್ದ ಪ್ರಮುಖ ಸಮಸ್ಯೆ ರೈತರ ಆಸ್ತಿಪಾಸ್ತಿ ಜಪ್ತಿಯದ್ದಾಗಿತ್ತು. ಅಂದು ಬಲಪಡೆದುಕೊಂಡ ರೈತ ಚಳವಳಿಯು ಅದನ್ನು ತಡೆಯುವಲ್ಲಿ ಯಶಸ್ವಿಯಾಗಿತ್ತು. ಆದರೆ ಇಂದು ಜಾಗತೀಕರಣದ ಈ ಮಜಲಿನಲ್ಲಿ ಜನ ತಮ್ಮ ಹೋರಾಟಗಳಿಂದ ಗಳಿಸಿದ ಹಕ್ಕುಗಳೂ ತಿರುವು ಮುರುವಾಗುತ್ತಿವೆ ಎಂಬುದಕ್ಕೆ ಇದು ಒಂದು ಸ್ಪಷ್ಟ ನಿದರ್ಶನವಾಗಿದೆ.


ಸದ್ಯಕ್ಕೆ ಮಂಜುನಾಥರ ವಿಚಾರದಲ್ಲಿ ಅಲ್ಪಪ್ರಮಾಣದ ಪರಿಹಾರ ದೊರೆತಿದ್ದರೂ, ಇನ್ನೂ ಹಲವು ಪ್ರಶ್ನೆಗಳು ಹಾಗೆಯೇ ಉಳಿದಿವೆ. ಈಗ ಸಾಲಮನ್ನಾ ಮಾಡಿ, ಟ್ರಾಕ್ಟರ್ ಹಿಂತಿರುಗಿಸುವುದರ ಮೂಲಕ ಬ್ಯಾಂಕ್ ತನ್ನ ತಪ್ಪನ್ನು ಈಗಾಗಲೇ ಒಪ್ಪಿಕೊಂಡಿದೆ. ಇನ್ನು ಮುಂದೆ ಹೀಗಾಗದಂತೆ ತಡೆಯಲು ಸರ್ಕಾರವು ಏನು ಕ್ರಮ ಕೈಗೊಳ್ಳುತ್ತದೆ? ಇದುವರೆಗೆ ಸಂವಿಧಾನಬಾಹಿರ ಕೃತ್ಯದಲ್ಲಿ ತೊಡಗಿದ್ದ ಬ್ಯಾಂಕ್‌ನ ಮೇಲೆ ಏನು ಕ್ರಮ ಕೈಗೊಳ್ಳಲಾಗುತ್ತದೆ? ಮೂರು ದಿನಗಳಲ್ಲಿ ತನಿಖೆಯನ್ನು ಪೂರ್ಣಗೊಳಿಸುತ್ತೇನೆ ಎಂದು ಹೇಳಿರುವ ಜಿಲ್ಲಾಧಿಕಾರಿಯವರು ಬ್ಯಾಂಕ್‌ನ ಹಿತಾಸಕ್ತಿಯ ವಿರುದ್ಧ ವರದಿ ನೀಡುವರೇ? ಇದೆಲ್ಲಕ್ಕೂ ಮುಖ್ಯವಾದ ಪ್ರಶ್ನೆಯೆಂದರೆ ಐಸಿಐಸಿಐನಂತಹ ಬ್ಯಾಂಕ್‌ಗಳ ಬಳಿ ಸಾಲ ಕೇಳಲು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದ್ದು ಏಕೆ? ನಮ್ಮ ಸಹಕಾರಿ ಬ್ಯಾಂಕ್‌ಗಳು ಮತ್ತು ಇತರ ರಾಷ್ಟ್ರೀಕೃತ ಬ್ಯಾಂಕ್‌ಗಳು ರೈತರಿಗೆ ಅನುಕೂಲವಾಗುವ ಕಲ್ಯಾಣ ಕಾರ್ಯಕ್ರಮಗಳಿಂದ ಹಿಂದೆ ಸರಿಯುತ್ತಿರುವುದಕ್ಕೆ ಜಾಗತೀಕರಣ ನೀತಿಗಳು ಕಾರಣವಾಗಿವೆ. ಹಾಗಾಗಿಯೇ ಲಾಭಕೋರತನವೇ ಏಕೈಕ ಉದ್ದೇಶವಾಗಿರುವ ಖಾಸಗಿ, ಅರೆಖಾಸಗಿ ಬ್ಯಾಂಕ್‌ಗಳತ್ತ ರೈತ ತಿರುಗಿನೋಡುವಂತಾಗಿದೆ. ಸರ್ಕಾರಗಳು ಜನರನ್ನು ಖಾಸಗಿ ಕಟುಕರ ಕೈಗೊಪ್ಪಿಸಿ ಕೇವಲ ಕಾನೂನು-ಸುವ್ಯವಸ್ಥೆ ಬಗ್ಗೆ ಮಾತನಾಡಿದರೆ, ಈ ಕಟುಕರ ಲಾಭವನ್ನು ರಕ್ಷಿಸುವ ಕೆಲಸಕ್ಕೆ ಮಾತ್ರ ಸೀಮಿತವಾದರೆ ರೈತರ ಆತ್ಮಹತ್ಯೆಗಳು/ಹತ್ಯೆಗಳು ನಿಲ್ಲುವುದಾದರೂ ಹೇಗೆ?

■ ವರದಿಗಾರ

ರಿಕವರಿ ಏಜೆಂಟರೆಂಬ ಗೂಂಡಾಗಳು

ಕ್ರೆಡಿಟ್ ಕಾರ್ಡ್ ಕಂಪೆನಿಗಳು ತಮ್ಮ [illegible] ವಸೂಲಾತಿಗಾಗಿ ಗೂಂಡಾಗಳನ್ನು [illegible] ಕೋಚಾಗಳನ್ನು ಬಳಸಿದ್ದನ್ನು ನೀವು [illegible] ವಸೂಲಾತಿಗಾಗಿ ಗೂಂಡಾಗಳನ್ನು ಬಳಸುವಂತಿಲ್ಲ [illegible] ಹೇಳಿದ. ಆದರ ಕೋರ್ಟ್‌ನ [illegible] ... 10,000ರೂ.ಗಳನ್ನು [illegible] (ಇದು 6,000ದಿಂದ 20,000ವರೆಗೆ) [illegible] ಗೂಂಡಾಗಳಿಗೆ [illegible] ಬಂದರೆ ಅಷ್ಟು ಸಾಕು!

ಅವನು ಹೇಳಿದ. ಈ ಮನು ಅನ್ನುವವನು ಹೇಳಿದ. ಮತ್ತು ಅವನ ಧರ್ಮವು ಹೇಳಿತು-ಬ್ರಾಹ್ಮಣನನ್ನ ಕೊಂದವನು ಚಂಡಾಲನಾಗಿ ಹುಟ್ತಾನೆ ಅಂತ. ಅದೇ ನಿಜವಾಗಿದ್ದರೆ ಅದೆಷ್ಟು ದನ ಬ್ರಾಹ್ಮಣರನ್ನ ಕೊಂದಿದ್ದಕ್ಕೆ ಎನ್ನಲದಿನ್ನೆಯಲ್ಲಿ ಇಷ್ಟೊಂದು ಹೊಲೆ ಮಾದಿಗರು ಹುಟ್ಟಿರಬೇಕು? ಹಾಗಿದ್ದಲ್ಲಿ ಎಲ್ಲನ್ನನ ಕೈಲಿ ಸತ್ತ ಬ್ರಾಹ್ಮಣನ ಹೆಸರೇನೆಂದು ಮನು ಹೇಳಲೇ ಬೇಕು. ಅವನು ಹೇಳದಿದ್ದರೆ ಅವನ ಧರ್ಮವನ್ನ ಕಾಪಾಡುತ್ತಲೇ ಇರುವ ಅವನ ಜಾತಿಗಳು, ಮೇಲ್ಜಾತಿಗಳು ಹೇಳಲೇಬೇಕು. ಸಿಟ್ಟು, ಕ್ರೋಧ, ಕಣ್ಣೀರು. ರೂಥಳ ಎದೆ ತುಂಬಾ, ರೂಥಳ ಆಲೋಚನೆಯ ತುಂಬಾ...ಇಷ್ಟು ವರ್ಷಗಳ ನಂತರ....ಇಷ್ಟು ಯುಗಗಳ ನಂತರ.. ಇಷ್ಟೊಂದು ವಿಷಾದದ ಕೋಡಿ ಹರಿದು ಸುತ್ತು ಸುಳಿಗಟ್ಟುತ್ತಿರುವಾಗ...



ಮನುವೆಂಬ ಅಷ್ಟಾವಕ್ರ ಮತ್ತು ಎಲ್ಲನ್ನನೆಂಬ ಎಳೆಹುಡುಗ



ಹೇಳುತ್ತಾರೆ: ದೊಡ್ಡವರು, ಶ್ರೇಷ್ಠರು ಅಂತ ಅನ್ನಿಸಿಕೊಂಡವರು. ಸಂತರು, ಸನ್ಯಾಸಿಗಳು, ತತ್ವಜ್ಞಾನಿಗಳು. ಇವರೆಲ್ಲಾ ಬೇಜಾರು ಇಲ್ಲದೆ ಒಂದು ವಿಷಯವನ್ನಂತೂ ಹೇಳುತ್ತಲೇ ಇರುತ್ತಾರೆ- ಮನುಷ್ಯ ಹುಟ್ಟಿದಾಗಲೇ, ಅವನ ಜೀವನ ಹೀಗೇ ಇರುತ್ತೆ ಅಂತ ಅವನ ಹಣೆಯಲ್ಲಿ ಬರೆದಿರುತ್ತದೆ ಮತ್ತು ಬರೆದ ಹಾಗೆಯೇ ನಡೆಯುತ್ತದೆ. ಬೇರೆ ಏನೇ ಅಂದುಕೊಂಡರೂ ಆಗುವುದಿಲ್ಲ.

ತತ್ವಗಳು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹಾಕುತ್ತವೆ. ಅಲ್ಲೊಂದು ಗೂಡು. ಆ ಗೂಡಿಗೆ ಒಂದು ಗಿಳಿ ಬರುತ್ತೆ, ಸ್ವಲ್ಪ ಕಾಲವಾದ ಮೇಲೆ ಆ ಗಿಳಿ ಗೂಡನ್ನು ಕೆಡವಿ ಹಾರಿ ಹೋಗುತ್ತೆ. ಎಲ್ಲಿಗೆ ಹೋಗುತ್ತೆ? ಗೊತ್ತಿಲ್ಲ, ಎಲ್ಲೋ ಅನಂತದಲ್ಲಿ ದಿಗ್ದಿಗಂತದ ಕಡೆ ಹಾರಿಹೋಗುತ್ತದೆ ಎನ್ನುತ್ತಾರೆ.

ಆದರೆ ಆ ಗಿಳಿ ಬಿಟ್ಟುಹೋದ ಗೂಡಂತೂ ಇಲ್ಲೇ ಈ ವಿಶಾಲ ರಂಗಸ್ಥಳದಲ್ಲಿಯೇ ಇರುತ್ತೆ. ಈ ರಂಗಸ್ಥಳದಲ್ಲಿ ಅವೆಷ್ಟೋ ಆಗಮನ, ನಿರ್ಗಮನಗಳು. ಒಂದಾದನಂತರ ಒಂದು ನಡೆಯುತ್ತಲೇ ಇರುತ್ತವೆ. ತೆರೆಯ ಹಿಂದಿನ ಸೂತ್ರಧಾರನ ನಿರ್ದೇಶನದಂತೆ! ನಾವೆಲ್ಲರೂ ಅದರಂತೆ ನಡೆಯುವ ಕೇವಲ ಕೀಲುಗೊಂಬೆಗಳು.

ಗೊಂಬೆಗಳು ಅಳುತ್ತವೆ, ಗೊಂಬೆಗಳು ನಗುತ್ತವೆ. ಹೀಗೊಂದು ಬೊಂಬೆಗಿಳಿ ದಾರುಣವಾಗಿ ಸಾಯಿಸಲ್ಪಟ್ಟು ಪ್ರಾಣಬಿಡುತ್ತದೆ. ಮತ್ತೊಂದು ಬೊಂಬೆಗಿಳಿ ಆಗತಾನೆ ಹುಟ್ಟಿ ತನ್ನ ಕೀರಲು ದನಿಯೆತ್ತಿ ತನ್ನ ಆಗಮನವನ್ನ ಪ್ರಪಂಚಕ್ಕೆ ಸಾರುತ್ತೆ. ಎಲ್ಲವೂ ಗಿಳಿಗಳೇ. ಎಲ್ಲರೂ ಮನುಷ್ಯರೇ: ಭೂಮಿಯ ತುಂಬಾ ಹರಡಿಕೊಂಡಿದ್ದಾರೆ, ರಂಗಸ್ಥಳವನ್ನೆಲ್ಲಾ ಆವರಿಸಿಕೊಂಡಿದ್ದಾರೆ.

ಇದೆಲ್ಲಾ ವೇದಾಂತ, ಹಣೆಬರಹದ ಸಿದ್ಧಾಂತ. ಅದಕ್ಕೆ ಕೊನೆಯೂ ಇಲ್ಲ, ಮೊದಲೂ ಇಲ್ಲ, ಅನಂತವಾದದ್ದು, ಅರ್ಥವಾಗದ್ದು, ಕೇವಲ ಕೆಲವರಿಗೆ ಮಾತ್ರ ಅರ್ಥವಾಗುವಂಥದ್ದು, ಅವರು ಮಾತ್ರ ವಿವರಿಸಬಲ್ಲಂಥದ್ದು. ಸಾಯಲಿ ಬಿಡಿ. ಆ ಕೆಲವರು ಮಾತ್ರವೇ ರಂಗಸ್ಥಳದ ಮೇಲೆ ಹೊಡ್ಕೊಂಡು ಹೊಡ್ಕೊಂಡು ಗಂಟಲು ಒಣಗಿ ಸಾಯಲಿ ಬಿಡಿ. ಬೇಕಾಗಿಲ್ಲ, ಅದೆಲ್ಲಾ ರೂಥಳಿಗೆ ಬೇಕಾಗಿಲ್ಲ.

ಈ ವೇದಾಂತಗಳು, ಮೋಸಗಳು, ಗಿಳಿಗಳು, ಗೊಂಬೆಗಳು, ಗೂಡುಗಳು, ರಂಗಸ್ಥಳಗಳು ಇವು ಯಾವೂ ರೂಥಳಿಗೆ ಬೇಕಾಗಿಲ್ಲ. ಅವಳಿಗೆ ಬೇಕಾಗಿದ್ದು ಜೀವನ. ಅವಳಿಗೆ ಬೇಕಾದದ್ದು ನಿಜಜೀವನ, ಅದರ ವಾಸ್ತವಗಳು. ತನ್ನ ನೆನಪಿನಲ್ಲಿ ಹಸಿಯಾಗಿರುವ ಕೈಯಲ್ಲಿ ಪ್ರಾಣ ಹಿಡಿದುಕೊಂಡು ಓಡುತ್ತಲೇ ಇರುವ ಎಲ್ಲನ್ನಗಳು.

ಯೋಚಿಸಿದಂತೆಲ್ಲಾ ರೂಥಳಿಗೇ ಸೋಜಿಗವಾಗುತ್ತೆ. ರೂಬೆನ್‌ನ ಪೂರ್ವಜನಾದ ಎಲ್ಲನ್ನನನ್ನು ನೆನಸಿಕೊಂಡರೆ, ತುಂಬಾ ಹಿಂದೆ ಅವನು ಸಣ್ಣವನಿದ್ದಾಗ ಜೀವ ಕೈಯಲ್ಲಿ ಹಿಡಿದುಕೊಂಡು ಓಡಿದ ಅವನನ್ನು ನೆನಸಿಕೊಂಡರೆ ಅನ್ಯಾಯ ಎಂಬುದು ಭೂಮಿಯಲ್ಲಿ ಹುಟ್ಟಿ ಮೋಸ ಮೇಲಕ್ಕೇರಿ ಜಗತ್ತೆಲ್ಲಾ ಹರಡಿ ಆಕಾಶವನ್ನೂ ಸೀಳಿಕೊಂಡು ಎಟುಕಲಾರದಷ್ಟು ಎತ್ತರದಲ್ಲಿ ನಿಂತಂತಾಗುತ್ತೆ.

ತನ್ನ ಎದುರಿಗಿದ್ದ ದಾರಿಯ ಕಡೆ ಒಂದು ಸಲ ನೋಡಿ, ನಂತರ ಹಿಂದುಮುಂದು ನೋಡದೆ ಆ ಹಾದಿಯನ್ನೇ ಹಿಡಿದು ನಡೆದ ಎಲ್ಲನ್ನನ ನಡಿಗೆ ಆಶ್ಚರ್ಯ ತರಿಸುತ್ತೆ, ಆ ಹುಡುಗ ಹೇಗೆ ಅಷ್ಟು ದೂರ ನಡೆದನೋ ಅರ್ಥವೇ ಆಗೋದಿಲ್ಲ, ಭಯವೇ ಆ ಶಕ್ತಿ ಕೊಟ್ಟಿರುತ್ತದೆ. ನಿಜಕ್ಕೂ, ಅವನು ಬಹಳ ದೂರ ಬಂದಿದ್ದ. ಸೂರ್ಯ ನಡುನೆತ್ತಿಯ ಮೇಲೆ ಯಾವಾಗ ಬಂದನೋ, ಯಾವಾಗ ಪಡುವಣದ ಕಡೆ ಜಾರಿದನೋ ಆ ಹುಡುಗನಿಗೆ ತಿಳಿಯಲೇ ಇಲ್ಲ, ಮೊದಮೊದಲು ಮೆತ್ತಗೆ ಆವರಿಸಿದ ಮಬ್ಬುಗತ್ತಲು ಕ್ರಮೇಣ ದಟ್ಟವಾಯಿತು. ಎಲ್ಲನ್ನ ಆ ಕತ್ತಲಲ್ಲಿ ಬೆರೆತು ನಡೆದ. ಕತ್ತಲಲ್ಲಿ ತಾನು ಯಾರಿಗೂ ಕಾಣೋದಿಲ್ಲ ಅನ್ನೋ ನಂಬಿಕೆ ಬಂದಿತು. ಆ ನಂಬಿಕೆ ಮೂಡಿದ ಮೇಲೆ ಭಯವೂ ಮಾಯವಾಯಿತು. ಒಂದೆಡೆ ಕೂತು ಕೊಳ್ಳಬೇಕೆನಿಸಿತು. ಕೂತುಕೊಳ್ಳುವಷ್ಟು ನಿರಾಳವಾಯಿತು. ನೆಲದ ಮೇಲೆ ಕುಂತ, ಮರಳ ದಿಬ್ಬದ ಮೇಲೆ ಮೈಚಾಚಿದ. ಮಲಗಿ ಆಕಾಶದ ಕಡೆ ದಿಟ್ಟಿಸಿದ. ಅಲ್ಲೊಂದು ಚುಕ್ಕೆ ಇಲ್ಲೊಂದು ಚುಕ್ಕೆ.

ಹೌದೂ....

ಈ ಪ್ರಸಂಗ ಯಾವ ರಂಗಸ್ಥಳದ ಮೇಲೆ ನಡೆಯಿತು? ರೂಥಳ ನೆನಪುಗಳಲ್ಲಿ ಜನ್ಮ ತಳೆದ ಆ ಬಹಿಷ್ಕೃತ ರಂಗಸ್ಥಳದ ಸೃಷ್ಟಿಕರ್ತ ಯಾರು? ಅವನು ಅರ್ಧ ಮನುಷ್ಯ ಅರ್ಧ ಪ್ರಾಣಿ. ದೈವವೂ ಅಲ್ಲ, ದೆವ್ವವೂ ಅಲ್ಲ, ನರನಲ್ಲ, ವಾನರನಲ್ಲ, ಸೃಷ್ಟಿಯಲ್ಲಿ ಎಲ್ಲೂ ಕಾಣದಂಥ ಅಷ್ಟಾವಕ್ರ ರೂಪ.

ಎಲ್ಲನ್ನನಿಗಾಗಿ ಆ ಪ್ರಸಂಗವನ್ನು, ಅದಕ್ಕಾಗಿಯೇ ಆ ರಂಗಮಂಚವನ್ನ ಸೃಷ್ಟಿಸಿದ ಆ ಅಷ್ಟಾವಕ್ರರೂಪ ಯಾರದು? ಬಯಲಾಟದವರೇ ಆದರೆ ಎಲ್ಲನ್ನನ ಬಗ್ಗೆ ಅಸ್ಪೃಶ್ಯತೆಯನ್ನೇನೂ ಪಾಲಿಸರು. ಅವನು ಬಯಲಾಟದವರನ್ನು ನೋಡಲು ಹೋದಾಗ, ನೋಡುತ್ತಾ ಸುತ್ತಲಿನ ಗುಂಪಿನೊಳಗೆ ನುಗ್ಗಿದಾಗ, ಆ ಗುಂಪಿನಲ್ಲಿರುವವರು ಮೇಲ್ಜಾತಿಯವರೆಂದೂ, ಅಸ್ಪೃಶ್ಯನೊಬ್ಬ ಹೀಗೆ ತಮ್ಮ ಗುಂಪಿನೊಳಗೆ ಬರಬಾರದೆಂದೂ, ಬಂದರೆ ಬೆನ್ನಮೇಲೆ ಬಾಸುಂಡೆ ಏಳುವಂತೆ ಹೊಡೆಯಲಾಗುವುದೆಂದೂ, ಅಟ್ಟಿಸಿಕೊಂಡು ಹೋಗಿ ಅವನ ರಕ್ತವನ್ನ ಚೆಲ್ಲಾಡಬಹುದೆಂದೂ, ಆಗ ಅವನು ಬರಿಮೈಯಲ್ಲಿ ಕತ್ತಲನ್ನೇ ಹೊದ್ದುಕೊಂಡು ಓಡಬೇಕಾಗುತ್ತದೆಂದೂ ಅವನ ಹಣೆಯಲ್ಲಿ, ಅವನ ಬದುಕಿನಲ್ಲಿ ಬರೆದ ಆ ಅರ್ಧ ಮನುಷ್ಯ ಯಾರು? ಆ ಅರ್ಧ ಪ್ರಾಣಿ ಯಾರು? ಆ ಅತಿಭಯಾನಕನಾದ ಅಷ್ಟಾವಕ್ರನ ಹೆಸರೇನಾಗಿರಬಹುದು? ಉತ್ತರ ಸ್ಪಷ್ಟವಾಗಿಯೇ

"ಶಬ್ದದ ಲಜ್ಜೆಯ ನೋಡಾ...."

ಕೆಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಕಸಾಪ. ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದವರು ದೇಜಗೌ. ನಗರದ ಬೀದಿಗಳಲ್ಲಿ ಸಾಗುತ್ತಿದ್ದ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನೋಡಿದ ಮುದುಕಿಯೊಬ್ಬಳು "ಮೆರವಣಿಗೆಯೇನೋ ಚಂದಾಗದೆ; ಮದುವೆ ಗಂಡಿಗೆ ಮಾತ್ರ ವಯಸ್ಸಾದ ಹಾಗೆ ಕಾಣಿಸ್ತದೆ" ಎಂದು ಗೊಣಗಿಕೊಂಡಳಂತೆ. ಇದು ಲಂಕೇಶ್ ಕೊಟ್ಟ ಮಾಹಿತಿ. ಇಂತಹ ಮಾತುಗಳನ್ನು ಅವರಲ್ಲದೆ ಇನ್ನಾರು ಕೇಳಿಸಿಕೊಳ್ಳಲು ಸಾಧ್ಯ? ಮೊನ್ನೆ ಉಡುಪಿಯ ಉರಿಬಿಸಿಲಿನಲ್ಲಿ ಪ್ರಸಕ್ತ ಸಮ್ಮೇಳನಾಧ್ಯಕ್ಷ ಎಲ್.ಎಸ್. ಶೇಷಗಿರಿರಾಯರು ತಲೆಗೆ ಮೈಸೂರು ಪೇಟ, ಮುಖದ ಮೇಲೊಂದು ಮುಗುಳ್ನಗೆ ಧರಿಸಿ, ಕನ್ನಡ ಭುವನೇಶ್ವರಿ (!)ಯನ್ನೂ, ಮಠದ ಆನೆ, ಹುಲಿವೇಶ, ಕೀಲು ಕುದುರೆ ಮುಂತಾದ ತರಹೇವಾರಿ ಭಾಜಾ ಭಜಂತ್ರಿಗಳನ್ನು ಮುಂದಿಟ್ಟುಕೊಂಡು ಮೆರವಣಿಗೆಯಲ್ಲಿ ಸಾಗುತ್ತಿದ್ದುದನ್ನು ನೋಡಿದಾಗ ಲಂಕೇಶ್‌ರ ಲೇವಡಿ ನೆನಪಾಯಿತು.

ಕರಾವಳಿಯಲ್ಲಿ ಈಗ ನಮ್ಮ ಮಾಧ್ಯಮಗಳ ಶ್ಲೇಷೆಯಲ್ಲಿ ಹೇಳುವುದಾದರೆ ಸಾಹಿತ್ಯದ ನಿತ್ಯೋತ್ಸವ. ಮೊದಲು ಮೂಡುಬಿದರೆಯ 'ಆಳ್ವಾಸ್ ನುಡಿಸಿರಿ' ಎಂಬ ಬ್ರಾಂಡಿನ 'ನುಡಿಹಬ್ಬ', ನಂತರ ಧರ್ಮಸ್ಥಳದ ವರ್ಷಾವಧಿ ಲಕ್ಷದೀಪೋತ್ಸವದ ಅಂಗವಾಗಿ ನಡೆಯುವ ಸಾಹಿತ್ಯ ಸಮ್ಮೇಳನ; ಇದೀಗ ಉಡುಪಿಯಲ್ಲಿ ನಡೆದ ಕ.ಸಾ.ಪ.ದ ಸಾಹಿತ್ಯ ಸಮ್ಮೇಳನ. ಈ ಸಮ್ಮೇಳನಗಳಲ್ಲಿ ಜಮೆಯಾದ ಜನಸಂದಣಿಯ ತಲೆ ಲೆಕ್ಕದ ಮೇಲೆ ಹೇಳುವುದಾದರೆ, ಇವೆಲ್ಲವೂ "ಅದ್ಭುತ ಯಶಸ್ಸನ್ನು" ಪಡೆದಿವೆ. ಉಡುಪಿಯ ಸಮ್ಮೇಳನವಂತೂ ಮೆಗಾ ಹಿಟ್! ಆದರೆ ಸಾಹಿತ್ಯದ ಸಂವೇದನೆ ಹಾಗೂ ಸಹೃದಯತೆಗಳನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಈ ಸಮ್ಮೇಳನಗಳ ಸಾಧನೆ ಏನು?


ಪತ್ರಿಕೆ ಮತ್ತು ದೃಶ್ಯಮಾಧ್ಯಮಗಳು ಈ ಸಮ್ಮೇಳನಗಳನ್ನು ಬಿಂಬಿಸುತ್ತಿರುವ ಪರಿ ನೋಡಿದರೆ, ಈ ಪ್ರಶ್ನೆಯೇ ಅಪ್ರಸ್ತುತವೆನ್ನಿಸುತ್ತದೆ. ಸಾಹಿತ್ಯವೆಂದರೆ, ಚಾಕ್ಲೆಟ್, ಸೋಪುಗಳ ಹಾಗೆ ನೀಟಾಗಿ ಪ್ಯಾಕ್ ಮಾಡಿ ಲೇಬಲ್ ಹಚ್ಚಿ ಜಾಹೀರಾತು ಕೊಟ್ಟು, ಗ್ರಾಹಕರಿಗೆ ರವಾನಿಸಬೇಕಾದ ಪದಾರ್ಥ; ಬರೇ ಪದಗಳಲ್ಲ ಎಂಬುದು ಈಗ ಉಡುಪಿ ಮಂಗಳೂರು ಜಿಲ್ಲೆಗಳ ಎಲ್ಲ "ಸುಶಿಕ್ಷಿತರ" ಕಾಮನ್‌ಸೆನ್ಸ್. ಇದಕ್ಕೆ ಅತಿದೊಡ್ಡ ಕೊಡುಗೆ ನೀಡಿರುವುದು ಆಳ್ವಾಸ್ ನುಡಿಸಿರಿ.

ಅದರ ವೇದಿಕೆ ಸಭಾಂಗಣಗಳ ಅಲಂಕಾರ, ಊಟೋಪಚಾರಗಳ ಶುಚಿರುಚಿ, ಕಾರ್ಯಕರ್ತರ ಶಿಸ್ತು, ಕಾರ್ಯಕ್ರಮಗಳ ಕರಾರುವಾಕ್ಕು ಸಮಯಪಾಲನೆಗಳನ್ನು ಪ್ರತಿ ವರ್ಷವೂ ಮಾಧ್ಯಮಗಳು ಹಾಡಿ ಹೊಗಳುತ್ತವೆ. ಇದು ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಈ ಕಾರ್ಯಕ್ರಮಗಳಲ್ಲಿ ಯಾರು ಏನು ಮಾತಾಡಿದರು ಎನ್ನುವುದೇ ಅಮುಖ್ಯವಾಗಿ ಬಿಟ್ಟಿದೆ. ಅದಕ್ಕಿಂತ ದೊಡ್ಡ ದುರಂತವೆಂದರೆ ಆಳ್ವಾಸ್ ನುಡಿಸಿರಿಯ ಸಂಪನ್ಮೂಲ ವ್ಯಕ್ತಿಗಳಾಗಿ ಹೋಗುವ ಕನ್ನಡದ ದೊಡ್ಡದೊಡ್ಡ ಲೇಖಕರಿಗೂ ಈಗ ತಾವು ಎಲ್ಲಿ, ಯಾವ ಸಂದರ್ಭದಲ್ಲಿ ಏನು ಮಾತಾಡುತ್ತೇವೆ ಎಂಬ ಪರಿವೆ ಇಲ್ಲದಿರುವುದು. ಈ ನುಡಿಸಿರಿಯ ಪ್ರಾಯೋಜಕರಾದ ಮೋಹನ ಆಳ್ವ ಕಳೆದ ವರ್ಷ ಮಂಗಳೂರಿನಲ್ಲಿ ಸಂಘಪರಿವಾರ ಏರ್ಪಡಿಸಿದ್ದ ಬೃಹತ್ ಹಿಂದೂ ಸಮಾಜೋತ್ಸವದ ಮುಖ್ಯ ಸಂಚಾಲಕರಲ್ಲಿ ಒಬ್ಬರಾಗಿದ್ದರು. ಗೋಲ್ವಾಲ್‌ಕರ್ ಸಂತತಿಯವರು ನಡೆಸುವ ಕಾರ್ಯಕ್ರಮಗಳ ಮುಂಚೂಣಿಯಲ್ಲಿ ನಿಲ್ಲುವ ವ್ಯಕ್ತಿಯೊಬ್ಬನ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆ ಯಾವ ಬಗೆಯದ್ದಾಗಿರಬಹುದು? ನಮ್ಮ ಸಾಹಿತಿಗಳಿಗೆ ಇಷ್ಟೂ ಅರ್ಥವಾಗುವು ದಿಲ್ಲವೆ?



ಆಳ್ವಾಸ್ ನುಡಿಸಿರಿಯ ಹಾಗೆ ಧರ್ಮಸ್ಥಳ ಸಾಹಿತ್ಯ ಸಮ್ಮೇಳನದ ಆಮಂತ್ರಣವನ್ನು ಕೂಡ ನಮ್ಮ ಹೆಚ್ಚಿನ ಸಾಹಿತಿಗಳು ಯಾವ ಸಂಕೋಚವೂ ಇಲ್ಲದೆ, ಅದಕ್ಕೇ ಕಾದು ಕೂತವರಂತೆ ಸ್ವೀಕರಿಸುತ್ತಾರೆ. ಈ ಸಮ್ಮೇಳನದಲ್ಲಿ ಹಾಗೂ ಹೆಗ್ಗಡೆಯವರ ಸಮ್ಮುಖದಲ್ಲಿ ನಿಂತು ಧರ್ಮಸ್ಥಳ ಪ್ರತಿನಿಧಿಸುವ ಮೌಲ್ಯಗಳನ್ನು ಪ್ರಶ್ನಿಸುವ ಎದೆಗಾರಿಕೆ ಯಾವ ಸಾಹಿತಿಗೆ ಇದೆ? ಅದಕ್ಕಿಂತ ಮೊದಲಿಗೆ ಈ ಮೌಲ್ಯಗಳನ್ನು ಪ್ರಶ್ನಿಸಬೇಕು ಎಂದು ನಮ್ಮ ಸಾಹಿತಿಗಳಿಗೆ ಅನ್ನಿಸುತ್ತದೆಯೇ?

ಆಳ್ವಾಸ್ ಸಂಸ್ಥೆಗಳ ಸ್ಥಾಪಕ ಮೋಹನ್ ಆಳ್ವ ಮತ್ತು ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಇಬ್ಬರೂ ತಮ್ಮ ಅತಿಥಿ ಸತ್ಕಾರ, ಸರಳತೆ ಮತ್ತು ಸೌಜನ್ಯಗಳಿಗೆ ನಾಡಿನಲ್ಲಿ ಹೆಸರು ಮಾಡಿದವರು. ಉಡುಪಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಶೇಷಗಿರಿರಾಯರಂತೂ ಸೌಜನ್ಯವೇ ಮೈ ತಳೆದುನಿಂತ ಹಾಗೆ ಇರುವವರು. ಆದರೆ ಆ ಸೌಜನ್ಯದ ಸಮಸ್ಯೆ ಏನೆಂದರೆ ಶೇಷಗಿರಿರಾಯರು ಒಳ್ಳೆಯವರ ಬಗ್ಗೆ ಒಳ್ಳೆಯ ಮಾತುಗಳನ್ನು ಆಡುತ್ತಾರೆ; ಕೆಟ್ಟವರ ಬಗ್ಗೆಯೂ ಒಳ್ಳೆಯ ಮಾತುಗಳನ್ನೇ ಆಡುತ್ತಾರೆ. ಇದಕ್ಕಾಗಿ ಅವರನ್ನು ದೂರಿ ಪ್ರಯೋಜನವಿಲ್ಲ, ಯಾಕೆಂದರೆ ಇಂತಹ ವರ್ತನೆಯನ್ನು 'ಗೋಸುಂಬೆತನ' ಎಂದು ಕರೆಯುವ ಕಾಲ ಯಾವತ್ತೋ ಮುಗಿದು ಹೋಗಿದೆ. ಈಗ ಸೌಜನ್ಯವೆಂದರೆ ಅಪ್ರಿಯವಾದ ಸತ್ಯ ಗೊತ್ತಿದ್ದರೂ ಬಾಯಿ ಮುಚ್ಚಿಕೊಂಡಿರುವುದು ಅಥವಾ ಸತ್ಯವನ್ನು ತಿಳಿದುಕೊಳ್ಳುವ ತೊಂದರೆಯನ್ನೇ ತೆಗೆದುಕೊಳ್ಳದೆ ಇರುವುದು. ನಮ್ಮ ಬುದ್ಧಿಜೀವಿಗಳ ಸೌಜನ್ಯವೂ ಇದೇ



ಜಿ. ಕಲ್ಯಾಣರಾವ್‌ರವರ ಅಸ್ಪೃಶ್ಯ ವಸಂತ 4

ಅನುವಾದ: ಪ್ರೊ. ನಗರಗೆರೆ ರಮೇಶ್

ಇದೆ. ಬರಹದ ರೂಪದಲ್ಲಿಯೇ ಇದೆ. ಅವನ ಹೆಸರಿಗೆ ಸ್ಮೃತಿ ಅನ್ನೋದು ಜೋಡಿಸಲಾಗಿರುತ್ತೆ.

ಆ ಅರ್ಥ ವ್ಯಾಸ ಮನು. ಅಷ್ಟಾವಕ್ರ ಮನು. ಅವನು ಧರ್ಮಗಳನ್ನ ಬೋಧಿಸಿದ. ವಿಶೇಷವಾದ ಧರ್ಮಗಳನ್ನ, ವರ್ಣಾಶ್ರಮಧರ್ಮಗಳನ್ನ ಬೋಧಿಸಿದ. ಅವನು ಒಬ್ಬನು ಅಲ್ಲ ಹತ್ತು ಜನರು ಅಂತ ಏನೇನೋ ಕತೆಗಳು, ಪುರಾಣಗಳು. ಅವನಿಂದ ಹುಟ್ಟಿದವರು ಮಾನವರು ಅನ್ನುತ್ತಾರೆ. ಅದೇ ನಿಜವಾದರೆ ಅವರು ಎಲ್ಲಣ್ಣನನ್ನೂ ಸಹ ಮಾನವನನ್ನಾಗಿ ಏಕೆ ನೋಡದೇ ಹೋದರು?

ಅವನು ಹೇಳಿದ. ಈ ಮನು ಅನ್ನುವವನು ಹೇಳಿದ. ಮತ್ತು ಅವನ ಧರ್ಮವು ಹೇಳಿತು-ಬ್ರಾಹ್ಮಣನನ್ನ ಕೊಂದವನು ಚಂಡಾಲನಾಗಿ ಹುಟ್ತಾನೆ ಅಂತ. ಅದೇ ನಿಜವಾಗಿದ್ದರೆ ಅದೆಷ್ಟು ಜನ ಬ್ರಾಹ್ಮಣರನ್ನ ಕೊಂದಿದ್ದಕ್ಕೆ ಎನ್ನಲದಿನ್ನೆಯಲ್ಲಿ ಇಷ್ಟೊಂದು ಹೊಲೆ ಮಾದಿಗರು ಹುಟ್ಟಿರಬೇಕು? ಹಾಗಿದ್ದಲ್ಲಿ ಎಲ್ಲಣ್ಣನ ಕೈಲಿ ಸತ್ತ ಬ್ರಾಹ್ಮಣನ ಹೆಸರೇನೆಂದು ಮನು ಹೇಳಲೇ ಬೇಕು. ಅವನು ಹೇಳದಿದ್ದರೆ ಅವನ ಧರ್ಮವನ್ನ ಕಾಪಾಡುತ್ತಲೇ ಇರುವ ಅವನ ಜಾತಿಗಳು, ಮೇಲ್ಜಾತಿಗಳು ಹೇಳಲೇಬೇಕು.

ಸಿಟ್ಟು, ಕ್ರೋಧ, ಕಣ್ಣೀರು. ರೂಥಳ ಎದೆ ತುಂಬಾ, ರೂಥಳ ಆಲೋಚನೆಯ ತುಂಬಾ...ಇಷ್ಟು ವರ್ಷಗಳ ನಂತರ...ಇಷ್ಟು ಯುಗಗಳ ನಂತರ.. ಇಷ್ಟೊಂದು ವಿಷಾದದ ಕೋಡಿ ಹರಿದು ಸುತ್ತು ಸುಳಿಗಟ್ಟುತ್ತಿರುವಾಗ...

ಎಲ್ಲಣ್ಣನನ್ನು ನೆನಸಿಕೊಂಡಾಗ, ಭೂದೇವಿಯನ್ನು ನೆನಸಿಕೊಂಡಾಗ, ಎನ್ನಲದಿನ್ನೆಯನ್ನು ನೆನಸಿಕೊಂಡಾಗ, ಅಲ್ಲಿನ ಜನರ ಬಹಿಷ್ಕೃತ ಬದುಕನ್ನು ನೆನಸಿಕೊಂಡಾಗ ಮತ್ತು ಅಂಥ ಸಂದರ್ಭಗಳು ನೆನಪಿಗೆ ಬಂದಾಗ ರೂಥ್ ಅಗ್ನಿಪರ್ವತವೇ ಆಗುತ್ತಾಳೆ. ಅವಳ ಜ್ಞಾಪಕದ ಗುಡಾರದಲ್ಲಿ ಹಬೆಯೇರಿ ಉಸಿರುಗಟ್ಟುತ್ತೆ, ಕ್ರಮೇಣ ಜ್ಞಾಪಕಗಳೆಲ್ಲಾ ಕರಗುತ್ತಾ ಆಕ್ರೋಶದ ಲಾವಾರಸ ಹರಿದು ಹೋದಂತೆನಿಸುತ್ತದೆ. ಭಾವೋದ್ರೇಕದಲ್ಲಿ ನೆನಪುಗಳು ಲಯ ತಪ್ಪುತ್ತವೆ. ಆ ಲಯವನ್ನು ಪಡೆದುಕೊಳ್ಳಲು ಮತ್ತೆ ಹುಡುಕಾಟ. ಮತ್ತೊಂದು ಚಿತ್ರ ಎದುರಾಗುತ್ತದೆ. ಕಾರ್ಗತ್ತಲಿನಲ್ಲಿ ಒಬ್ಬಂಟಿಯಾಗಿ ಆಕಾಶದ ಕಡೆ ಅಸಹಾಯಕನಾಗಿ ಮಲಗಿರುವ ಎಲ್ಲಣ್ಣನನ್ನು ಚಿತ್ರಿಸಿಕೊಳ್ಳಲು ಹರಸಾಹಸ ಪಡಬೇಕಾಗುತ್ತದೆ...

ಮೊದಮೊದಲು ಎಲ್ಲಣ್ಣ ಹಾದಿನ ಭಯವಿಲ್ಲದಂತೆ ನಕ್ಷತ್ರಗಳನ್ನು ನೋಡುತ್ತಾ ಮೈಮರೆತು ಮಲಗಿದ್ದ. ಆ ನಂತರ ಹಸಿವು ಜ್ಞಾಪಕಕ್ಕೆ ಬಂದಿತು. ಹಸಿವಿನ ಜತೆಜತೆಗೆ ಅತ್ತೆಯೂ ನೆನಪಿಗೆ ಬಂದಳು. ತೂಗುಹಾಕಿರುವ ಮಡಿಕೆಯಲ್ಲಿ ಒಣಮೀನು ಬೇಯಿಸಿಟ್ಟಿದೆ. ನಂಚಿಕೊಂಡು ತಿನ್ನು ಅಂತ ಹೇಳಿದ್ದಳು. ಗುಡಿಸಲಿಗೆ ತಡಿಕೆ ಮುಚ್ಚಿ ಚಪ್ಪರದ ಮೇಲೆ ಮಲಕ್ಕೋ ಅಂತ ಹೇಳಿದ್ದಳು. ತಾನು ಹಿಂದಿರುಗಿ ಬರೋವರೆಗೂ ಎಲ್ಲೂ ಹೋಗದಂತೆ ತಾಕೀತು ಮಾಡಿದ್ದಳು. ಆದರೆ ತಾನು ಅತ್ತೆಯ ಮಾತು ಕೇಳಲಿಲ್ಲ, ಅವಳ ಜತೆ ಎಣ್ಣೆ ಬೀಜ ಆರಿಸಲು ಹೋಗಿದ್ದರೆ ಚೆನ್ನಾಗಿತ್ತೇನೋ? ಹೀಗಾಗುತ್ತೆ ಅಂದುಕೊಂಡಿರಲಿಲ್ಲ. ಅಲ್ಲಿಗೆ ಹೋಗುವುದು ಅಂಥ ದೊಡ್ಡ ಅಪರಾಧವಾಗುತ್ತದೆ ಎಂದುಕೊಂಡಿರಲಿಲ್ಲ. ಅತ್ತೆ ಏಕೆ ಬೇಡ ಅಂಥ ಹೇಳಿದ್ದಳು ಎಂಬುದು ಈಗ ಅರ್ಥವಾಗುತ್ತಿದೆ. ಆದರೆ ಯಾಕೆ ಹೋಗಬಾರದು? ಎಳೆ ಮನಸ್ಸನ್ನು ಅಲ್ಲೋಲಕಲ್ಲೋಲ ಮಾಡಿದ ಪ್ರಶ್ನೆಯದು.

ಇಷ್ಟು ಹೊತ್ತಿಗೆ ಅತ್ತೆ ಹಿಂದಿರುಗಿರ್ತಾಳೆ. ತನಗಾಗಿ ಹುಡುಕ್ತಿರ್ತಾಳೆ. ಪಾಪ ಹುಡುಕಿ ಹುಡುಕಿ ಅಳ್ತಿರ್ತಾಳೆ. ತಕ್ಷಣವೇ ಹಿಂದಿರುಗಿ ಓಡಬೇಕು ಅಂದುಕೊಂಡ. ಅತ್ತೆಗಾಗಿಯಾದರೂ ಹೋಗಲೇ ಬೇಕು ಎಂದುಕೊಂಡ. ಮಲಗೋ ಮುಂಚೆ ಅತ್ತೆ ಹಾಡನ್ನು ಮಾತ್ರವಲ್ಲ ಕಥೆ ಕೂಡಾ ಹೇಳ್ತಿದ್ದಳು. ಹಿಂದಿನ ರಾತ್ರಿಯೂ ಅಷ್ಟೆ. ಅವಳು ಕಥೆ ಹೇಳ್ತಿದ್ದರೆ, 'ನನಗೆ ನಿದ್ದೆ ಬರುತ್ತೆ ಅತ್ತೇ' ಅಂತ ಹೇಳಿ ಹಾಗೆ ನಿದ್ದೆಯೊಳಕ್ಕೆ ಜಾರಿಹೋಗಿದ್ದ. ಆದರೂ ಅತ್ತೆ ಕಥೆ ಮುಂದುವರಿಸಿದ್ದಳು. 'ಜ್ಞಾಪಕ ಇಟ್ಕೊಳ್ಳೋ ಎಲ್ಲಣ್ಣ, ರಾಜಕುಮಾರ ಅಡುಗೂಲಜ್ಜಿ ಮನೆ ಮುಂದಕ್ಕೆ ಬಂದಾನೆ, ಮತ್ತೆ ನಾಳೆ ಮೊದಲಿಂದ ಅಂತ ಕೇಳಿದರೆ ನನ್ನಿಂದಾಗೋದಿಲ್ಲ' ಅಂತ ಹೇಳಿದ ಹಾಗೂ ನೆನಪು.

ಅಡುಗೂಲಜ್ಜಿ ಹೇಗಿರ್ತಾಳೆ ಅಂತ ಕೇಳಿಕೊಂಡಿದ್ದರೆ ಚೆನ್ನಾಗಿತ್ತು, ಅವಳು ಒಳ್ಳೆಯವಳಾಗಿ ಇರಬಹುದು. ಅತ್ತೆ ಥರ; ಅತ್ತೆ ಥರಾನೇ ಒಳ್ಳೆಯವಳೂ ಆಗಿರ್ತಾಳೆ. ಹಾಡ್ತಾಳೆ ಕಥೆ ಹೇಳ್ತಾಳೆ. ಆ ರಾಜಕುಮಾರನಿಗೆ ಎಷ್ಟು ಕಥೆಗಳು ಹೇಳಿದ್ದಾಳೋ!

ಅಳು ಉಕ್ಕಿಬಂತು; ಹಸಿವು... ಅತ್ತೆ... ಹಿಂದಕ್ಕೆ ಹಳ್ಳಿಗೆ ಹೋಗಬೇಕು ಅಂತ ಮತ್ತೊಮ್ಮೆ ಅನ್ನಿಸಿತು ಎಲ್ಲಣ್ಣನಿಗೆ. ಆದರೆ ತಾನೀಗ ಇರೋದೆಲ್ಲಿ? ಎನ್ನಲದಿನ್ನೆಯಿಂದ ಎಷ್ಟು ದೂರ? ಕತ್ತಲು... ಯಾವ ದಾರಿ ಎಲ್ಲಿಗೆ ಹೋಗುತ್ತೋ ತಿಳಿಯದು.

ಬಳಲಿದ ನೋಟದಿಂದ ದೂರವನ್ನು ಅಳೆದ. ಕತ್ತಲನ್ನ ಕೆದಕಿ ಕೆದಕಿ ಅರಸುತ್ತಿದ್ದಾನೆ. ನೋಡಿ ನೋಡಿ ಕಣ್ಣು ನೋವು ಬಂತು. ಏನು ಮಾಡಿದರೂ ಇವತ್ತು ರಾತ್ರಿ ಇಲ್ಲಿಂದ ಹೊರಡೋಕೆ ಆಗೋದಿಲ್ಲ. ಇಲ್ಲೇ ಇದ್ದು ನಾಳೆ ಬೆಳಗ್ಗೆ ಹೋಗೋಣ ಅಂದುಕೊಂಡ. ಇನ್ನೆಂದೂ ಹೇಳದೆಕೇಳದೆ ಹಾಗೆಲ್ಲಾ ಹೋಗೋದಿಲ್ಲ ಅಂತ ಅತ್ತೆಗೆ ಹೇಳಬೇಕೆಂದುಕೊಂಡ.

ತನ್ನ ಸುತ್ತಲೂ ಬೀಸುತ್ತಿರೋದೇನು? ಅದು ಕತ್ತಲೋ! ಗಾಳಿಯೋ! ಏನೂ ತಿಳಿಯುತ್ತಿಲ್ಲ, ದೂರದಿಂದ ದಣಿವಾರಿಸೋ ತಂಗಾಳಿ ಬಂದು ತಾಕ್ತಿತ್ತು. ಗಾಳಿ ಆ ಸುಖವನ್ನೇ ಅಲ್ಲ ಲಯಬದ್ಧವಾದ ಶಬ್ದವನ್ನೂ ಹೊತ್ತುಕೊಂಡು ಬರ್ತಿತ್ತು. ಆ ಶಬ್ದ ಬಂದ ದಿಕ್ಕಿನೆಡೆ ನೋಡಿದ. ದೂರದಲ್ಲಿ ಬೆಳಕು; ಎತ್ತರದಲ್ಲಿ ಮರಳ ದಿಬ್ಬದ ಮೇಲೆ, ತಾಳೆಮರಗಳ ನಡುವಿನಿಂದ ದುರ್ಬಲವಾಗಿ ಇಣುಕಿಣುಕಿ ನೋಡ್ತಿದ್ದ ಬೆಳಕದು. ಅಲ್ಲಿ ಯಾವುದೋ ಹಳ್ಳಿ ಇರಬೇಕು. ಅದರ ಹೆಸರು ಅವನಿಗೆ ತಿಳಿಯದು. ಅದು ಪಕ್ಕೆಲದಿನ್ನೆಯೆಂದೂ, ಅಲ್ಲಿ ಗಂಗಮ್ಮನ ಜಾತ್ರೆ ನಡೆಯುತ್ತಿದೆಯೆಂದೂ ಎಲ್ಲಣ್ಣನಿಗೆ ಗೊತ್ತಿರಲಿಲ್ಲ.

ಎಲ್ಲಣ್ಣನಿಗೆ ರಾತ್ರಿಯ ಹೊತ್ತು ಗೊತ್ತಿದ್ದದ್ದೆಲ್ಲಾ ಮನೆಯ ಚಿಮಣಿಯ ಬೆಳಕು, ಆಕಾಶದಲ್ಲಿ ಚುಕ್ಕಿಗಳ ಬೆಳಕು, ಬೆಳದಿಂಗಳಲ್ಲಿ ಚಂದಮಾಮನ ಓಟ. ಇಷ್ಟೆ. ವಿಶಾಲವಾದ ಮರುಭೂಮಿಯಲ್ಲಿನ ಈ ರಾತ್ರಿಯ ಒಬ್ಬಂಟಿತನ ಅವನಿಗೆಂದೂ ಗೊತ್ತಿರಲಿಲ್ಲ, ಎಲ್ಲಾ ಹೊಸತು. ಮೇಲೆದ್ದ, ಮತ್ತೆ ನಡಿಗೆ.

(ಮುಂದುವರೆಯುವುದು)

ಒಪ್ಪಲಾಗದ ಗಾಂಧಿ ನಿಲುವು

(3ನೇ ಪುಟದಿಂದ)

ಜೀವನೋಪಾಯವನ್ನು ಕಂಡುಕೊಳ್ಳುತ್ತಾನಲ್ಲದೆ, ತನ್ನ ಕಸುಬನ್ನು ಒಂದು ಪವಿತ್ರ ಕಾರ್ಯ ಎಂಬಂತೆ ಪರಿಗಣಿಸುತ್ತಾನೆ. ಬೇರೆ ಪದಗಳಲ್ಲಿ ಹೇಳುವುದಾದರೆ ಈ ವೃತ್ತಿಯಿಂದ ಆತ ಅಪಾರ ಆಸ್ತಿ ಗಳಿಸುವ ಕನಸನ್ನು ಹೊಂದಿರುವುದಿಲ್ಲ, ಅಷ್ಟೇ ಅಲ್ಲ, ತನ್ನ ಸುತ್ತಮುತ್ತಲಿನ ಪ್ರದೇಶದಿಂದ ಮಲವನ್ನು ತೆಗೆಯುವುದು ತನ್ನ ಜವಾಬ್ದಾರಿ ಎಂದು ಭಾವಿಸುತ್ತಾನಲ್ಲದೆ, ಹಾಗೆ ಮಾಡುವ ಮೂಲಕ ಜನರ ಆರೋಗ್ಯವನ್ನು ಕಾಪಾಡುವುದೇ ತನಗೆ ಸಲ್ಲುವ ಮೋಕ್ಷ ಎಂದೇ ನಂಬಿರುತ್ತಾನೆ."

ಹೀಗೆ ಸಫಾಯಿ ಕರ್ಮಚಾರಿಗಳ ಮೇಲೆ ಅಪಾರ ಸಾಮಾಜಿಕ ಮತ್ತು ವೈಜ್ಞಾನಿಕ ಹೊರೆಯನ್ನು ವಿಧಿಸುವ ಗಾಂಧಿ ಅವರಿಗೆ ಸಾಕಷ್ಟು ಸಂಬಳ ನೀಡುವುದನ್ನೂ ವಿರೋಧಿಸುತ್ತಾರೆ. ಹಾಗೆಯೇ ಯಾವುದೇ ಕಾರಣಕ್ಕೂ ಅವರು ತಮ್ಮ ಕೆಲಸದಿಂದ ಗೈರುಹಾಜರಾಗಬಾರದೆಂದು ವಾದಿಸುತ್ತಾರೆ. 1946ರಲ್ಲಿ ಗಾಂಧಿ ಹೀಗೆ ಹೇಳಿದ್ದರು: "ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಮುಷ್ಕರ ಹೂಡುವುದು ಸರಿಯಲ್ಲ, ಜಾಡಮಾಲಿಗಳು ಈ ಪಟ್ಟಿಗೆ ಸೇರುತ್ತಾರೆ. ಭಂಗಿಯು ಒಂದೇ ಒಂದು ದಿನವೂ ತನ್ನ ಕೆಲಸವನ್ನು ಮಾಡದೇ ಇರಕೂಡದು. ಅವರಿಗೆ ಸಾಮಾಜಿಕ ನ್ಯಾಯ ಒದಗಿಸಲು ಬೇರೆ ಮಾರ್ಗಗಳಿವೆ."


ಸಫಾಯಿ ಕರ್ಮಚಾರಿಗಳ ಬಗೆಗಿನ ಗಾಂಧಿಯವರ ನಿಲುವನ್ನು ಅಂಬೇಡ್ಕರ್ ತೀವ್ರವಾಗಿ ವಿರೋಧಿಸಿದ್ದರು. "ಹಿಂದೂ ಧರ್ಮದಲ್ಲಿ ಜಾಡಮಾಲಿ ಕೆಲಸ ಒಂದು ಆಯ್ಕೆಯಲ್ಲ, ಬದಲಾಗಿ ಬಲಾತ್ಕಾರ. ಗಾಂಧಿ ತತ್ವ ಏನನ್ನು ಮಾಡುತ್ತದೆ? ಸಮಾಜ ಸೇವೆಯಲ್ಲಿ ಜಾಡ ಮಾಲಿ ಕೆಲಸ ಅತಿ ಶ್ರೇಷ್ಠವಾದದ್ದು ಎಂದು ಹೊಗಳುತ್ತಾ ಅದೇ ವ್ಯವಸ್ಥೆಯನ್ನು ಮುಂದುವರೆಸುವ ಹುನ್ನಾರ ಅದು! ಬ್ರಾಹ್ಮಣನೂ ಕೂಡ ಜಾಡಮಾಲಿ ಕೆಲಸವನ್ನು ಮಾಡಲು ಸಿದ್ಧನಿದ್ದಾನೆಂದು ಭಂಗಿಗಳಿಗೆ ಹೇಳುವುದರಿಂದ ಏನನ್ನು ಸಾಧಿಸಿದಂತಾಗುತ್ತದೆ? ಹಿಂದೂ ಶಾಸ್ತ್ರಗಳ ಮತ್ತು ಹಿಂದೂ ಕಲ್ಪನೆ ಪ್ರಕಾರ ಆಕಸ್ಮಾತ್ ಬ್ರಾಹ್ಮಣನೊಬ್ಬ ಜಾಡಮಾಲಿ ಕೆಲಸವನ್ನು ಮಾಡಿದರೂ ಹುಟ್ಟಿನಿಂದಲೇ ಜಾಡಮಾಲಿಯಾಗಿರುವವರನ್ನು ನೋಡುವಂತೆ ಆತನನ್ನು ನೋಡುವುದಿಲ್ಲ, ಏಕೆಂದರೆ ಭಾರತದಲ್ಲಿ ತನ್ನ ಕಸುಬಿನಿಂದಲೇ ಓರ್ವ ಜಾಡಮಾಲಿ ಆಗಿರುವುದಿಲ್ಲ. ಬದಲಾಗಿ ಆತ ಜಾಡಮಾಲಿ ಕೆಲಸ ಮಾಡದಿದ್ದರೂ ಆ ಜಾತಿಯಲ್ಲಿ ಹುಟ್ಟುವುದರಿಂದಲೇ ಆತ ಜಾಡಮಾಲಿ ಆಗಿರುತ್ತಾನೆ" ಎಂದಿದ್ದರು ಅಂಬೇಡ್ಕರ್.

ಆದರೆ ಗಾಂಧಿಗೆ ಈ ವಾದ ಬೇಕಿರಲಿಲ್ಲ. ನಿಜ, ಗಾಂಧಿ ಅವರು ಬದುಕಿದ್ದಾಗ ಸಂದರ್ಭ ಇಂದಿಗಿಂತಲೂ ಬೇರೆಯಾಗಿತ್ತು. ಹಾಗೆಯೇ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು ಸುಮಾರು 80 ವರ್ಷಗಳ ಹಿಂದೆ. ಆದರೂ ಇದನ್ನೆಲ್ಲ ಓದಿದ ಮೇಲೆ ಗಾಂಧಿಯವರ ಬಗ್ಗೆ ಪಿಚ್ ಅನ್ನಿಸಿತು. ಮಾನವತಾವಾದವನ್ನೇ ಸಂಪೂರ್ಣವಾಗಿ ಮೈಗೂಡಿಸಿಕೊಂಡಿದ್ದ ಗಾಂಧಿಗೆ ಜಾಡಮಾಲಿಗಳ ಬದುಕಿನ, ವೃತ್ತಿಯ ದುರಂತ ಅರ್ಥವಾಗದೇ ಇದ್ದದ್ದು ಹೇಗೆ ಎಂದು ಬೇಸರವಾಯಿತು.

ಅಂದಹಾಗೆ ಎಸ್. ಆನಂದ್‌ರವರ ಅದೇ ಲೇಖನದಲ್ಲಿ ಜಾಡಮಾಲಿಗಳನ್ನು ಕುರಿತಂತೆ ಒಂದು ಪ್ರಸಂಗ ಇದೆ. ಅದು ಭಾರತ ವಿಭಜನೆಯಾದಾಗ ನಡೆದದ್ದು. ಆ ಸಂದರ್ಭದಲ್ಲಿ ಭಾರತದಿಂದ ಮುಸಲ್ಮಾನರು, ಪಾಕಿಸ್ತಾನದಿಂದ ಹಿಂದೂಗಳು ಲಕ್ಷಾಂತರ ಸಂಖ್ಯೆಯಲ್ಲಿ ವಲಸೆ ಹೋದದ್ದು ಬಂದದ್ದು ಆ ಪ್ರಕ್ರಿಯೆಯಲ್ಲೇ ಲಕ್ಷಾಂತರ ಜನ ಸಾವಿಗೀಡಾಗಿದ್ದು ಕೊಲೆಯಾಗಿದ್ದು ನಿರಾಶ್ರಿತರಾದದ್ದು ಎಲ್ಲರಿಗೂ ಗೊತ್ತಿದೆ. ಆದರೆ ಜಾಡಮಾಲಿಗಳೇನಾದರು?

ಅಂಬೇಡ್ಕರ್ ಸರಿಯಾಗಿಯೇ ಹೇಳಿರುವಂತೆ ಆ ವೃತ್ತಿಯಲ್ಲಿ ತೊಡಗದಿದ್ದರೂ ಹುಟ್ಟಿನಿಂದಲೇ ಜಾಡಮಾಲಿ ಆಗುವುದರಿಂದ, ಅವಿಭಜಿತ ಭಾರತದಾದ್ಯಂತ ಈ ಕಸುಬನ್ನು ಮಾಡುತ್ತಿದ್ದವರು ಹಿಂದೂಗಳೇ ಹೊರತು ಮುಸಲ್ಮಾನರಲ್ಲ. ಹಾಗೆಯೇ ಗಾಂಧಿಯವರು ಹೇಳಿದ್ದಂತೆ ನಮ್ಮ ಗ್ರಾಮ ಮತ್ತು ನಗರಗಳ ಸ್ವಚ್ಛತೆಯನ್ನು ಕಾಪಾಡಲು ಎರಡೂ ದೇಶಗಳಿಗೆ ಇವರ ಅವಶ್ಯಕತೆ ಇತ್ತು. ಈ ಕಾರಣಗಳಿಂದಾಗಿಯೇ ಬೇರೆ ಹಿಂದೂಗಳನ್ನು ಭಾರತಕ್ಕೆ ವಲಸೆ ಹೋಗಲು ಬಿಟ್ಟ ಪಾಕಿಸ್ತಾನ ಸಫಾಯಿ ಕರ್ಮಚಾರಿಗಳನ್ನು 'ಅಗತ್ಯ ಸೌಲಭ್ಯ'ಗಳ ಪಟ್ಟಿಯಲ್ಲಿ ಸೇರಿಸಿತು. ಅಷ್ಟೇ ಅಲ್ಲ, ಅವರು ಭಾರತಕ್ಕೆ ವಲಸೆ ಹೋಗಬೇಕೆಂದು ಇಚ್ಛಿಸಿದರೆ ಒಂದು ತಿಂಗಳ ನೋಟೀಸ್ ಅನ್ನು ಮುಂಚಿತವಾಗಿಯೇ ಕೊಡಬೇಕೆಂಬ ಶರತ್ತನ್ನು ವಿಧಿಸಿತು. ಹಾಗೆ ವಲಸೆ ಬಂದ 'ಹಿಂದೂ' ಸಫಾಯಿ ಕರ್ಮಚಾರಿಗಳಿಗೆ [illegible]

[illegible]



ವಿಶೇಷ ಲೇಖನ

■ ಜಿ. ರಾಜಶೇಖರ

ಬಗೆಯದ್ದು; ಸುಣ್ಣಗಿನ ತಣ್ಣಗಿನ ಮಾತುಗಳಲ್ಲಿ ತಲೆ ಸವರುವುದು-ಥೇಟು ಶೇಷಗಿರಿರಾಯರ ಹಾಗೆ. ಇವರ ಮಾತುಗಳನ್ನು ಕೇಳುತ್ತ ಕೂತರೆ ಮನಸ್ಸು ತನ್ನ ಮೊನಚು, ವ್ಯಗ್ರತೆಗಳನ್ನೆಲ್ಲ ಕಳೆದುಕೊಂಡು ನೀರಿಗೆ ಹಾಕಿದ ಅವಲಕ್ಕಿಯ ಹಾಗೆ ಆಗಿಬಿಡುತ್ತದೆ. ಈ ಸ್ಥಿತಿಯಲ್ಲಿ "ನೋಡಿ ರಕ್ತವಿದೆ ಬೀದಿಗಳಲ್ಲಿ; ಬೀದಿಗಳಲ್ಲಿ ರಕ್ತವಿದೆ" (ಪ್ಯಾಬ್ಲೊ ನೆರುಡಾ) ಎಂಬ ಕವಿಯ ಆಕ್ರಂದನ ಕರ್ಕಶವಾಗಿ ಕೇಳಿಸುತ್ತದೆ.

ಸೌಜನ್ಯದ ಹಾಗೆ ರಸಿಕತೆ ಬಗ್ಗೆ ಕೂಡ ಕನ್ನಡದಲ್ಲಿ ಹಾಸ್ಯಾಸ್ಪದವಾದ ಕಲ್ಪನೆಗಳು ಚಾಲ್ತಿಯಲ್ಲಿವೆ. ಒಳ್ಳೆಯ ಸಾಹಿತ್ಯವನ್ನು ಕಲ್ಲು ಸಕ್ಕರೆ ಗೋಡಂಬಿ, ಬೀರು ಇತ್ಯಾದಿಗಳ ಜೊತೆ ಹೋಲಿಸುವುದು ನಮ್ಮ ಹಲವು ವಿಮರ್ಶಕರಿಗೆ ಪ್ರಿಯವಾಗಿದ್ದಿತು. ಸುಮತೀಂದ್ರ ನಾಡಿಗರಿಗೆ 'ಆವರಣ' ಕಾದಂಬರಿ ಕೂಡ ಸಕ್ಕರೆ ಬಾದಾಮಿಗಳನ್ನು ನೆನಪಿಸಿದೆ! (ವಿಜಯ ಕರ್ನಾಟಕ 18.2.07 ಪುಟ 3). ಅದರಲ್ಲಿ ಯಾವ ಬಗೆಯ ರಾಕ್ಷಸ ಹಸಿವು ಇದ್ದೀತು! ಸಾಹಿತ್ಯವು ರಸಿಕರ ಆಸ್ವಾದನೆಗೆಂದು ಇದೆ ಎಂಬ ಗ್ರಹಿಕೆಗೂ, ಸಾಹಿತ್ಯ ಸಮ್ಮೇಳನಗಳು ಭೋಜನಕೂಟಗಳಾಗಿ ಮಾರ್ಪಾಡು ಹೊಂದುವುದಕ್ಕೂ "ಅಂತರ ಸಂಬಂಧ"ವಿದೆಯೆ? ಭೋಜನವೇ ಕನ್ನಡ ಸಾಹಿತ್ಯದ ಬಹುಮುಖ್ಯ 'ಹಬ್ಬ' ವೆಂದು ಪರಿಗಣಿಸಬಹುದೆ? ಕನ್ನಡ ವಿಮರ್ಶೆಯ ಈ ರೂಪಕಗಳನ್ನು ಇಲ್ಲಿ ಉದ್ದೇಶಪೂರ್ವಕವಾಗಿ ಬಳಸಲಾಗಿದ್ದರೂ, ಅವು ಕನ್ನಡ ಸಾಹಿತ್ಯದ ರಸಿಕರನ್ನು ಯಥಾವತ್ತಾಗಿಯೇ ಚಿತ್ರಿಸುತ್ತವೆ. ಈ ರಸಿಕರಿಗೆ ಸಾಹಿತ್ಯ ಮನಸ್ಸಿನ ಭೋಜನ, ಸಂಗೀತ, ಚಿತ್ರ, ನಾಟಕಗಳೂ ಭೋಜನಗಳೇ-ಅವರ ಇಂದ್ರಿಯಗಳಿಗೆ! [illegible] ಅರಗಿಸಿಕೊಳ್ಳುವ, ಅನುಸಂಧಾನ [illegible]

ಈ ರಸಿಕನಿಗೆ ಇಲ್ಲ, ಮೂಲತಃ ಕಸಾಪದ ಸಮ್ಮೇಳನಗಳು ಇಂತಹ ರಸಿಕರಿಗಾಗಿ ನಡೆಯುವ ಕಲಾಪಗಳು. ಆಳ್ವಾಸ್ ನುಡಿಸಿರಿ ಮಾತ್ರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಾಹಿತ್ಯ ಸಮ್ಮೇಳನಗಳನ್ನು ಉಪಭೋಗದ ಸರಕು ಸಂಸ್ಕೃತಿಯನ್ನಾಗಿಸಿ ಮಾರ್ಪಡಿಸಿದೆ. ನಮ್ಮ ದೊಡ್ಡ ವಾಣಿಜ್ಯ ಸಂಸ್ಥೆ, ಹೋಟೆಲು ಇತ್ಯಾದಿಗಳ ಹಾಗೆ ಸಾಹಿತ್ಯವೂ ಈಗ 'ಕಸ್ಟಮರ್ ಫ್ರೆಂಡ್ಲಿ'ಯಾಗಿ ಮಾರ್ಪಟ್ಟಿದೆ. ಓದುಗ ಪ್ರೇಕ್ಷಕನೂ ಕೇಳುಗನೂ ಆಗಿ ಮಾರ್ಪಟ್ಟಿದ್ದಾನೆ. ಹಾಗಾಗಿ ವೇದಿಕೆಯ ಮೇಲೆ ನಡೆಯುವ ಕಲಾಪಗಳ ಹೂರಣದಷ್ಟೇ ವೇದಿಕೆಯ ಅಲಂಕಾರವೂ ಮುಖ್ಯವಾಗಿದೆ; ಕವಿಗೋಷ್ಠಿಯ ಜೊತೆಗೆ ಸುಗಮ ಸಂಗೀತದ ಕಾರ್ಯಕ್ರಮವೂ ನಡೆಯುತ್ತದೆ. ಈಗೀಗ ಹನಿಗವನ, ಮಿನಿಕವನಗೋಷ್ಠಿಗಳೂ ಶುರುವಾಗಿವೆ. ಜನ ಏನನ್ನು ಓದಬಯಸುತ್ತಾರೋ ಅದನ್ನೇ ಬರೆಯುವುದು, ಏನನ್ನು ಕೇಳಬಯಸುತ್ತಾರೋ ಅದನ್ನೇ ಹಾಡುವುದು ಮತ್ತು ಏನನ್ನು ನೋಡ ಬಯಸುತ್ತಾರೋ ಅದನ್ನೇ ಚಿತ್ರಿಸುವುದು ಸಂಸ್ಕೃತಿಯ ಪ್ರಧಾನ ಉದ್ದೇಶವೆಂಬ ಗ್ರಹಿಕೆಯೇ ಈ ಸಮ್ಮೇಳನಗಳ ಹಿಂದೆ ಇರುವ ಚಾಲಕಶಕ್ತಿಯಾಗಿದೆ

ಸಂಸ್ಕೃತಿಯ ಈ 'ಮಾರ್ಕೆಟ್ ಫ್ರೆಂಡ್ಲಿ' ವ್ಯಾಖ್ಯೆ ಓದುಗನಿಗೆ ಹೊಸ ಪಾತ್ರಗಳನ್ನು ಕಲ್ಪಿಸುವುದರ ಜೊತೆ, ಲೇಖಕ ಮತ್ತು ವಿಮರ್ಶಕ, ಜನರ ಬೇಕುಬೇಡಗಳನ್ನು ಮುಂದಾಗಿ ಊಹಿಸಿ, ಅಂದಾಜು ಮಾಡಿ ಅದಕ್ಕೆ ತಕ್ಕಂತೆ ಬರೆಯಬೇಕು ಎಂದು ಸಹ ಅಪೇಕ್ಷಿಸುತ್ತದೆ. ಆದರೆ ಸಾಹಿತಿಗಾಗಲೀ ವಿಮರ್ಶಕನಿಗಾಗಲೀ ಜನರ ಒಲವು ಯಾವ ಕಡೆಗಿದೆ ಎಂದು ಮುಂದಾಲೋಚಿಸುವ ಜರೂರು ಇಲ್ಲ; ರಾಜಕಾರಣಿಗಳಿಗೆ ಜನರನ್ನು ಒಲಿಸಿಕೊಳ್ಳುವುದು ಅನಿವಾರ್ಯ. ಆದರೆ ತನ್ನ ಜವಾಬ್ದಾರಿ ಮರೆತ ಸಾಹಿತಿ ಮಾತ್ರ ಜನರ ಕಡೆ ಕಣ್ಣು ನೆಟ್ಟಿರುತ್ತಾನೆ; ಜನರಿಗೆ ಪ್ರಿಯವಾದದ್ದನ್ನು ಹೇಳತೊಡಗುತ್ತಾನೆ. ಇಂತಹ ನಂಬಿಕೆಗೆಟ್ಟ, bad faith ನ ವಾತಾವರಣದಲ್ಲಿ ನುಣ್ಣಗಿನ ಮಾತಿನ ಸಜ್ಜನರು ಮತ್ತು ರಸಿಕರು ಸಹ ಹುಟ್ಟಿಕೊಳ್ಳುತ್ತಾರೆ. ಉಡುಪಿಯ ಕಸಾಪ. ಸಮ್ಮೇಳನ ಈ ತರಹದ ಸಜ್ಜನರು ಮತ್ತು ರಸಿಕರಿಗೆ ಹೇಳಿಮಾಡಿಸಿದಂತಿದೆ.

ಹಲವು ವರ್ಷಗಳಷ್ಟು ಹಿಂದೆಯೇ ಕವಿ ಗೋಪಾಲಕೃಷ್ಣ ಅಡಿಗರು "ಪುಷ್ಪ ಕವಿಗಳು" ಎಂದು ಇವರನ್ನು ಜರಿದಿದ್ದರು. ಇಂತಹ ರಸಿಕರು ಕರಾವಳಿಯ ಕೋಮುಹಿಂಸೆ, ಮಾನವಹಕ್ಕುಗಳ ದಮನ ಮತ್ತು ತೀವ್ರ ಅಸಮಾನತೆಗಳನ್ನು ಮರೆತು ಸಾಹಿತ್ಯವೆಂಬ ಭೋಜನವನ್ನೂ, ಉಡುಪಿಯ ಅಡುಗೆಯ ನಿಜವಾದ ಭೋಜನವನ್ನೂ ಆಸ್ವಾದಿಸಬಲ್ಲರು. ಆದರೆ ಈ ಸಮ್ಮೇಳನದಿಂದ ಉಡುಪಿಯ ಜನ ಈಗ ಬಹುತೇಕ ಮರೆತುಬಿಟ್ಟಿರುವ ಮನುಷ್ಯನ ಘನತೆ, ಸ್ವಾತಂತ್ರ್ಯ, ಸಮಾನತೆ, ಮಾನವಹಕ್ಕುಗಳು, ಜೀವದಯೆ ಮುಂತಾದ ಮೌಲ್ಯಗಳನ್ನು ನೆನಪು ಮಾಡಿಕೊಂಡಾರೆಯೆ? ಸಾಹಿತ್ಯದ ಅತ್ಯಂತ ಮೂಲಭೂತವೂ ಸಾರ್ವಕಾಲಿಕವೂ ಆದ ಆಶಯಗಳಿಗೆ [illegible] ದಗೀತೆ? ಸಾಹಿತ್ಯ ಸಮ್ಮೇಳನಗಳು [illegible] ಪರಿ ನೋಡಿದರೆ ಹಾಗೆ ಅನ್ನಿಸುವುದಿ ■

ಪ್ರೇಮ ನನ್ನ ಧರ್ಮ, ನಾನದಕ್ಕಾಗಿ ಜೀವ ತೆರಬಲ್ಲೆ - ಜಾನ್ ಕೀಟ್ಸ್

ದ್ಯಾವೇಗೌಡುಂದು ಬಂಥರಾ ತುಂಡುಗುತ್ತಿಗೆ ರಾಜಕಾರಣ

ಬಿಹಣವೊತ್ತು ಒಳಗಣ್ಣಾಗಿದ್ದ ಕಾಳಮಾವನ ಟೀಮಿನ ಪೈಕಿ ಸೀರ.

"ಏನು ಮಂಡೇವುದ ಕತೆ ಹಿಂಗಾಯ್ತಲ್ಲಾ? ದಿನ ಬೆಳಗಾದ್ರೆ ಕ್ವಲೆ ಸುದ್ದಿ ಬರ್ತವೆ." ಅಂದ.

"ಮಂಡ್ಯ ಏನು? ಯಲ್ಲಾ ಊರು ಕತೆನು ಅಂಗೆ ಆಗ್ಯದೆ ಕಣಮಾವ. ನಮಿಗೊತ್ತಾಯ್ತಾಯಿಲ್ಲ ಅಷ್ಟೆಯ" ಎಂದ ಉಗ್ರಿ.

"ಸತ್ತೋನೆದ್ದಿ ಅಪ್ಪ ಇಲ್ಲೆ ವನ್ನವಾರದೋಳಂತಲ್ಲಾ?" ಎಂದಳು ಜುಮ್ಮಿ.

"ಹುಡುಕಿ ನೋಡಿದ್ರೆ ನಿನಿಗೆ ತಂಗಿಯಾಗಬೇಕೇನೊ ಬುಡೆ. ಅಂತ ಮುಂಡೆಮಕ್ಕಳ ಸುದ್ದಿಯ ಈ ತಂಪೊತ್ತಿನಲ್ಲಿ ಯಾಕೆ ನ್ಯನಕತ್ತಿ?"

"ರವಿ ವಳ್ಳಿ ಹುಡುಗನಂತೆ ಕಂಡ್ಯ."

ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಅದು ಅವುನೆಡತಿ ಹೇಳೊ ಮಾತು ಕಣೆ. ಒಂದು ಕೋಟ ರೂಪಾಯಿನ ಮನೆ ಕಟ್ಟಿ ಅದರ್ವಳಗೆ ರಾಣಿ ತರ ಮಡಗಿದ್ನ ಅದ್ಕೆ ಅಂಗಂಕಳೆ."

"ಒಂದು ಕೋಟ ರೂಪಾಯಿ ಮನೆ ಕಟ್ಟಿದ್ನೆ ಅವುನು?"

"ಊ ಕಣೆ ಅರಮನಿದ್ದಂಗದೆ ಅಂಗೆಯ."

"ಅದೆಲ್ಲಿ ದುಡುದ್ನೊ?" ಎಂದ ಕಾಳಮಾವ.

"ಅವುರೆಲ್ಲಿ ದುಡಿಯಕ್ಕೋದರೊ ಮಾವ. ದುಡಿಯೋ ಜನ ಕೋಟ ರೂಪಾಯಿ ಮನೆ ಕಟ್ಟಕ್ಕಾದತೇ? ಏನು ಬ್ಯಾಡಪ್ಪ ತಿಂಗಳಿಗೆ ಹತ್ತು ಸವುರ ಸಂಬಳ ತಗಳೋನು ಇಪ್ಪತ್ತು ಮೂವತ್ತಡಿ ಮನದ್ಯಾಗಲ್ಲಿ ಒಂದು ಮನೆ ಕಟಗಳವೊತ್ತಿಗೆ ಇಪ್ಪತ್ತೊರಸ ಬೇಕಾಯ್ತದೆ. ಅಂತದರಲ್ಲಿ ಈ ನನುಮಕ್ಕಳು ಕೋಟ್ಯಾಂತರ್ರುಪಾಯಿ ಮನೆ ಕಟ್ಟಕೊಂಡು ಲಕ್ಷಾಂತ್ರುಪಾಯಿ ಕಾರಲ್ಲಿ ಓಡಾಡ್ತರೆ ಅಂದ್ರೆ ಅದು ದುಡಿಯೊ ದುಡ್ಡೆ?"

"ಅಂಗರೆ ದುಡ್ಡೆಲ್ಲಿಂದ ಬತ್ತದವುರಿಗೆ?"

"ವಸೂಲು ಮಾಡ್ತವೆ. ಮಾರ್ವಾಡಿಗಳು, ಲಿಕ್ಕರ್ ಲಾಬಿ ಜನ, ಕ್ಲಬ್ಬು ಹಿಂಗೆ ಯಾವ ಯಾವುದೊ ದಂಧೆ ಜನತ್ರ ವಸೂಲು ಮಾಡ್ತವೆ. ಪೊಲೀಸ್ನೋರಿಗೆ ಒಂದಿಷ್ಟು ಕೊಡ್ತವೆ, ತಾವೊಂದಿಷ್ಟು ಮಡಿಕತ್ತವೆ. ಪೊಲೀಸ್ನೋರು ನ್ಯಟ್ಟಗಿದ್ರೆ ಹಿಂಗ್ಯಾಕಾದತ್ತೇಳು?"

"ಆ ಪೊಲೀಸ್ ಬಡ್ಡೆತ್ತವು ತಾನೆ ಏನು ಮಾಡ್ತವುಲ. ಹಿಂತೋರ ಹಿಡಕಂಡೇಟಿಗೆ ಮ್ಯಾಲಿಂದ ಪೋನು ಬತ್ತದೆ, ಬುಟ್ಬು ಕಳುಸ್ತವತ್ತಗೆ. ಇವುರಂಗೇ ಬ್ಯಳಕತ್ತವೆ."

"ಬ್ಯಳಕಳದೇನು ಯಲಕ್ಸನ್ನಿಗೆ ನಿಂತು ಗೆದ್ದು ಬಂದಿದ್ದ ಗೊತ್ತೆ?"

"ಯಾವ್ಯಲಕ್ಸನ್ನೂ?"

"ನಗರಸಭೆ ಯಲಕ್ಸನ್ನಲಿ ಗೆದ್ದು ಬಂದಿದ್ದ ಕಣೆ." ಮುಂದೆ ಅಂಬುರೀಸನ್ನಿಡಕಂಡು ಯಮ್ಮೆಲ್ಲೆ ಯಲಕ್ಸನ್ನಿಗೂ ನಿಲ್ತಿದ್ನೊ ಏನೊ."

"ಯಮ್ಮೆಲ್ಲೆ ಯಲಕ್ಸನ್ನಿಗೆ ನಿಲ್ಲೋನ್ನ ಕೊಂದಾಕಿದ ರಂತಲ್ಲಾ?" ಎಂದ ಸೀರ.

"ಅವುನು ನಾಗಣ್ಣ ಅಂತ ಕಣ ಮಾವ. ವಳ್ಳೆ ಮನ್ಸ ಪಾಪ, ಅವುನ್ನೂ ಮುಗಿಸಿಬುಟ್ರತ್ತಗೆ. ಅದು ರಾಮಕಿಸ್ನಾಸ್ರಮದೆದ್ರಿಗೆ ನಿಂತಿದ್ದಾಗ."

"ಅಂಗರೇ ಜಡೆರವಿಯ ನಾಗಣ್ಣನೆ ಮುಗಿಸಿದ್ನೆ?"

"ಅಂಗಂತ ತಿಳಕಂಡು ಕೊಂದಾಕ್ಯವೆ ಕಣೊ. ಇನ್ನ ನಾಗಣ್ಣನ ಕೊಂದಾಕಿದೋರ್ಯಾರು ಅಂತ್ಲೂ ಇನ್ನೂ ಕ್ವಲಿಗಳು ನಡಿತವೆ."

"ಅಂಗರಿಸ್ಟಕೆ ನಿಲ್ಲದಿಲ್ಲಾ ಅನ್ನು?"

"ಅದ್ಯಂಗೆ ನಿಂತತೊ ಮಾವ. ಒಂದು ವೇಳೆ ನಿಂತ್ರೂವೆ ತಡಾಯ್ತದೆ. ಸತ್ತೊನ ಸಂಬಂಧಿಕರೊ ಹಿಂಬಾಲಕರೊ ಸೇಡು ತೀರಿಸ್ಕಂಡೇ ಬುಡ್ತರೆ."

"ಅಲ್ಲಾ ಮಂಡ್ಯ ಹಿಂಗಾಯ್ತಲ್ಲ ಹೇಳು, ಮದ್ಲಿಗೆ ಹಿಂಗಿರಲಿಲ್ಲ."

"ಮದ್ಲಿಗೂ ಅಂಥ ಜನಿದ್ರು ಕಣೊ. ಅವುರು ಗದರಿಸಿದೇಟಿಗೆ ಸುಮ್ಮನಾಗೊ ವಜಕಟ್ಟಿನ ಜನವೆ ಇದ್ರಾಗ. ಈಗ್ಯಾವಳ್ದಿದ್ದಲೂ?"



"ಏನು ಬ್ಯಾಡ, ಶಂಕ್ರೇಗೌಡ ಒಂದು ಮಾತುಗದ ರಿದನಪ್ಪಾ ಅಂದ್ರೆ ತಿಗಬಾಯದಿಮಿಕಂಡು ಸುಮ್ಮನಾಗರು ಜನ."

"ಜನಗಳಷ್ಟೇ ಅಲ್ಲ ಕಣೊ ಅಂಥ ದ್ಯಾವೇಗೌಡನೆ ಶಂಕ್ರೇಗೌಡನೆದ್ರಿಗೆ ಮಾತಾಡತಿರಲಿಲ್ಲ ಅಂಗಿದ್ದ ಶಂಕ್ರೇಗೌಡ."

"ಅಂಗರೆ ದ್ಯಾವೇಗೌಡ ಶಂಕ್ರೇಗೌಡುನಿಗೂ ಹೆದರ ತಿದ್ನೆ?"

"ಊ ಕಣೊ ಮಾವ. ಅವುನಿರಗಂಟ ಇವುನೆಲ್ಲಿ ಬಾಲ ಬಿಚ್ಚದ: ಅಷ್ಟೇ ಅಲ್ಲ ಶಂಕರೇಗೌಡ ಇರಗಂಟಾ ದ್ಯಾವೇಗೌಡ ಮಂಡ್ಯಕ್ಕೆ ಬಂದು ರಾಜಕಾರಣ ಮಾಡಕ್ಯಾಗಲಿಲ್ಲ, ಈಗ್ಯಾವೊ ಪೋಲಿ ಬಡ್ಡೆತ್ತವಿಡಕಂಡು ಆಟ ಆಡ್ತನೆ, ಅವು ಆಗ್ಲೆ ತಲೆವಗದು ಬ್ಯಾರೆ ಕಡಿಕೆ ವಂಟವೆ."

"ಚಲುವರಾಯ ಸ್ವಾಮಿದು ಒಂದು ಕಾಲು ಅತ್ರಾಗೇ ಆದಂತೆ."

"ಇಲ್ಲ ವಾಪಸ್ ತಗಂಡನಂತೆ. ಪಾರ್ಟಿ ಬುಟ್ಕೋದ್ರೆ ದ್ಯಾವೇಗೌಡನ ಮಕ್ಕಳು ಕೊಡೋ ಕ್ವಂದ್ರೆ ನ್ಯನಿಸಿಗಂಡು ಹೆದ್ರಿಕಂಡು ಬಂದನಂತೆ."

"ಪೋನು ಮಾಡಿ ಹೆದ್ರಿಸಿದ್ರೇನೊ?"

"ಇರಬವುದು, ಅಂತೂ ದ್ಯಾವೇಗೌಡನ ಕ್ವಟಗೆ ಖಾಲಿಯಾಯ್ತಾ ಅದೆ. ಹುಣಸೂರು ದ್ಯಾವೇಗೌಡ್ನು ಹೋದ ಅತ್ತಗೆ."

"ಎಲ್ಲಿಗೋದ?"

"ಬಿಜೆಪಿಗೋದ. ಅಲ್ಲೇಟು ದಿನಿದ್ದನೊ ಏನೊ? ಅಂತೂ ಅವುನ ಕಡಿಯೋರ್ಯಲ್ಲ ಹೋದ್ರುತ್ತಗೆ."

"ಹಿಂಗ್ಯಲ್ಲ ಹೋದ್ರೆ ದ್ಯಾವೇಗೌಡನ ಕತೆಯೇನು?"

"ಅವುನೇನು ಹೆದರಕುಲ್ಲ ಕಣಕ್ಕ. ಇಂತವುಕ್ಯಲ್ಲ ಡೋಂಟ್ ಕೇರು" ಎಂದುಕೊಂಡು ವಾಟಿಸ್ಸೆ ಬಂದ.


"ಹಿಂದೋದ ಬರಗಾಲಕಿಂತ ಮುಂದ ಬರೊ ಗೊಟ್ಟಕಾಲಕ್ಕೆ ನನ್ನ ಶಪ್ಪನೂ ಹೆದರದಿಲ್ಲ ಅಂತಿತ್ತಂತೆ ಗುಳ್ಳೆನ. ಅಂಗಾಯ್ತು ದೇವೇಗೌಡನ ಕತೆ."

"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ. ದ್ಯಾವೇಗೌಡನ ಜುಬ್ಬದಲ್ಲಿ ಮೂರು ಕಾಸಿಲ್ದಾಗ್ಲೆ ರಾಜಕಾರಣ ಮಾಡ್ಯವುನೆ. ಇನ್ನ ಈಗ ಅದೂ ಸಾವುರಾರು ಕೋಟಿ ರೂಪಾಯಿ ಕಣಜನೆ ಇರುವಾಗ ಯಾರಿಗೂ ಕೇರ್ ಮಾಡದಿಲ್ಲ, ಹೋದೋರೊಯ್ತರೆ ಬಂದೋರು ಬತ್ತರೆ, ರಾಜಕಾರಣ ಯಂಗೆ ಮಾಡಬೇಕು ಅನ್ನದು ನನಿಗೊತ್ತದೆ ಅಂತನೆ" ಎಂದ ವಾಟಿಸ್ಸೆ.

"ಆ ಪ್ರಕಾಸನೂ ಹೋದನಂತಲ್ಲಾ?" ಎಂದ ಕಾಳಮಾವ.

ಬಾರ್‌ನಲ್ಲಿ ಎಂಥ ಬಡವ್ರು ಸಾರ್?

ಕೆಲವು ದಿವಸಗಳಿಂದ ತಿಳಿಸಾರು ಮೀನಿನಸಾರು ಕಗ್ಗಂಟು. ತಿಂದು ತಿಂದು ಕೊಬ್ಬಿದ ಜನ ಉಂಡೂಟ ಅರಗಲಿ ಅಂತ ಈ ತಿಳಿಸಾರು ಅನ್ನೋ ಕಷಾಯ ಕುಡೀತಾರೆ. ಆದರೆ ಶ್ರಮಜೀವಿಗಳ ಆಹಾರವೇ ಈ ಮೀನಿನಸಾರು. ಕರಾವಳಿಯ ಜನಜೀವನವನ್ನು ಕಾಡುತ್ತಿರುವ ಸಮಸ್ಯೆಗಳ ಚರ್ಚೆಯನ್ನು ಸೌಹಾರ್ದ ಸಾಹಿತ್ಯ ಸಮ್ಮೇಳನದಲ್ಲಿ ಮಾಡ್ತೀವಿ. ಜೊತೆಗೆ ಅಚ್ಚುಗಟ್ಟಾದ ಮೀನಿನಸಾರಿನ ಊಟಾನೂ ಉಣ್ತೇವಿ ಅಂತ ಹೇಳಿ ಹಾಗೇ ಮಾಡಿದರಂತೆ. ಇದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪೂರಕವೋ ಅಥವಾ ಪರ್ಯಾಯವೋ ಎಂಬ ಗೊಂದಲ ಇದ್ದೇ ಇದೆ.



ಆ ಸಮ್ಮೇಳನದಲ್ಲಿ ಪ್ರತಿನಿಧಿಸಲು ಸಾಧ್ಯವಾಗಿರಲಿಲ್ಲವಾಗಿ ಮೀನಿನ ಸಾರಿನ ರುಚಿಯನ್ನು ಚಪ್ಪರಿಸ ಲಾಗಲಿಲ್ಲ, ಹಸಿದುಕೊಂಡು ಇರುವು ದಕ್ಕಿಂತ ತಿಳಿಸಾರಾದರೂ ಸಿಗಲಿ ಎಂದು ಆಶಿಸಿ ಈ ಸಮ್ಮೇಳನಕ್ಕೆ ಹೊರಟೆ. ಸಾಮಾನ್ಯವಾಗಿ ಸಾಹಿತ್ಯ ಸಮ್ಮೇಳನಗಳಲ್ಲಿ ಗೋಷ್ಠಿಗಳಿಗೆ, ಮುಖ್ಯ ಸಮಾರಂಭಗಳಿಗೆ ವೇಳೆ ಅಂತ ನಿಗದಿ ಮಾಡಿರ್ತಾರೆ. ಆದರೆ ಅವು ಅಷ್ಟು ಗಂಟೆಗೇ ಸರಿಯಾಗಿ ಪ್ರಾರಂಭವಾಗಿ ಹೇಳಿದ ಸಮಯಕ್ಕೇ ಮುಗಿಯಬೇಕೂಂತ ಯಾರೂ ಭಾವಿಸುವುದಿಲ್ಲ, ಆದರೆ ಈ ವೇಳೆ ಅನ್ನೋದನ್ನ ಯಾಕೆ ಸೂಚಿಸಿರುತ್ತಾರೆ ಅಂದರೆ ಇಷ್ಟು ಗೋಷ್ಠಿಗಳು ಇದಾವೆ ಅನ್ನುವುದನ್ನು ತಿಳಿಸುವುದಕ್ಕೆ ಮಾತ್ರ! ಆವತ್ತು ನಾನು ಹೊರಟ ಬಸ್ಸೂ ಇದೇ ಜಾಯಮಾನದ್ದು ಇರಬೇಕು. ಬೆಳಗ್ಗೆ 8.30ಕ್ಕೆ ಮೈಸೂರಿನಿಂದ ಹೊರಟ ಬಸ್ಸು ಪ್ರಯಾಣಿಕರಿಗೆ ಸಿಟ್ಟು ತರಿಸುವಷ್ಟು ನಿಧಾನವಾಗಿ ಓಡುತ್ತಿತ್ತು, ಯಾರೋ ಸರ್ಕಾರಿ ಕಚೇರಿಗೆ ಹೋಗೋ ವ್ಯಕ್ತಿ 'ಏನ್ರಿ ಇಷ್ಟು ನಿಧಾನವಾಗಿ ಹೋಗ್ತೀರೀರಿ' ಅಂತ ಡ್ರೈವರನ್ನ ಕೇಳಿದ್ದಕ್ಕೆ, 'ವೇಗ ನಿಯಂತ್ರಕ ಅಳವಡಿಸಿದ್ದಾರೆ ಸಾರ್'. ಏನೇನು ಮಾಡ್ಲಿ' ಅಂದ. ಪಾಪ ಆ ಡ್ರೈವರೂ ಸಹ ಯಾವ ನಿಲ್ದಾಣದಲ್ಲೂ ಕೆಳಕ್ಕೊ, ಇಳಿಯದೆ ಮಂಗಳೂರು ತಲುಪಿಸಿದ. ಮೊದಲೇ ನಿಧಾನವಾಗಿ ಬಂದ ಬಸ್ಸು. ಇದರ ಮೇಲೆ ಡ್ರೈವರ್‌ಗೆ ಮಂಗಳೂರಿನ ಬಸ್ ನಿಲ್ದಾಣಕ್ಕೆ ದಾರೀನೇ ಗೊತ್ತಿರಲಿಲ್ಲ! ಸುತ್ತಿ ಬಳಸಿ ಅವರಿವರನ್ನ ಕೇಳಿ ಕೊನೆಗೂ ಬಸ್ ನಿಲ್ದಾಣ ತಲುಪಿದಾಗ ಸಂಜೆ ಐದೂವರೆ ಗಂಟೆಯಾಗಿತ್ತು, ಸುಮಾರು ಆರು ಗಂಟೆಗಳ ಪ್ರಯಾಣಕ್ಕೆ ಒಂಭತ್ತು ಗಂಟೆ ಹಿಡಿದಿತ್ತು.

ಅಲ್ಲಿಂದ ಉಡುಪಿ. ಸುಮಾರು ಒಂದೂವರೆ ಗಂಟೆ ಪ್ರಯಾಣ. ಹೀಗಾಗಿ ಉಡುಪಿ ತಲುಪಿದಾಗ ರಾತ್ರಿ ಏಳೂವರೆಯ ಸಮಯ. ಬಸ್ ನಿಲ್ದಾಣದಲ್ಲಿ ಇಳಿದು ನೋಡ್ತೀನಿ. ಸಮ್ಮೇಳನಕ್ಕೆ ಸ್ವಾಗತ ಕೋರುವ ಸೊಗಸಾದ ಬ್ಯಾನರ್‌ಗಳು, ಕನ್ನಡದ ಬಾವುಟಗಳಿಂದ ವಿಜೃಂಭಿಸುತ್ತಿತ್ತು, ಉಡುಪಿಯ ಜನರ ಕನ್ನಡ ಪ್ರೇಮಕ್ಕೆ ಮಾರುಹೋದೆ. ಆದರೆ ಬಾವುಟಗಳು, ಬ್ಯಾನರ್‌ಗಳು ನನಗೆ ಮಾರ್ಗದರ್ಶಿ ಆಗುವ ಸಾಧ್ಯತೆ ಇರಲಿಲ್ಲವಲ್ಲ, ಅಲ್ಲಿ ಎಲ್ಲಾದರೂ ಸ್ವಾಗತ ಕಚೇರಿ ಇದೆಯೇನೋ ಅಂತ ತಡಕಾಡಿದೆ. ಅಂತಹದ್ದು ಯಾವುದೂ ಅಲ್ಲಿ ಇರಲೇ ಇಲ್ಲ!

ಛೇಛೇ ಹೀಗಾಯಿತಲ್ಲ ಅಂತ ಪೇಚಾಡಿಕೊಂಡೆ. ಸಮ್ಮೇಳನ ನಡೆಯಬೇಕಾದ ಸ್ಥಳಕ್ಕೆ ಆಟೋ ವಿಚಾರಿಸಿದೆ. ಇಂತಹ ಸಂದರ್ಭಗಳಲ್ಲಿ ಯಾವ ಊರಿನ ಆಟೋದವರಾದರೂ ಅಷ್ಟೆ. ಹೊಸಬರು ಅಂತ ಬಂದಾಗ ಆದಷ್ಟು ಗಿಬರಿಕೊಳ್ಳೋಣ ಅನ್ನುವ ಮಂದಿ. ಆದರೆ ಆತ ಈ ಗುಂಪಿಗೆ ಸೇರಿರಲಿಲ್ಲ, ಸಿಟಿ ಬಸ್‌ನಲ್ಲಿ ಹೋಗಲು ಸಲಹೆ ನೀಡಿದ. ಅಂತೂ ಇಂತೂ ಸ್ವಾಗತ ಕಚೇರಿ ಸೇರಿದೆ. ಅಲ್ಲಿ ಇನ್ನೊಂದು ರೀತಿಯ ಗೊಂದಲ ಆಯಿತು. ಪ್ರತಿ ಜಿಲ್ಲೆಗೂ ಪ್ರತ್ಯೇಕ ಕೌಂಟರ್ ಇದ್ದವಂತೆ. ನನಗೆ ಮಂಡ್ಯ ಜಿಲ್ಲೆಯ ಕೌಂಟರ್‌ಗೆ ಹೋಗಲು ಒಬ್ಬಾತ ತಿಳಿಸಿದ. ಇನ್ನೊಬ್ಬರು ನನ್ನ ಬಳಿ ಇದ್ದ ಆಹ್ವಾನ ಪತ್ರ ಓದಿದರು. 'ಓಹ್ ಇವರು ವಿಐಪಿಗಳು. ಅಲ್ಲಲ್ಲ ಒಳಗೆ ಹೋಗಿ ವಿಚಾರಿಸಿ' ಅಂದರು. ಅಲ್ಲಿಗೆ ಹೋದೆ. ಅವರಿಗೆ ನೂರೆಂಟು ತಾಪತ್ರಯಗಳು-ಆಹ್ವಾನ ಪತ್ರಿಕೆ ನೀಡಿದೆ. 'ಹೊರಗೆ ಹೋಗಿ ವಿಚಾರಿಸಿ' ಅಂದರು! ನಾನು ಅಲ್ಲಿಂದಲೇ ಇಲ್ಲಿಗೆ ಬಂದಿದ್ದೆ, ಅದನ್ನ ವಿವರಿಸಿದೆ. ಜ್ಞಾನೋದಯ ಆಗಿರಬೇಕು. ಆಹ್ವಾನಪತ್ರದ ಮೇಲೆ ಏನೋ ಬರೆದು ಪಕ್ಕದ ಕಟ್ಟಡಕ್ಕೆ ಹೋಗಲು ತಿಳಿಸಿದರು. ಇಂತಹವರನ್ನು ಕಾಣೆ ಎಂದರು. ಕಂಡೆ. ಅವರು ಮತ್ತೆ ಹೊರಗೆ ಕೌಂಟರ್‌ನಲ್ಲಿ ವಿಚಾರಿಸಲು ಹೇಳಿದರು. ಅಯ್ಯೋ ರಾಮನೆ ಯಾಕಾದರೂ ಬಂದೆನಪ್ಪ ಈ ಸಮ್ಮೇಳನಕ್ಕೆ ಅಂತ ಶಪಿಸಿಕೊಂಡು ಹಾಗೇ ಮಾಡಿದೆ. ಕೊನೆಗೆ ಅಲ್ಲಿದ್ದ ಪುಣ್ಯಾತ್ಮ ನಾನು ತಂಗಬೇಕಾದ ಹೋಟೆಲಿನ ವಿಳಾಸ ತಿಳಿಸಿದ.

ಹೋಟೇಲ್ ತಲುಪಿದಾಗ ಸುಮಾರು ಒಂಭತ್ತು ಗಂಟೆ. ಸುಮಾರು ಹದಿಮೂರು ಗಂಟೆಯ ಪ್ರಯಾಣ ಆಯಾಸ ತಂದಿತ್ತು, ಊಟ ತರಲು ಹೇಳಿ ಸ್ನಾನ ಮುಗಿಸಿದೆ. ಮೀನಿನ ಸಾರಿನ ವಾಸನೆ ಮೂಗಿಗಲ್ಲದಿದ್ದರೂ ಮನಸ್ಸಿಗೆ ಬಡಿಯುತ್ತಲೇ ಇತ್ತಲ್ಲ, ರೈಸ್ ಫಿಷ್ ಮಸಾಲಾ ತರಲು ಹೇಳಿದ್ದೆ, ಆದರೆ ರೂಂಬಾಯ್ ಚಿಕನ್ ಮಸಾಲಾ ತಂದಿದ್ದ. ಇದು ಯಾಕಪ್ಪ ಹೀಗೆ ಮಾಡಿದೆ ಅಂತ ಕೇಳಿದ್ದಕ್ಕೆ 'ಸಾರ್, ನೂರು ನೂರೈವತ್ತೈದು ರೂಪಾಯಿಗಳಿಗೆ ಕಡಿಮೆ ಮೀನೇ ಸಿಗುತ್ತಿಲ್ಲ' ಅಂದ!

ಮಾರನೆಯ ದಿವಸ ಸಮ್ಮೇಳನದ ಉದ್ಘಾಟನೆ. ಚಂಪಾ ಅವರು ಕನ್ನಡ ಮಾಧ್ಯಮ, ಪರ್ಯಾಯ ಸಮ್ಮೇಳನ, ಕೋಮುವಾದ ಇವುಗಳ ಸ್ಪರ್ಶಿಸಿ ಎಲ್ಲಿಯೂ ವಿರೋಧ ಬರದಂತ ಎಚ್ಚರ ವಹಿಸಿದರು! ಶಿವಮೊಗ್ಗ ಸಮ್ಮೇಳನಕ್ಕೆ ಇದನ್ನು ಹೋಲಿಸಿ ಅಲ್ಲಿದ್ದ ಆತಂಕ, ಉದ್ವಿಗ್ನತೆ ಇವ್ಯಾವೂ ಇಲ್ಲದಿರುವುದರಿಂದ ನಿರಾಳವಾಗಿ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವುದಾಗಿ ತಿಳಿಸಿದರು. ಪೇಜಾವರ ಶ್ರೀಗಳು ಹರಿಯ ಜಡೆಯಲ್ಲಿದ್ದ ಗಂಗೆಯನ್ನು ಭಗೀರಥ ಜನರ ಒಳಿತಿಗಾಗಿ ಭೂಮಿಗೆ ತಂದಂತೆ ಶಾಸ್ತ್ರಗಳಿಂದ ಬಂಧಿತವಾಗಿದ್ದ ಜ್ಞಾನವನ್ನು ಶರಣರು, ದಾಸರು ಜನರಿಗೆ ಹಂಚಿದರು ಎಂದು ಹೇಳಿದರು. ಮುಂದುವರೆದ ಅವರು ಆಂಗ್ಲ ಮಾಧ್ಯಮ ಶಾಲೆಗಳು ದಿನೇದಿನೇ ಹೆಚ್ಚುತ್ತಿದ್ದು ಕನ್ನಡಕ್ಕೆ 'ಪೂತನಿ'ಯಾಗುತ್ತಿವೆ ಎಂದರು. ಮುಂದೆ ಆ ದಿನ ಮಾತ್ರ ಅಲ್ಲ, ಬೇರೆ ದಿವಸಗಳ ಗೋಷ್ಠಿಯಲ್ಲೂ ಇದೇ ಪ್ರಶ್ನೆ ಮತ್ತೆಮತ್ತೆ ಬಂದಿತು. ಕನ್ನಡಿಗರ ನಿರಾಸಕ್ತಿಯನ್ನ ಛೇಡಿಸಿದರು. ಈ ಹಿರಿಯ ವಿದ್ವಾಂಸರ ಮಕ್ಕಳು, ಮೊಮ್ಮಕ್ಕಳು ಯಾವ ಮಾಧ್ಯಮದ ಶಾಲೆಗೆ ಹೋಗುತ್ತಿದ್ದಾರೆಂಬುದು ತಿಳಿದುಬಂದಿಲ್ಲ! ಪೇಜಾವರ ಶ್ರೀಗಳಲ್ಲಿ ಒಂದು ಪ್ರಶ್ನೆ: ಪರ್ಯಾಯ ಪೀಠ ಈಗ ತಕರಾರಿನಲ್ಲಿದೆ. ಪುತ್ತಿಗೆ ಶ್ರೀಗಳು ವಿದೇಶ ಯಾತ್ರೆ ಮಾಡಿ ಬಂದಿರುವುದರಿಂದ ಅವರು ಕೃಷ್ಣನ ಪೂಜೆ ಮಾಡಲು ಅರ್ಹರಲ್ಲ, ಒಂದು ವೇಳೆ ಈಗ ಅವರಿಗೆ ಅವಕಾಶ ನೀಡಿದರೆ ಹದಿನಾಲ್ಕು ವರ್ಷಗಳ ಕಾಲ ಮಠಾಧೀಶರು

ಅನಾರ್

ಎಚ್.ಎಲ್. ಕೇಶವಮೂರ್ತಿ

ಸಿಂಗಪೂರ್ ಹಾಂಕಾಂಗ್ ಎಂದು ವಿದೇಶಗಳಿಗೆ ಹಾರಿ ವಿಲಾಸಿಜೀವನ ನಡೆಸಿ ಪರ್ಯಾಯದ ವೇಳೆಗೆ ಹಿಂತಿರುಗಬಹುದಾದ ಆತಂಕ ಕಾಡುತ್ತಿದೆ ಎಂದೆಲ್ಲ ಪರಿತಪಿಸಿದ್ದಾರೆ. ಮಧ್ವ ಜನಾಂಗದ ಬಗ್ಗೆ ಅವರಿಗಿರುವ ಕಳಕಳಿ ಒಪ್ಪತಕ್ಕದ್ದೆ. ಇದೇ ಪೇಜಾವರ ಶ್ರೀಗಳು ಒಂದು ಕೆಲಸ ಮಾಡಬಹುದಲ್ಲ.... ಕನ್ನಡ ಮಾಧ್ಯಮ ಶಾಲೆಗಳನ್ನು ಇಂಗ್ಲಿಷ್ ಮಾಧ್ಯಮಗಳು ಪೂತನಿಯಂತೆ ವಿಷದ ಹಾಲನ್ನು ಕುಡಿಸಿ ಸಾಯಿಸುತ್ತಿವೆ ಎಂದು ಪರಿತಪಿಸುತ್ತಿದ್ದಾರಲ್ಲ.... ತಮ್ಮ ಮಠದ ಶಿಷ್ಯರು ಯಾರೂ ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗಳಿಗೆ ಕಳುಹಿಸಬಾರದು. ಹಾಗೇನಾದರೂ ಕಳುಹಿಸಿದರೆ ಮಠದಿಂದ ಬಹಿಷ್ಕಾರ ಹಾಕಲಾಗುತ್ತದೆ ಎಂದು ಫರ್ಮಾನು ಹೊರಡಿಸಬಹುದಲ್ಲಾ....

"ಅಂಗೆ ನೋಡಿದ್ರೆ ಪ್ರಕಾಶ್ ಇಲ್ಲಿಗಂಟ ಇದ್ದಿದ್ರೆ ಹೆಚ್ಚು ಪ್ರಯತ್ನಪ್ಪ, ದ್ಯಾವೇಗೌಡನ್ನ ಯಂಗೋ ಸಯಿಸ್ಕೊಬವುದು. ಅವುನ ಮಕ್ಕಳ ಸಯಿಸಕ್ಕಾದತೇ? ಅವರಲ್ಲೂ ರೇವಣ್ಣನ್ನ ಮಾತ್ರ ಅವುನಿಗೆ ಜನ್ಮ ಕೊಟ್ಟೋನ ಸಯಿಸಕೋಬೇಕು."

"ಹೆತ್ತೋರಿಗೆ ಯಗ್ಗಣಾ ಮುದ್ದು ಅಂತರಲ್ಲಾ ಅಂಗೆ."

"ನಿಜ ಕಣಕ್ಕ. ದ್ಯಾವೇಗೌಡ ರೇವಣ್ಣನ್ನ ನೋಡಿದೋನೆ ಈ ಗಾದೆ ಮಾತಂದಿರಬೇಕು."

"ಈಟೆಗೆ ರೇವಣ್ಣನೂ ಮಾತಾಡ್ತ ಅವುನೆ ಕಣೊ. ನೋಡಾಗ್ಲೆ ಸದಾನಂದ ಗೌಡ, ಎಡೂರಪ್ಪನ್ನ ಬೋದಿರದ್ದೆ ದ್ಯಾವೇಗೌಡುನಿಗೆ ಭಾಳ ಖುಷಿಯಾಗಿದ್ದತಂತೆ" ಎಂದ ಉಗ್ರಿ.

"ಆಗದೆಯಿದ್ದತೆ. ಮಾತಾಡಕ್ಕೇ ಬರದೋನು ಬಜೆಪಿ ಅಧ್ಯಕ್ಷನೆ ಬೈತನೆ ಅಂದ್ರೆ ದಿಸೀಸ್ ರಿಯಲಿ ಮಂದುಪುಲ್ಲು" ಎಂದ ವಾಟಿಸ್ಲೆ.

"ದ್ಯಾವೇಗೌಡುಕೂತು ಯಾರಿದ್ದರ್ಲ ಈಗ?" ಎಂದ ಕಾಳಮಾವ.

"ಎಷ್ಟು ಜನಬೇಕೊ ಅಷ್ಟೇ ಜನವುರೆ ದ್ವಡಪ್ಪ, ದ್ಯಾವೇಗೌಡ ಮದ್ದಿಂದ ತುಂಡುಗುತ್ತುಗೆ ಮನ್ನಲವೆ? ಅದ್ರೆ ತುಂಡುಗುತ್ತುಗೆ ಪಾಲಿಟಿಕ್ಸ್ ಶುರು ಮಾಡಿದ."

"ತುಂಡುಗುತ್ತಗೆಗೂ ಇದ್ಕು ಏನ್ಲ ಸಮಂದ?"

"ತುಂಡುಗುತ್ತಿಗೆಲಿ ಹೆಚ್ಚಗೆ ರಿಸ್ಕಿರದಿಲ್ಲ, ಅಂಗೆ ಪಾರ್ಟಿ ಚಿಕ್ಕದಾಗಿದ್ದಾಗ ಯಲ್ಲಾರ್ನು ಕಂಟ್ರೋಲಾಗಿ ಇಟಗಬವುದು. ಮೇಂಟೇನು ಮಾಡಬವುದು. ಅದ್ಕೆ ಪ್ರಕಾಶನಂಥ ದೊಡ್ಡ ಲೀಡುನೆಲ್ಲಾ ಓಡಿಸಿಬುಟ್ಟು ಚಲುವ, ಬಾಲಕಿಸ್ನ ಅಲ್ಲಂಗೂರ್, ಚೆನ್ನಿಗ ಪನ್ನಿಗ ಅಂತ ನಾಮರ್ಥನ್ನಲ್ಲ ಇಟಗಂಡು ಕುಂತವುನೆ. ಅವುರಂಥೋರಿನ್ನೊಂದಿಪ್ಪು ಜನ ಬಂದ್ರು ಸಾಕು ವರ್ಕೌಟಾಯ್ತದೆ. ಜಾಸ್ತಿ ರಿಸ್ಕು ಇರದಿಲ್ಲ. ತನ್ನ ಮಕ್ಕಳ ವ್ಯರಸೋರು ಯಂಗಿರಬೇಕು ಅಂಥೋರ್ನ ಮಾತ್ರ ಹಿಡಕಂಡು ಗುಂಪಿಗೆ ಬಗದು, ಒಂದಿಡಿ ಘುಲ್ಲಾಕಿ ಸುಮ್ಮನಾಯ್ತನಿನ್ನ?"

"ಯಂಗೊ ಅವುಂದು ರಾಜಕಾರಣ ನ್ಯಡದೇ ಬುಡ್ತಲ್ಲ ಹೇಳು" ಎಂದ ಸೀರ.

"ಒಂಥರಾ ಮರಿಯಾದಿಗೆಟ್ಟ ರಾಜಕಾರಣ ಅಂತ್ಲೂ ಅನ್ನಬವುದು."

"!"

ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಜಾತ್ರೆಗಳು ಎಂದು ಕರೆಯಲಾಗುತ್ತದೆ. ಜಾತ್ರೆಗಳು ನಮ್ಮ ಸಾಂಸ್ಕೃತಿಕ ಕೇಂದ್ರಗಳು ಎನ್ನುವುದು ಸತ್ಯವೇ ಆದರೂ ಇಂತಹ ಜಾತ್ರೆಗಳಲ್ಲಿ, ಮುಂದಿನ ಸಾಲಿನ ಮಳಿಗೆಗಳು ಸಾಹಿತ್ಯ ವಲ್ಲದ ವಸ್ತುಗಳ ಮಾರಾಟಕ್ಕೆ ಮೀಸಲಾಗಿದ್ದು ಪುಸ್ತಕ ಮಳಿಗೆಗಳು ಹಿಂದಕ್ಕೆ ತಳ್ಳಲ್ಪಟ್ಟಿದ್ದವು! ನಿರೀಕ್ಷಿಸಿದಷ್ಟು ವ್ಯಾಪಾರ ಆಗದೆ ಪುಸ್ತಕದ ಅಂಗಡಿ ಮಾಲೀಕರ ಮುಖ ಮುದುಡಿಹೋಗಿತ್ತು. ಜನರೇನೋ ಬರುತ್ತಿದ್ದರು. ಆದರ ಇದರಲ್ಲಿ ಅರ್ಧಕ್ಕಿಂತ ಹೆಚ್ಚು ವಿದ್ಯಾರ್ಥಿಗಳೇ ಆಗಿದ್ದರು! ಪುಸ್ತಕ ಕೊಳ್ಳದಿದ್ದರೂ ಮಕ್ಕಳು ಅವುಗಳನ್ನು ನೋಡಲಾದರೂ ಸಾಧ್ಯವಾಯಿತಲ್ಲ ಎಂಬುದು ಸಮಾಧಾನದ ಸಂಗತಿ. ಸಮ್ಮೇಳನದ ಹೊರಗಿನ ರಸ್ತೆಯ ಇಬ್ಬದಿಯಲ್ಲೂ ಮಾರಾಟಕ್ಕಿಟ್ಟಿದ್ದ ವಸ್ತುಗಳು ಬೆಂಗಳೂರಿನ ಮೆಜೆಸ್ಟಿಕ್‌ನ ರಸ್ತೆಬದಿಯ ವ್ಯಾಪಾರಿಗಳನ್ನು ನೆನಪಿಗೆ ತರುವಂತಿತ್ತು!

ಉಡುಪಿಗೆ ಬಂದಮೇಲೆ ಶ್ರೀಕೃಷ್ಣನನ್ನು ನೋಡದಿದ್ದರೆ ಹೇಗೆ? ದೇವಸ್ಥಾನದ ಒಳಗೆ ಹೋಗಬೇಕಾದರೆ ಪರಟು ತೆಗೆದು ಹೋಗಬೇಕು ಎನ್ನುವುದು ತಿಳಿದಿದ್ದರಿಂದ ಕನಕದಾಸರ ಮಾರ್ಗ ಹಿಡಿದೆ. ಕನಕನಕಿಂಡಿಯನ್ನು ಒಡೆದು ನಿರ್ಮಿಸಲಾಗಿತ್ತಲ್ಲ, ಆಧುನಿಕ ಕನಕನ ಕಿಂಡಿ ಮುಖಾಂತರ ನೋಡಿದೆ. ಕನಕ ಗೋಪುರ ಪೂಜಾರಿಗಳ ವಿಶ್ರಾಂತಿ ಸ್ಥಳ ಆಗಿತ್ತೇನೋ! ಕನಕನ ಕಿಂಡಿಯ ಮುಖಾಂತರ ನೋಡುವ ಜನರ ಪರಿವೆಯೇ ಇಲ್ಲದೆ ಅವರು ಕಿಂಡಿಯ ಎದುರೇ ನಿಂತಿದ್ದರು–ಕುಂದಿ ದರ್ಶನ ನೀಡಲೋ ಎಂಬಂತೆ! ನನ್ನ ಪಕ್ಕದಲ್ಲಿದ್ದವರು ಗಲಾಟೆ ಮಾಡಲಾಗಿ ಪೂಜಾರಿಗಳೇ ದಾರಿಬಿಟ್ಟರು. ಆದರೆ... ಕೃಷ್ಣದರ್ಶನಕ್ಕೆ ನಿಂತಿದ್ದ ಮಹಿಳೆಯರ ಹಿಂಭಾಗ ಕಾಣಿಸಿತು; ಕೃಷ್ಣ ಕಾಣಲೇ ಇಲ್ಲ! ಅಲ್ಲ ಕನಕನ ಕಿಂಡಿಯಿಂದ ಕೃಷ್ಣ ದರ್ಶನ ಮಾಡಲು ಜನ ನಿಂತಿರುವುದು ಅವರ ನೆನಪಿಗೇ ಬರಲಿಲ್ಲವೇ? ಅಥವಾ ಶೂದ್ರ ಮುಂದೇ ನಕ್ಕೆ ಯಾಕೆ ಕೃಷ್ಣ ದರ್ಶನ ಎಂದೋ ಕನಕನಕಿಂಡಿಯಿಂದ ಕೃಷ್ಣ ದರ್ಶನಕ್ಕೆ ಅವಕಾಶ ಸಿಗಲೇ ಇಲ್ಲ! ಪ್ರತಿನಿತ್ಯವೂ ಇಂತಹ ಅನುಭವ ಜನರಿಗೆ ಆಗುತ್ತಿರಬಹುದು.

ಮತ್ತೆ ಮೀನಿನ ಸಾರು. ಕರಾವಳಿಯಲ್ಲಿ ಅದಕ್ಕೆ ತಾನೇ ಪ್ರಾಶಸ್ತ್ಯ, ಹೇಗಾದರೂ ಮಾಡಿ ಮೀನಿನ ಸಾರು ಊಟ ಮಾಡಲೇಬೇಕು ಅಂತ ಒಂದು ಬಾರ್‌ಗೆ ನುಗ್ಗಿದೆ. ಎಲ್ಲ ಅದಕ್ಕೋಲೆ– 'ಊಟ ಕೊಡಪ್ಪ' ಅಂದೆ. ಮಾಮೂಲಿನಂತೆ ಮಾಣಿಸಾಹಾರದ ಪರದಿ ಒಪ್ಪಿಸಿದ.

'ಮೀನಿನ ಸಾರು ಅನ್ನ ಕೊಡಪ್ಪ' ಅಂದೆ.

ಅದೆಂತೆಂತಹವೋ ಮೀನುಗಳ ಹೆಸರು ಹೇಳಿದ.

'ಜನರೆಲ್ಲ ತಿನ್ನುವ ಮೀನು ಸಾರು ಕೊಡಪ್ಪ'

'ಬಾರ್‌ನಲ್ಲಿ ಎಂತಹ ಜನವ್ರು ಸಾರ್' ಅಂದ ಅವ!



ಹನುಮಂತಯ್ಯ



ಮರೆಯುವ ಮುನ್ನ

ಪಿ. ಲಂಕೇಶ್ –ಜುಲೈ 23, 1989

ನಮ್ಮಲ್ಲಿ ಪುಸ್ತಕ ಬರೆಯುವ ಅನೇಕರು ಬೇರೆಯವರ ಒಳ್ಳೆಯ ಪುಸ್ತಕಗಳನ್ನು ಓದಿರುವುದೇ ಇಲ್ಲ ಎಂಬ ನನ್ನ ನಂಬಿಕೆಯೊಂದಿದೆ. ಕೋಣಂದೂರು ವೆಂಕಪ್ಪ ಎಂಬ ಮನುಷ್ಯ ಬರೆದ ಕೆ. ಹನುಮಂತಯ್ಯನವರ ಬಗೆಗಿನ ಪುಸ್ತಕವನ್ನು ಕಪಾಟನಿಂದ ತೆಗೆದುಕೊಂಡು ತಿರುಗಿಸುತ್ತೇನೆ. ಹನುಮಂತಯ್ಯನವರ ಬದುಕಿನ ವಿವಿಧ ಮುಖಗಳನ್ನು, ಘಟ್ಟಗಳನ್ನು ವರ್ಣಿಸುವುದು ಈ ಪುಸ್ತಕದ ಉದ್ದೇಶ. ಈ ಪುಸ್ತಕಕ್ಕೆ ಪರಿವಿಡಿಯೇ ಇಲ್ಲ, ಬೇರೆಬೇರೆ ಶೀರ್ಷಿಕೆಯ ಅಧ್ಯಾಯಗಳು ಮಾತ್ರ ಇವೆ. ನೀವು ಹುಡುಕುತ್ತ ಹೋಗಿ ಓದಬೇಕು. ಆಮೇಲೆ, ಹನುಮಂತಯ್ಯನವರ ಜೀವನದ ಪ್ರಸಂಗಗಳು ಸಿಕ್ಕದಿದ್ದಾಗಲೆಲ್ಲ ವೆಂಕಪ್ಪನವರ ಭಾಷಣಗಳು!

ಕೆ. ಹನುಮಂತಯ್ಯ ಬಣ್ಣಬಣ್ಣದ ವ್ಯಕ್ತಿತ್ವದ ಮನುಷ್ಯ. ಧೈರ್ಯದ ಸೂಕ್ಷ್ಮತೆಯ ಹನುಮಂತಯ್ಯ ಬೋಳೆಯ, ಆಡಂಬರದ ವ್ಯಕ್ತಿ ಕೂಡ. ಶುದ್ಧಹಸ್ತರಾಗಿದ್ದ ಸ್ವಾಭಿಮಾನದ ಹನುಮಂತಯ್ಯ ದೈವಭಕ್ತಿಯ ಮನುಷ್ಯ. ಸ್ನೇಹದ ಈ ಮನುಷ್ಯ ದುರಹಂಕಾರದ ಮೊಟ್ಟೆ ಕೂಡ. ಇಂಥ ಹನುಮಂತಯ್ಯ ಕಟ್ಟಿದ ವಿಧಾನಸೌಧ ಇವತ್ತು ಕರ್ನಾಟಕದ ಹೆಮ್ಮೆಯ ಕಟ್ಟಡ. ಆದರೆ ಹನುಮಂತಯ್ಯ ಕೇವಲ 75 ಲಕ್ಷಕ್ಕೆ ಬಜೆಟ್ ಹಾಕಿ ಈ ಸೌಧ ಮುಗಿಯುವಷ್ಟರಲ್ಲಿ ಐದು ಕೋಟಿ ಖರ್ಚಾಯಿತು; ಈಗ ಈ ಸುಂದರ, ಭವ್ಯ ಕಟ್ಟಡಕ್ಕೆ ನೂರಾರು ಕೋಟಿ ಆಗಬಹುದು. ಈ ಕಟ್ಟಡದ ಭವ್ಯತೆಯೇ ಹನುಮಂತಯ್ಯನವರನ್ನು ನಾಶಪಡಿಸಿತು. ಅವರಿಗೆ ಆಗದವರು ಇಲ್ಲದ ಭ್ರಷ್ಟಾಚಾರದ ಮಾತಾಡಿದರು; ಆತ್ಮಗೌರವದ ಆ ವ್ಯಕ್ತಿ ತತ್ತರಿಸುವಂತೆ ಮಾಡಿದರು. ನೆಹರೂ ಅವರಿಗೆ ದೂರು ಕೊಟ್ಟರು. ವಿಧಾನಸೌಧ ಪೂರ್ಣಗೊಂಡು ಹನುಮಂತಯ್ಯ ಅದರೊಳಗೆ ಕಾಲಿಡುವಷ್ಟರಲ್ಲಿ ಹನುಮಂತಯ್ಯನವರನ್ನು ಕೆಳಗಿಳಿಸಲಾಯಿತು.

ಆಮೇಲೆ ಹನುಮಂತಯ್ಯ ದಿಲ್ಲಿಗೆ ಹೋಗಿ ಮಂತ್ರಿಯಾದದ್ದು, ಕ್ರಮೇಣ ಪತನಗೊಂಡದ್ದು ಎಲ್ಲರಿಗೂ ಗೊತ್ತಿದೆ. ಅವರಿಗೆ ಗಂಡುಮಕ್ಕಳಿರಲಿಲ್ಲ. ಒಬ್ಬ ಹುಡುಗನನ್ನು ದತ್ತು ತೆಗೆದುಕೊಂಡಿದ್ದರು. ಸಾಯುವ ಮುನ್ನ ಆತನೊಂದಿಗೆ ಕೆಂಗಲ್‌ಗೆ ಹೋಗುವಾಗ ಪೂರ್ತಿ ಎದೆಯೊಡೆದಿದ್ದ ವೃದ್ಧ ಹನುಮಂತಯ್ಯ ಹೇಳಿದರು: "ರಾಜಕೀಯ ಪ್ರವೇಶ ಮಾಡಬೇಡ. ನಾನು ಜನಸೇವೆ ಮಾಡಿದ್ದೇ ಸಾಕು. ಅದು ಕೃತಜ್ಞತೆ ಇಲ್ಲದ ಕ್ಷೇತ್ರ. ನಿನ್ನ ಮಟ್ಟಿಗೆ ದುಡಿದು ಮರ್ಯಾದೆಯಿಂದ ಬಾಳು."

ಇದೇ ಹನುಮಂತಯ್ಯ ಮಹಾ ದೈವಭಕ್ತರಾದ ಹುಂಬರಾಗಿದ್ದರೂ ಎಂದೂ ಮನುಷ್ಯರ ಕಾಲಿಗೆ ಎರಗಿದವರಲ್ಲ. ಆದರೆ ದೈವಭಕ್ತರಿಗೆ ವಿಚಿತ್ರ ಮೂರ್ಖತನ ಕೂಡ ಇರುತ್ತದೆ. ಒಮ್ಮೆ ಈ ಮುಖ್ಯಮಂತ್ರಿ ಹನುಮಂತಯ್ಯ ಶೃಂಗೇರಿಯ ಜಗದ್ಗುರುವನ್ನು ನೋಡಲು ಹೋದರು. ಮರು ಮಾತಾಡದೆ ಜಗದ್ಗುರುವಿನ ಕಾಲಿಗೆರಗಿ ಆ ಗುರುವಿನ ಹಿಂಬಾಲಕರಾದರು. ಇನ್ನೊಮ್ಮೆ ಹನುಮಂತಯ್ಯ ಬೆಂಗಳೂರಿನ ದೇವಸ್ಥಾನವೊಂದಕ್ಕೆ ಹೋಗಿದ್ದರು. ತಮ್ಮ ಬೂಟುಗಳನ್ನು ದೇವಸ್ಥಾನದ ಹೊರಗೆ ಬಿಟ್ಟು ಒಳಗೆ ಹೋಗಿ ಶಾಸ್ತ್ರಿಯೊಬ್ಬನಿಂದ ದೇವರಿಗೆ ಪೂಜೆ ಸಲ್ಲಿಸಿ ಹೊರಗೆ ಬಂದರು. ಏನೆನ್ನಿಸಿತೋ, ಹನುಮಂತಯ್ಯ ಶಾಸ್ತ್ರಿಯನ್ನು ಕೂಗಿ ತನ್ನ ಕಾಲಿಗೆ ಬೂಟು ತೊಡಿಸಲು ಹೇಳಿದರು. ಶಾಸ್ತ್ರಿ ಅವರಿಗೆ ಬೂಟ್ಸ್ ತೊಡಿಸುತ್ತಿದ್ದರೆ ಜನ ದಂಗಾಗಿ ನೋಡುತ್ತಿದ್ದರು!

ಒಂದು ಚುಟುಕ



ಖುಷ್‌ವಂತ್ ಸಿಂಗ್ ನಿಮಗೆಲ್ಲ ಗೊತ್ತು. ಎಪ್ಪತ್ತು ದಾಟಿರುವ ಖುಷ್‌ವಂತ್ ಏನನ್ನು ಬರೆದರೂ ಮನ ಕುಣಿಯುವಂತೆ, ಎದೆ ಕರಗುವಂತೆ ಬರೆಯಬಲ್ಲ ಮನುಷ್ಯ. ಅಷ್ಟೇ ಅಲ್ಲ, ನಿಜಕ್ಕೂ ಜಾತ್ಯತೀತ, ಕಟ್ಟುನಿಟ್ಟಿನ ವ್ಯಕ್ತಿ ಈತ. ಹಿಂದೂಗಳು ಮುಸ್ಲಿಮರು ಒಬ್ಬರನ್ನೊಬ್ಬರು ತಿಳಿದುಕೊಳ್ಳುವುದಕ್ಕೆ ಈತ ಮಾಡಿದಷ್ಟು ಕೆಲಸ ಇನ್ನೊಬ್ಬ ಮಾಡಿರಲಾರ ಈ ಶತಮಾನದಲ್ಲಿ. ಹಾಗೆಯೇ ತನ್ನ ಸಿಖ್ ಜನರ ಬಗ್ಗೆ ಯಾವುದೇ ವ್ಯಾಮೋಹ, ಪೂರ್ವಗ್ರಹವಿಲ್ಲದೆ ಬರೆಯಬಲ್ಲವರು. ತನ್ನ ಮದ್ಯಪಾನದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳಬಲ್ಲ ಖುಷ್‌ವಂತ್ ಒಮ್ಮೆ ಸಿಖ್ ನಾಯಕರ ಸಭೆಯೊಂದರಲ್ಲಿ ಭಾಗವಹಿಸಿದ್ದರು. ಆ ಸಭೆಯ ಉದ್ದೇಶ ಸಿಖ್ಖರಿಗೆ ಮದ್ಯಪಾನದ 'ಅಧರ್ಮ'ದ ಬಗ್ಗೆ, ಅಪಾಯದ ಬಗ್ಗೆ ಮಾತಾಡುವುದು. ಖುಷ್‌ವಂತ್ ಹೇಳಿದ: "ಮಾನ್ಯರೆ, ವೇದಿಕೆಯ ಮೇಲೆ ನನ್ನನ್ನೊಳಗೊಂಡು ಏಳು ಜನರಿದ್ದಾರೆ; ಇವರಲ್ಲಿ ನನ್ನನ್ನೊಳಗೊಂಡು ಆರು ಜನ ನಿತ್ಯ ಕುಡಿಯುವುದು ನನಗೆ ಗೊತ್ತು...."

ಈತ ಈಚೆಗೆ ಜೋಕ್ ಪುಸ್ತಕವೊಂದನ್ನು ಬರೆದಿದ್ದಾರೆ. ಈ ಜೋಕ್ ಸಮಾಚಾರ ನಿಮಗೆ ಗೊತ್ತಿರಲಾರದು–ಈ ಜಗತ್ತಿನಲ್ಲಿ ಒಟ್ಟು ಜೋಕ್‌ಗಳು ಇಪ್ಪತ್ತೊ ಇಪ್ಪತ್ತೈದೋ ಇರಬಹುದು. ಅವುಗಳ ವಿವಿಧ ರೂಪವೇ ಸಾವಿರಾರು ಜೋಕ್‌ಗಳು. ಆದರೆ ಖುಷ್‌ವಂತ್ ಭಾರತದ ಕೆಲವು 'ಅಸಲಿ' ಜೋಕ್‌ಗಳನ್ನು, ಪ್ರಸಂಗಗಳನ್ನು ಸೇರಿಸಿ ಈ ಪುಸ್ತಕ ತಯಾರಿಸಿದ್ದಾರೆ. ಭಾರತದಲ್ಲಿ ಅನೇಕ ವೃತ್ತ ಪತ್ರಿಕೆಗಳ ತಾತ್ಸಾರ, ಟೀಕೆಗೆ ಒಳಗಾಗಿರುವ ಈ ಪುಸ್ತಕ ನನ್ನ ಪ್ರಕಾರ ತುಂಬ ಚೆನ್ನಾಗಿದೆ. ಕನಿಷ್ಠ ಐವತ್ತು ಜೋಕ್‌ಗಳು ಅಪರಂಜಿಯಂತಿವೆ. ಒಂದನ್ನು ಕೊಡುತ್ತಿದ್ದೇನೆ:

ಒಂದಾನೊಂದು ಕಾಲದಲ್ಲಿ ಒಬ್ಬ ನವಾಬನಿದ್ದ. ಅವನಿಗೆ ತರಕಾರಿ ತೋಟಗಳು ಮತ್ತು ಆಸ್ಥಾನದ ಗೆಳೆಯರೆಂದರೆ ಪಂಚಪ್ರಾಣ. ಒಂದು ದಿನ ಈ ನವಾಬ ತನ್ನ ತರಕಾರಿ ತೋಟದ ಬದನೇಕಾಯಿ ಗಿಡಗಳ ನಡುವೆ ಕೂತು ಸುತ್ತ ನೋಡಿ ಆನಂದಭರಿತನಾಗಿ ಹೇಳಿದ: "ಮಿತ್ರರೆ, ಈ ಬದನೇಕಾಯಿ ಎಂಥ ಶ್ರೇಷ್ಠ ತರಕಾರಿ! ಎಂಥ ಸುಂದರ ಆಕಾರ! ಎಷ್ಟು ನಯವಾಗಿದೆ, ಎಷ್ಟು ಸುಂದರ ಬಣ್ಣ!"

"ಆಹಾ! ಇಡೀ ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠವಾದ, ಸುಂದರವಾದ ತರಕಾರಿ ಬದನೇಕಾಯಿ!" ಎಂದು ಆಸ್ಥಾನದ ಮಿತ್ರರು ಹೇಳಿದರು.

"ಆದರೆ ಈ ಬದನೇಕಾಯಿ ಅಷ್ಟು ರುಚಿಯಾಗಿರುವುದಿಲ್ಲ, ಅಲ್ಲದೆ ವೈದ್ಯರ ಪ್ರಕಾರ ಇದರಲ್ಲಿ ಅಂಥ ಸತ್ವ ಕೂಡ ಇರುವುದಿಲ್ಲ" ಅಂದ ನವಾಬ.

"ಸ್ವಾಮಿ, ಸರಿಯಾದ ಮಾತು, ಆಹಾರವಾಗಿ ಬದನೇಕಾಯಿ ತೀರಾ ಕೆಟ್ಟದು, ಅದನ್ನು ತಿನ್ನುವುದಕ್ಕಿಂತ ವಿಷ ತಿನ್ನುವುದು ಮೇಲು!" ಅಂದರು ಆಸ್ಥಾನಿಕರು.

ನವಾಬ ಹೇಳಿದ, "ಅಲ್ರೀ, ನಾನು ಬದನೇಕಾಯಿಯನ್ನು ಹೊಗಳಿದರೆ ಹೊಗಳಿ ಅಟ್ಟಕೇರಿಸ್ತೀರಿ, ಟೀಕಿಸಿದರೆ ಬೈದು ತಿರಸ್ಕರಿಸ್ತೀರಿ–ಏನು ನಿಮ್ಮ ಮಾತಿನ ಅರ್ಥ?"

ಅದಕ್ಕೆ ಆಸ್ಥಾನಿಕರು ತಲೆಬಾಗಿ ವಿನಮ್ರವಾಗಿ ಹೇಳಿದರು, "ಸ್ವಾಮಿ, ನಾವು ತಿನ್ನುತ್ತಿರೋದು ನಿಮ್ಮ ಉಪ್ಪು, ಬದನೇಕಾಯಿಯದಲ್ಲ!"



ಪ್ರವೀಣ್ ಎಸ್. ಶೆಟ್ಟಿ

ಮೊಟ್ಟೆ ಇಡುವ ಜೀವಿಗಳೇ ಇದ್ದಿದ್ದು ಕೋಟ್ಯಾಂತರ ವರ್ಷ,
ಸಸ್ತನಿಗಳು ಹುಟ್ಟಿ ಆಗಿದ್ದು ಕೇವಲ 10 ಲಕ್ಷ ವರ್ಷ,
ಎನ್ನುತ್ತಾನೆ ಪ್ರಾಣಿಶಾಸ್ತ್ರಜ್ಞ

ಮಾನವ-ವಾನರ ಹುಟ್ಟಿ ಆಗಿದ್ದು 2 ಲಕ್ಷ ವರ್ಷ
ಎನ್ನುತ್ತಾನೆ ಜೀವವಿಜ್ಞಾನಿ
ರಾಮಸೇತುವೆ 17 ಲಕ್ಷ ವರ್ಷ ಹಳೆಯದು
ಎನ್ನುತ್ತಾನೆ ನಾಸಾ ವಿಜ್ಞಾನಿ
ಆಗ ಡಾಯ್‌ನೊಸೊರ್‌ಗಳು ನಡೆದಾಡಿರಬಹುದು
ಈ ಸೇತುವೆ ಮೇಲೆ ಎನ್ನುತ್ತಾನೆ ಪಳೆಯುಳಿಕೆ ತಜ್ಞ
ರಾಮಾಯಣ ನಡೆದಿದ್ದು ಐದು ಸಾವಿರ ವರ್ಷಗಳಿಂದೀಚೆಗೆ
ಎನ್ನುತ್ತಾನೆ ಇತಿಹಾಸ ತಜ್ಞ
ಆದರೂ ಎಲ್ಲವೂ ತನ್ನದೆನ್ನುತ್ತಾನೆ ಮಾನವ ಪ್ರಾಣಿ
ರಾಮಸೇತು ತನ್ನವರೇ ಕಟ್ಟಿಸಿದ್ದು ಎನ್ನುತ್ತಾನೆ ಅಜ್ಞಾನಿ

ಪೃಥ್ವಿಗ್ರಹವುಂಟಾಗಿ 650 ಕೋಟಿ ವರ್ಷಗಳಾದವು
ಎನ್ನುತ್ತಾನೆ ಭೂ ವಿಜ್ಞಾನಿ
ಆದರೂ ದೇವರು ಅನಾದಿ ಎನ್ನುತ್ತಾನೆ ತ್ರಿಕಾಲಜ್ಞಾನಿ
ಅವನದೇ ರೂಪ ನಮಗೆನ್ನುತ್ತಾನೆ ವೇದಜ್ಞಾನಿ
ಭೂಮಿ ಚಪ್ಪಟೆ ಎನ್ನುತ್ತಾರೆ ಜಗತ್ತಿನ ಪ್ರವಾದಿಗಳೆಲ್ಲಾ
ಸೂರ್ಯನೇ ಭೂಮಿ ಸುತ್ತುತ್ತಾನೆ ಎನ್ನುತ್ತಾರೆ ಜ್ಯೋತಿಷಿಗಳೆಲ್ಲ

649 ಕೋಟಿ ವರ್ಷ ಭಗವಂತ ವಿಳಂಬಿಸಿದ್ದೇಕೆ
ತನ್ನದೇ ರೂಪದ ಮಾನವರ ಹುಟ್ಟಿಸಲು
ಅವರಿಗಾಗಿ ನೂರಾರು ಧರ್ಮ ಸ್ಥಾಪಿಸಿ ಇತ್ತೀಚೆಗೆ
ಬಿಟ್ಟುಹೋಗಿದ್ದೇಕೆ ಅವರಲ್ಲೇ ಬಡಿದಾಡಿಸಲು
ನಿಜವಾಗಿ ಇದ್ದಿದ್ದೇ ಆಗಿದ್ದರೆ ಆ ಸರ್ವಶಕ್ತ

ಸೆಕ್ಯುಲರ್ ಬೈಯ್ಗುಳ ಬೇಕಾ?

ಮೊನ್ನೆ ನಮ್ಮ ಕಚೇರಿಗೆ ಒಂದು ಪತ್ರ ಬಂತು. ಅಖಿಲ ಕರ್ನಾಟಕ ಡೊಂಬರ ಹಿತವರ್ಧಕ ಸಂಘದವರು ಬರೆದಿದ್ದ ಪತ್ರ ಅದು. ಈ ಸಂಘದ ಅಧ್ಯಕ್ಷ ಬಿ.ಎಂ. ಕೌಜಲಗಿ ಹಾಗೂ ಕಾರ್ಯದರ್ಶಿ ವಿ.ರಾ. ಡೊಂಬರ ಬರೆದಿರುವ ಈ ಪತ್ರ ತುಂಬಾ ಗಂಭೀರವಾಗಿಯೂ ನಾವೆಲ್ಲಾ ಯೋಚಿಸುವಂತೆಯೂ ಇದೆ. ಮಾಧ್ಯಮಗಳಲ್ಲಿ ಜಾತಿನಿಂದನೆಯ ಪದಗಳನ್ನು ಬಳಸುತ್ತಿರುವ ಬಗ್ಗೆ ಪ್ರಸ್ತಾಪಿಸಿದ್ದ ಅವರು ನವೆಂಬರ್ 22 ರ ವಿಜಯ ಕರ್ನಾಟಕ ಮುಖಪುಟದಲ್ಲಿ 'ಡೊಂಬರಾಟಕ್ಕೆ ತೆರೆ'



ಎಂದು ಹೆಡ್ಡಿಂಗ್ ನೀಡಿದ್ದನ್ನು ಪ್ರಸ್ತಾಪಿಸಿ ಆಕ್ಷೇಪಿಸಿದ್ದರು.

ಜಾತಿಸೂಚಕ ಬೈಯ್ಗುಳಗಳು ನಮ್ಮಲ್ಲಿ ರಾಶಿರಾಶಿ ಇವೆ. ಒಡ್ಡ, ಕೊರಮ, ಚಂಡಾಳ, ಹಜಾಮ ಇವು ಏಕಕಾಲದಲ್ಲಿ ಜಾತಿ ಸೂಚಕವೂ ಹಾಗೂ ಬೈಯ್ಗುಳಗಳಾಗಿಯೂ ನಮ್ಮಲ್ಲಿ ಬಳಕೆಯಲ್ಲಿವೆ. ಇವನ್ನೆಲ್ಲಾ ಬೈಯ್ಗುಳಗಳಾಗಿ ಬಳಸಕೂಡದೆಂಬುದು ಸರಿ. ಆದರೆ ಡೊಂಬರಾಟದ ಪತ್ರ ಬಂದಾಗ ಅದೇ ನಿಲುವು ತಳೆಯಬಹುದಾ?

ನಾನೀ ಪ್ರಶ್ನೆಯನ್ನು ಸಂಪಾದಕಿ ಗೌರಿಗೂ, ಅಂಕಣಕಾರ ಶಿವಸುಂದರ್‌ಗೂ ಕೇಳಿದೆ.

ಗೌರಿ ಹೇಳಿದ್ದಿಷ್ಟು:

"ಯಾರನ್ನೇ ಆಗಲಿ **hurt** ಮಾಡುವ ಬಯ್ಗುಳ ಬಳಸಬಾರದು, ಇನ್ನು ಮೇಲೆ 'ಲಂಕೇಶ್'ನಲ್ಲೂ ರಾಜಕಾರಣಿಗಳ ವಕ್ರ ನಡವಳಿಕೆ ಬಗ್ಗೆ ಬರೆಯುವಾಗ ಡೊಂಬರಾಟ ಅಂತ ಬರೆಯುವುದು ಬೇಡ. ಆದ್ರೆ ಈಗಿನ ರಾಜಕೀಯ ಸಂದರ್ಭದಲ್ಲಿ ಡೊಂಬರಾಟ ಅಂತ ಬರೆದಿದ್ರೆ ಅದು ಡೊಂಬ ಜಾತಿಯ ಕುರಿತ ಗೇಲಿ ಅನ್ನಿಸೋಲ್ಲ ಅಲ್ಲವಾ?"

ಅದಕ್ಕೆ ನಾನು "ಈ ಡೊಂಬರಾಟ ಪದಕ್ಕೆ ಈಗ ಎರಡು ರೋಲ್ ಇದೆ ಅನ್ನಿಸುತ್ತೆ. ಒಂದು ನಾವು ರಾಜಕಾರಣಿಗಳ ಡೊಂಬರಾಟ ಅನ್ನುವಾಗ ಗೇಲಿ, ಅಸಹನೆ ಇರುತ್ತೆ. ಇನ್ನೊಂದು ಸಂತೆ, ಜಾತ್ರೆಗಳಲ್ಲಿ ಡೊಂಬ ಜನಾಂಗದ ಚಮತ್ಕಾರದ ಆಟ ನೋಡುವಾಗ ನಾವು ಮೆಚ್ಚಿ ಚಿರಗಾಗಿ ದುಡ್ಡು ಕೊಟ್ಟು ಹುರಿದುಂಬಿಸುತ್ತೇವೆ. ನಾವು ಕೊರಮ, ಹಜಾಮ ಪದವನ್ನು ಬೈಯ್ಗುಳವಾಗಿ ಬಳಸಬಾರದು ಸರಿ. ಆದರೆ ಡೊಂಬರಾಟ ತರಹದ್ದನ್ನು ಕೈಬಿಟ್ಟರೆ ಒಂದು ಭಾಷೆಯ ಸೊಗಡು ಕಡಿಮೆಯಾಗೋಲ್ಲವಾ?' ಅಂದೆ.

ಇದಕ್ಕೆ ಶಿವಸುಂದರ್ ಹೇಳಿದ್ದು ಇನ್ನೂ ಸ್ವಾರಸ್ಯಕರವಾಗಿತ್ತು.

"ಯಾವುದೇ ಒಂದು ಬೈಯ್ಗುಳದ ಪದ ನಿಶ್ಪತ್ತಿ ಹಾಗೂ ಪುನರುತ್ಪತ್ತಿ ಮೇಲೆ ಆಯಾ ಸಮಾಜದ ಶ್ರೇಣೀಕರಣದ ಪ್ರಭಾವವೂ ಇರುತ್ತೆ. ನಮ್ಮಲ್ಲಿ ಮೇಲ್ಜಾತಿ ಬ್ರಾಹ್ಮಣರನ್ನು ಬೈಯ್ಗುಳವಾಗಿ ಬಳಸುವ ಅಭ್ಯಾಸವೇ ಬಂದಿಲ್ಲ. ಹಾಗಿರುವಾಗ ಕೆಳಜಾತಿಯವರ ಅಸ್ತಿತ್ವವಾಗಿರುವ ಬದುಕಿನ ಕ್ರಮವೇ ಬೈಯ್ಗುಳವಾಗಿ ಬಿಡುವುದು ರೋಗಗ್ರಸ್ತ ಸಮಾಜದ ಲಕ್ಷಣ" ಎಂಬಿತ್ಯಾದಿ ವಾದಿಸಿದರು.

ಪಶ್ಚಿಮ ದೇಶಗಳಲ್ಲಿ ಜಾತಿ ತಾರತಮ್ಯ ಇಲ್ಲವಾದರೂ ಸಾಮಾಜಿಕ ತಾರತಮ್ಯ ವಿರೋಧಿಸಿ, ಅಂತಹ ಪದ ಬಳಕೆ ಬಗ್ಗೆಯೂ ಜಗಳಗಳಾಗುತ್ತಿವೆ. ಉದಾಹರಣೆಗೆ ಒಬ್ಬರನ್ನು ಕುಳ್ಳ, **shortie** ಅನ್ನ ಕೂಡದು, **vertically challenged** (ಎತ್ತರ ಬೆಳೆಯುವುದರಲ್ಲಿ ಅಡೆತಡೆ ಕಂಡವರು ಅನ್ನಬಹುದಾ?) ಅನ್ನಿ, ಕ್ರಿಮಿನಲ್ ಬದಲು **behaviourly challenged** ಅನ್ನಬೇಕು... ಎಂಬ ವಾದ ಹುಟ್ಟಿಕೊಂಡಿದೆ. **Politically correct** ಆಗಿರುವ ಪದ ಬಳಸಿ ಎಂಬ ವಾದಿಗಳಿವರು.

ಅದಿರಲಿ,

ನಮ್ಮ ಚರ್ಚೆ ಮುಗಿದು ಕೊನೆಗೆ ಒಂದು ಏಕಾಭಿಪ್ರಾಯಕ್ಕೆ ಬಂದಿದ್ದೇವೆ. ನಮಗೆ ಬೈಯ್ಗುಳಗಳಂತೂ ಬೇಕೇಬೇಕು ತಾನೆ. ಡೊಂಬ, ಕೊರಮ ಅಂತ ಬೈಯ್ದು ಯಾರನ್ನಾದರೂ ನೋಯಿಸುವುದು ಖಂಡಿತ ತಪ್ಪು, ಹಾಗಾಗಿ ಯಾವ ಜಾತಿ ಜನಾಂಗಕ್ಕೂ **hurt** ಆಗದಂತಹ ಹೊಸ ಸೆಕ್ಯುಲರ್ ಬೈಯ್ಗುಳಗಳನ್ನು ಕಂಡುಹಿಡಿಯುವುದೇ ಇದಕ್ಕೆ ಪರಿಹಾರ ಅಂತ.

ಶಿವಸುಂದರ್ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆಯ ವಿದ್ಯಾರ್ಥಿಯಂತೆ ಒಂದು ಹೊಸ ಬೈಯ್ಗುಳ ಕಂಡು ಹಿಡಿದೇಬಿಟ್ಟರು.

ಅದು ಸುಳ್ಳು, ಕಿತಾಪತಿ ಮಾಡೋರಿಗೆ ಇನ್ನು ಮುಂದೆ 'ಚಿಮೂ ಥರ ಆಡ್ತಾನೆ' ಅನ್ನಬಹುದಂತೆ.

ಸೆಕ್ಯುಲರ್ ವಾದಿಗಳೇ ಇನ್ನಷ್ಟು ಯೋಚಿಸಿ. ಕೋಮು ಸಾಮರಸ್ಯ, ಸಮಾನತೆ, ಪ್ರಗತಿಪರ ಆಶಯಗಳ ಬಗ್ಗೆ ಯೋಚಿಸುವ ಜೊತೆಗೆ ಈಗ ಸೆಕ್ಯುಲರ್ ಬೈಯ್ಗುಳಗಳನ್ನು ನೀವೇ ಕಂಡುಹಿಡಿಯಬೇಕಾಗಿ ಬಂದಿದೆ!

ಹೈದರ್-ಒಡೆಯರ್ ಮೀಸೆ ಜಗಳ

ಬಿಡಿ ಚಿತ್ರಗಳು
● ಪಾರ್ವತೀಶ ●

ಮಾಸ್ತಿಯವರ 'ಚೆನ್ನಬಸವ ನಾಯಕ' ಕಾದಂಬರಿಯಲ್ಲಿ ಬರುವ ಒಂದು ಪ್ರಸಂಗ ಹೀಗಿದೆ. ಇದು ನಡೆದ ಘಟನೆಯೂ ಹೌದು.

ಹೈದರಾಲಿ ನಿಮಗೆ ಗೊತ್ತು.

ಐದು ವರಹ ಸಂಬಳದ ಮೇಲೆ ಸಾಧಾರಣ ಸೈನಿಕನಾಗಿ ಮೈಸೂರು ಸೈನ್ಯ ಸೇರಿದವನು ತನ್ನ ಧೈರ್ಯ, ಚಾಕಚಕ್ಯತೆ, ಸಾಹಸಗಳಿಂದ ಮೇಲೇರಿ ಕೊನೆಗೆ ಇಡೀ ರಾಜ್ಯವನ್ನೇ ಕಂಟ್ರೋಲಿನಲ್ಲಿಟ್ಟುಕೊಳ್ಳುವಷ್ಟರ ಎತ್ತರಕ್ಕೆ ಬೆಳೆದವನು ಹೈದರ್. ಆಗ ಕೃಷ್ಣರಾಜ ಒಡೆಯರ್ ಏನಿದ್ದರೂ ನಾಮಕಾವಸ್ತೆ ರಾಜ ಅಷ್ಟೆ. ಹೀಗಿರುವಾಗ ಒಂದು ದಿನ ಈ ಹೈದರ್ ಅರಸ ಕೃಷ್ಣರಾಜನ ಭೇಟಿಗೆ ಬರುತ್ತಾನೆ. ಮಾತಿನ ನಡುವೆ ಹೈದರ್ ತನ್ನ ಮೀಸೆ ಸವರಿಕೊಂಡು ಬಿಡುತ್ತಾನೆ! ಹೀಗೆ ಅರಸನ ಎದುರು ಅಧೀನ ನೌಕರನೊಬ್ಬ ಮೀಸೆ ತೀಡಿಕೊಳ್ಳುವುದೆಂದರೆ ತಮಾಷೆಯೆ? ಕೃಷ್ಣ ಒಡೆಯರ್‌ಗೆ ರುಮ್ಮನೆ ಕೋಪ ಬರುತ್ತದೆ. ಅವರು "ಏನೋ ಹೈದರ್, ನಮ್ಮ ಎದುರಿಗೆ ಮೀಸೆ ತೀಡುತೀಯಾ?" ಎಂದು ಗದರುತ್ತಾರೆ.



ಹೈದರಾಲಿ

ಹೈದರಾಲಿ ಇದಕ್ಕೆ ಹೆದರದೆ ಬಹಳ ಮಜಾ ಅನ್ನಿಸುವಂಥ ಉತ್ತರ ಕೊಡುತ್ತಾನೆ. ನೆಲಕ್ಕೆ ತನ್ನ ಹಣೆ ಮುಟ್ಟಿಸಿ "ಖಾವಿಂದ್, ಮಾಫ್ ಮಾಡಬೇಕು. ಧಣಿಗಳು ಈ ಗುಲಾಮನಿಗೆ ಹಾಕೋ ಅನ್ನದಲ್ಲಿ ತುಪ್ಪ ಹೆಚ್ಚಾಯಿತು. ಅದು ತೊಳಕೊಂಡರೆ ಹೋಗಲಿಲ್ಲ, ಅದಕ್ಕೆ ಮೀಸೆಗೆ ಒರೆಸಿಕೊಂಡೆ. ನಾನು ಸನ್ನಿಧಾನಕ್ಕೆ ಐದು ಹಣಕ್ಕೆ ಬಂದ ನೌಕರ. ಈಗಲೂ ನನ್ನ ತಲಬು ಐದು ಹಣ ಮಹಾಸ್ವಾಮಿ. ಉಳಿದದ್ದೆಲ್ಲಾ ನೀವು ನನ್ನ ಮೇಲೆ ಸುರೀತಿರೊ ಕರುಣೆ" ಎಂದುಬಿಡುತ್ತಾನೆ.



ಈ ಪ್ರತ್ಯುತ್ತರದ ಒಳಗೆ ವಿಧೇಯತೆ ಇದೆ. ಅದನ್ನು ಮೀರುವ ವ್ಯಂಗ್ಯ ಕುಚೋದ್ಯವೂ ಇದೆ.

ಅಪ್ರತಿಮ ಯೋಧನಾದವನು ಕೇವಲ ಅಲಂಕಾರದ ಅರಸನೆದುರು ತಗ್ಗಿಬಗ್ಗಿ ನಡೆಯಬೇಕಾಗಿ ಬಂದಾಗ ಇಂಥ ಹೊಸ ದಾರಿ ಹುಡುಕಿ ಕೊಳ್ಳುತ್ತಾನೆ. ಚತುರ ಮಾತು ಅದರಲ್ಲೊಂದು.

ಯುದ್ಧವನ್ನೇ ಕಂಡರಿಯದ ಅರಸನೊಬ್ಬ, ಯುದ್ಧ ಭೂಮಿಯಲ್ಲೇ ಜೀವನ ಕಳೆದ ಅಧೀನ ಯೋಧ ಇನ್ನೊಬ್ಬ, ಇವರ ನಡುವೆ **ego clash** ಬಂದಿದ್ದು, ಹೈದರ್ ತನ್ನತನ ಬಿಟ್ಟುಕೊಡದೆ ಅರಸನ ಬಾಯಿ ಮುಚ್ಚಿಸಿದ್ದು ಸೋಜಿಗ ಹುಟ್ಟಿಸುತ್ತದೆ.

ವೈಕುಂಠಯಾತ್ರೆನೋ ಕೈಲಾಸವಾಸಾನೊ?

ಬೆಂಗಳೂರಿನ ಕೆಲ ಶ್ರೀಮಂತರು ನಗರಪಾಲಿಕೆಗೆ ಶವ ಸಾಗಿಸುವ ವಾಹನಗಳನ್ನು ದಾನ ನೀಡಿದ್ದಾರೆ. ಕಾರ್ಪೋರೇಷನ್ನಿನ ಈಗಿರುವ ವೆಹಿಕಲ್‌ಗಳನ್ನು ನೋಡಿದರೆ ಸಾಕು ಜಿಗುಪ್ಸೆ ಬರುವಂತಿರುತ್ತದೆ. ಬಣ್ಣವಿರದ, ಮೈಯೆಲ್ಲಾ ಕಿತ್ತುಹೋದ ಲಡಾಸು ವಾಹನಗಳವು. ಅವುಗಳ ಎದುರು ಖಾಸಗಿ ದಾನಿಗಳ ಈ ಹೊಸ ವಾಹನಗಳು ಅಚ್ಚುಕಟ್ಟಾಗಿ ಕಾಣುತ್ತವೆ. ಆ ಕಾರಣಕ್ಕಾಗಿ ದಾನಿಗಳಿಗೆ ನಾವು ಥ್ಯಾಂಕ್ಸ್ ಹೇಳಬೇಕು.

ಗಾಂಧಿಬಜಾರಿನ ರೋಟಿಘರ್ ಹೋಟೆಲ್‌ನವರು ನೀಡಿರುವ ಮೂರು ಟೆಂಪೋ ಟ್ರಾವಲರ್ ವಾಹನಗಳ ಮೇಲೆ 'ವೈಕುಂಠ ಯಾತ್ರೆ' ಅಂತ ಬರೆಸಿಕೊಟ್ಟಿದ್ದಾರೆ. ಬಹುಶಃ ದಾನಿಗಳು ಬ್ರಾಹ್ಮಣರಾಗಿರುವುದೇ ಇದಕ್ಕೆ ಕಾರಣವಿರಬೇಕು. ಆದರೆ ಸಮಸ್ಯೆ ಏನೆಂದರೆ ಈ ಶವ ವಾಹನಗಳನ್ನು ಬೆಂಗಳೂರಿನ ಸಕಲೆಂಟು ಜಾತಿಯವರೂ ಬಳಸುತ್ತಾರೆ. ಅವರಲ್ಲಿ ಸತ್ತು ವೈಕುಂಠಕ್ಕೆ ಹೋಗುವವರು, ಕೈಲಾಸವಾಸಿಗಳಾಗಲಿರುವವರು, ಅಲ್ಲಾಹ್, ಕ್ರಿಸ್ತನ ಪಾದ ಸೇರುವವರು ಇರುತ್ತಾರಲ್ಲವೆ. ಹಾಗಿರುವಾಗ ಈ ದಾನಿಗಳು ತಮ್ಮ ಜಾತಿ, ಧರ್ಮದ ನಂಬಿಕೆಯ ಪರಲೋಕವನ್ನು ಶವವಾಹನದ ಮೇಲೆ ಬರೆಸುವ ಅಗತ್ಯವಿತ್ತೆ?

ನಮ್ಮ ಹಿರಿಯರು ದಾನ ಅಂದರೆ ಬಲಗೈಲಿ ಕೊಟ್ಟಿದ್ದು ಎಡಗೈಗೆ ಗೊತ್ತಾಗಬಾರದು ಎಂದು ಆಶಿಸುತ್ತಿದ್ದರು. ಆದರೆ ಈಗ ನಮ್ಮ ನಡುವೆ ದಾನದ ಮೂಲಕ ತಮ್ಮ ವೈಯಕ್ತಿಕ ನಂಬಿಕೆಯನ್ನು ಅನ್ಯರ ಮೇಲೆ ಹೇರಲು ಸಂಕೋಚಪಡದ ಅಸೂಕ್ಷ್ಮಮತಿಗಳಿದ್ದಾರೆ.

ನಗರಪಾಲಿಕೆ ಇದನ್ನು ಸರಿಪಡಿಸಲಿ.

ಸಫಾಯಿ ಕರ್ಮಚಾರಿಗಳಿಗೆ ನ್ಯಾಯ ಎಂದು?

ಬೆಂಗಳೂರು ಕಸದಗುಂಡಿಯಾಗುತ್ತಿರುವುದು ಎಲ್ಲಾ ನಾಗರಿಕ ಜನರಿಗೂ ಗೊತ್ತಿರುವ ವಿಷಯವೆ. ಆದರೆ ಇದಕ್ಕೆ ನಿಜವಾದ ಕಾರಣವನ್ನು ಯಾರೂ ಹೇಳುತ್ತಿಲ್ಲ. ಇದಕ್ಕೆ ನಿಜವಾದ ಕಾರಣವೆಂದರೆ ಬೆಂಗಳೂರು ನಗರ ಸಭೆ ಆಡಳಿತದವರು ತಮ್ಮ ಆಡಳಿತದ ಅಂಕಿತದಲ್ಲಿರುವ ಬಡ ನೌಕರರನ್ನು ಸರಿಯಾಗಿ ನೋಡಿಕೊಳ್ಳದೆ ಅವರನ್ನು ಶೋಷಿಸುತ್ತಿರುವುದು. ಬೀದಿ ಗುಡಿಸುವವರಿಂದ ಹಿಡಿದು ಚರಂಡಿ ಸ್ವಚ್ಛಗೊಳಿಸುವ ಬಹುತೇಕ ಕೆಳವರ್ಗಕ್ಕೆ ಸೇರಿದ ಈ ಜನರನ್ನು ನಿರ್ಲಕ್ಷಿಸಿ ಅವರಿಗೆ ಅವರ ಶ್ರಮಕ್ಕೆ ತಕ್ಕದಾದ ವೇತನವನ್ನು ಕೊಡುತ್ತಿಲ್ಲ. ಅಷ್ಟೇ ಅಲ್ಲದೆ ಅವರ ಆರೋಗ್ಯಕ್ಕೆ ಅಪಾಯ ತರುವಂತಹ ಕೆಲಸಗಳನ್ನು ಮಾಡಿಸುವಾಗ ಅವರಿಗೆ ಸರಿಯಾದ ರಕ್ಷಣೆ ವ್ಯವಸ್ಥೆ ಒದಗಿಸದೆ ಅವರನ್ನು ಶೋಷಿಸಲಾಗುತ್ತಿದೆ.

ಅದರಲ್ಲೂ ಇತ್ತೀಚೆಗೆ ಈ ಸ್ವಚ್ಛತೆಯ ಕೆಲಸವನ್ನು ಮಾಡುವವರನ್ನು ಪುರಸಭೆಯವರು ಕಾಂಟ್ರ್ಯಾಕ್ಟ್ ಕೆಲಸಗಾರರನ್ನಾಗಿ ಪರಿವರ್ತಿಸಿ ಅವರಿಗೆ ಬಹಳ ಕಡಿಮೆ ವೇತನವನ್ನು (ಅಂದರೆ ಮಾಸಕ್ಕೆ 2000 ರೂ ಗಳಿಂದ 2500 ರೂ.ಗಳವರೆಗೆ) ನೀಡಿ ಅವರಿಂದ ಹೆಚ್ಚು ಕೆಲಸವನ್ನು ಪಡೆಯಲು ಯತ್ನಿಸುತ್ತಿದ್ದಾರೆ. ಇನ್ನಾದರೂ ಬೆಂಗಳೂರು ಪುರಸಭೆಯ ಆಡಳಿತ ಮಂಡಳಿಯವರೂ ಹಾಗೂ ನಾಗರಿಕ ಸಮಾಜದವರು ಈ ಬಡಜನರ ಕಡೆ ಗಮನಹರಿಸಿ ಅವರ ಕಷ್ಟಕ್ಕೆ, ಶ್ರಮಕ್ಕೆ ಪ್ರತಿಫಲ ಸಿಕ್ಕುವ ಹಾಗೆ ನಿಗಾ ವಹಿಸಬೇಕಿದೆ.

-ಒಬ್ಬ ನಾಗರಿಕ

ಈ ವಾರದ ಸಂಪಾದಕೀಯ 'ಒಂದು ನದಿಯ ಬೆಲೆ ಎಷ್ಟು' ಪ್ರತಿಯೊಬ್ಬ ಕನ್ನಡಿಗನನ್ನು ಬೆಚ್ಚಿಬೀಳಿಸುವಂತಿತ್ತು. ಇಂದು ಎಲ್ಲವೂ ಖಾಸಗೀಕರಣಗೊಂಡು ನಮ್ಮ ದೇಶವೇ ವಿದೇಶಿಯರ ಪಾಲಾಗುತ್ತೇನೊ ಎಂಬ ಭಯ ಆವರಿಸುತ್ತಿದೆ. ನಮ್ಮ ನೆಲಮಂಗಲದಿಂದ ಕ್ಯಾತ್ಸಂದ್ರದ ತನಕ ಇರುವ ನಲವತ್ತು ಕಿಲೋ ಮೀಟರ್ ರಸ್ತೆಯನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಖಾಸಗೀಕರಣದ ಅಸಲಿ ರೂಪ ಅರ್ಥವಾಗುತ್ತದೆ. ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುವ ಈ ರಸ್ತೆಯನ್ನೇ ಖಾಸಗಿಯವರಿಗೆ ಗುತ್ತಿಗೆ ಮೇಲೆ ನೀಡಲಾಗಿದೆ. ಆ ಗುತ್ತಿಗೆ ಅವಧಿ ಮುಗಿಯುವುದರೊಳಗೆ ಖಾಸಗಿಯವರು ಕೋಟ್ಯಂತರ ರೂಪಾಯಿಗಳ ಆದಾಯ ಪಡೆದಿರುತ್ತಾನೆ.



ಇವತ್ತು ಗಣಿಗಾರಿಕೆ ದಂಧೆ ನಮ್ಮ ಪರಿಸರವನ್ನೇ ನಾಶ ಮಾಡುತ್ತಿದೆ. ಅದೇ ಸಮಯದಲ್ಲಿ ನಮ್ಮ ನೈಸರ್ಗಿಕ ಸಂಪತ್ತುಗಳಾದ ನದಿಗಳನ್ನೂ ಖಾಸಗೀಕರಿಸುತ್ತೇವೆಂದರೆ ನಾವು ನಮ್ಮ ಮುಂದಿನ ಪೀಳಿಗೆಗೆ ಬಿಟ್ಟುಕೊಡಲಿಕ್ಕಾದರೂ ಏನು ಉಳಿದಿರುತ್ತದೆ?

ಪ್ರಜ್ಞಾವಂತರೆಲ್ಲ ಎಚ್ಚೆತ್ತುಕೊಳ್ಳಬೇಕಾಗಿದೆ. ನಮ್ಮ ನೈಸರ್ಗಿಕ ಸಂಪತ್ತು ಮಾರಾಟವಾಗದಂತೆ ತಡೆಯುವುದು ಮತ್ತು ನಮ್ಮ ಪರಿಸರವನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕಿದೆ. ಇಲ್ಲವೆಂದರೆ ನಾಳೆ ನಮ್ಮ ಮಕ್ಕಳೇ ನಮ್ಮನ್ನು ಕರ್ತವ್ಯಭ್ರಷ್ಟರೆಂದು ಆರೋಪಿಸುತ್ತಾರೆ.

-ಸಿ. ಶಿವಕುಮಾರ್, ಚಿನಿವಾರನಹಳ್ಳಿ

ತೆಗಳಿಕೆ
ಹೊಗಳಿಕೆ

"ಬಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯ ಶಿವ!" ಎಂದು ಕುವೆಂಪುರವರು ಕನ್ನಡಿಗರಿಗೆ ಕರೆ ನೀಡಿದ್ದರು. "ನೀ ಮುಟ್ಟುವ ಮರ ಶ್ರೀಗಂಧ, ನೀ ಕುಡಿಯುವ ನೀರು ಕಾವೇರಿ, ನೀನೇರುವ ಪರ್ವತ ಸಹ್ಯಾದ್ರಿ" ಎಂದೂ ಅವರು ಹೇಳಿದ್ದರು. ಆದರೆ ಈಗ ನಮ್ಮ ಭ್ರಷ್ಟ ರಾಜಕಾರಣಿಗಳೇ ಶ್ರೀಗಂಧವನ್ನು, ಕಾವೇರಿಯನ್ನು, ಸಹ್ಯಾದ್ರಿಯನ್ನೂ ಖಾಸಗಿ ಕಂಪನಿಗಳಿಗೆ ಮಾರಲು ತುದಿಗಾಲ ಮೇಲೆ ನಿಂತಿದ್ದಾರೆ. ಅಷ್ಟೇ ಅಲ್ಲದೆ, ನಮ್ಮ ನಾಡು, ನುಡಿಗಳ ಬಗ್ಗೆಯೂ ಚೆನ್ನಾಟವಾಡುತ್ತಿದ್ದಾರೆ.

ಆದರೆ ಸುವರ್ಣಗ್ರಾಮ, ಸುವರ್ಣ ಕರ್ನಾಟಕ ಎಂದು ಕಾರ್ಯಕ್ರಮಗಳನ್ನೂ, ಫಲಕಗಳನ್ನೂ ಎಲ್ಲೆಡೆ ನೇತು ಹಾಕುತ್ತಿದ್ದಾರೆ. ವಾಸ್ತವದಲ್ಲಿ ಈಗ ಎಲ್ಲಿದೆ ಸುವರ್ಣಗ್ರಾಮ, ಸುವರ್ಣ ಕರ್ನಾಟಕ?

ನಾವು ಕಂಡ ಸ್ವತಂತ್ರಪೂರ್ವದ ಕರ್ನಾಟಕ ಇಂದು ಏನಾಗಿದೆ? ಎಲ್ಲಿದೆ? ಇದೆಲ್ಲಾ ಏಕಾಯ್ತು? ಹೇಗಾಯ್ತು? ಇದಕ್ಕೆ ಯಾರು ಹೊಣೆ? ಪರಕೀಯರ ಆಡಳಿತವನ್ನು ದೂಷಿಸಿ ಅವರಿಂದ ಸ್ವತಂತ್ರ ಪಡೆದ ದೇಶವನ್ನೇ ಈಗ ಮತ್ತೆ ಪರಕೀಯರಿಗೆ ನೀಡಲು ಮುಂದಾಗಿದ್ದೇವೆ ಎಂದರೆ ನಾವೆಲ್ಲ ಇಂದು ಏನಾಗಿದ್ದೇವೆ?

ಇಂತಹ ಸ್ವಾತಂತ್ರ್ಯಕ್ಕಾಗಿ, ನಮ್ಮ ದೇಶವನ್ನೇ ಪರಕೀಯರಿಗೆ ಮಾರುವುದಕ್ಕಾಗಿ ನಾವು ಸ್ವಾತಂತ್ರ ಸಂಗ್ರಾಮ ಮಾಡಬೇಕಿತ್ತೇ? ಅಷ್ಟೊಂದು ಜನ ಜೈಲು ಪಾಲಾಗಬೇಕಿತ್ತೇ? ತಮ್ಮ ಜೀವವನ್ನೇ ಕಳೆದುಕೊಳ್ಳಬೇಕಿತ್ತೆ?

ನಿವೃತ್ತ ಶಿಕ್ಷಕನಾದ ನಾನು ನನ್ನ ಐವತ್ತು ವರ್ಷಗಳ ನೋವನ್ನು ಈ ಪ್ರಶ್ನೆಗಳನ್ನು ಕೇಳುವ ಮೂಲಕ ತೋಡಿಕೊಂಡಿದ್ದೇನೆ. ಈ ಪ್ರಶ್ನೆಗಳು ಈಗಲಾದರೂ ಜನರನ್ನು ಎಚ್ಚರಿಸಲಿ ಎಂದು ಆಶಿಸುತ್ತೇನೆ.

-ದಿ. ಸೂಗುರಪ್ಪ, ರಾಯಚೂರು ಜಿಲ್ಲೆ

ಪ್ರೇಮ ನನ್ನ ಧರ್ಮ, ನಾನದಕ್ಕಾಗಿ ಜೀವ ತೆರಬಲ್ಲೆ -ಜಾನ್ ಕೀಟ್ಸ್

ಕಾಮಿಡಿ ನಟರ ಟ್ರ್ಯಾಜಿಡಿ ಬದುಕು

ಸಿನಿಮಾ ನೋಡುವ ರಸಿಕರನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸಿ, ಅವರ ನೋವು ಕಷ್ಟಗಳನ್ನು ದೂರ ಮಾಡುವ ಅದೆಷ್ಟೋ ಹಾಸ್ಯ ನಟರ ನಿಜ ಜೀವನದ ಬದುಕು ಮಾತ್ರ ನರಕಮಯವಾಗಿರುವುದು ದುರಂತ. ಹಾಸ್ಯನಟರ ಇಂಥ ಕಷ್ಟಕಾರ್ಪಣ್ಯಗಳು ಇಂದು ನಿನ್ನೆಯದಲ್ಲ. ಹಾಸ್ಯ ಚಕ್ರವರ್ತಿ ನರಸಿಂಹರಾಜು ಅವರಿಂದ ಹಿಡಿದು ಇಂದಿನ ನಟರವರೆಗೂ ಈ ಟ್ರ್ಯಾಜಿಡಿ ನಿರಂತರವಾಗಿ ಮುಂದುವರೆದಿದೆ.

ಒಂದು ಕಾಲಕ್ಕೆ ರಾಜ್‌ಕುಮಾರ್‌ರಂಥ ನಾಯಕ ನಟರಿದ್ದರೂ ನರಸಿಂಹರಾಜು ಇದ್ದರೆ ಆ ಚಿತ್ರಕ್ಕೆ ಇನ್ನೂ ಹೆಚ್ಚು ಜನಪ್ರಿಯತೆ ಇರುತ್ತಿತ್ತು, ಅಂಥ ಸ್ಟಾರ್ ವ್ಯಾಲ್ಯೂ ನರಸಿಂಹರಾಜುರದ್ದು. ಸಿನಿಮಾದಲ್ಲಿ ದುಡಿದ ಅಷ್ಟಿಷ್ಟು ಹಣವನ್ನು ನರಸಿಂಹರಾಜು 'ಪ್ರೊ. ಹುಚ್ಚೂರಾಯ' ಎಂಬ ಸಿನಿಮಾದ ಮೇಲೆ ಸುರಿದರು. ಆದರೆ ಚಿತ್ರ ಕೈಕೊಟ್ಟಾಗ ಇನ್ನಿಲ್ಲದಂತೆ ಸಾಲದ ಸುಳಿಯಲ್ಲಿ ಸಿಲುಕಿಕೊಂಡರು. ಇದೇ ಹೊತ್ತಿಗೆ ಅವರ ಮಗ ಸಾವನ್ನಪ್ಪಿದ. ಪುತ್ರ ಶೋಕಂ ನಿರಂತರಂ ಎಂಬಂತೆ ಮಗನ ಸಾವು ನರಸಿಂಹರಾಜುರನ್ನು ಇನ್ನಷ್ಟು ಕಂಗಾಲು ಮಾಡಿತು.


ಕನ್ನಡ ಚಿತ್ರರಂಗದ ಹಾಸ್ಯಲೋಕವನ್ನು ಆಳಿದ್ದ ನರಸಿಂಹರಾಜು ಇದೆಲ್ಲದರಿಂದ ಹೈರಾಣಾದರು. ಕೊನೆಗಾಲದಲ್ಲಿ ಇವರ ಬ್ಯಾಂಕಿನ ಬ್ಯಾಲೆನ್ಸ್‌ನಲ್ಲಿ ನಯಾ ಪೈಸೆ ಕೂಡಾ ಇರಲಿಲ್ಲ, ಎಷ್ಟೇ ಹೆಸರು, ಕಾಂಟ್ಯಾಕ್ಟು ಗಳಿದ್ದರೂ ಅವರ ಬದುಕನ್ನು ಆವರಿಸಿಕೊಂಡಿದ್ದ ಕಷ್ಟಗಳನ್ನು ನಿವಾರಿಸಲಾಗಿರಲಿಲ್ಲ.


ಇಂತಹದ್ದೇ ಪುತ್ರ ಶೋಕದಿಂದ ಹಾಸ್ಯನಟ ಎಂ.ಎಸ್. ಉಮೇಶ್ ಇವತ್ತಿಗೂ ನರಳುತ್ತಿದ್ದಾರೆ. ಎದೆಯೆತ್ತರಕ್ಕೆ ಬೆಳೆದು ನಿಂತಿದ್ದ ಮಗನನ್ನು ಕಳೆದುಕೊಂಡ ಅವರ ಬದುಕು ಅಕ್ಷರಶಃ ನರಕಸದೃಶವಾಗಿದೆ. ಇದರೊಂದಿಗೆ, ನಾಲ್ಕು ದಶಕಗಳಿಂದ ಚಿತ್ರರಂಗದಲ್ಲಿ ಅವಿರತವಾಗಿ ಉಮೇಶ್ ದುಡಿಯುತ್ತಿದ್ದರೂ ಇಂದಿಗೂ ಅವರು ಕಿತ್ತು ಹೋದ ಹಳೆಯ ಟಿ.ವಿ.ಎಸ್.ನಲ್ಲೇ ಓಡಾಡುತ್ತಿದ್ದಾರೆ.













ಕನ್ನಡ ಚಿತ್ರರಂಗದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದ ಬಾಲಕೃಷ್ಣರ ಕತೆಯಂತೂ ಎಲ್ಲರಿಗೂ ಗೊತ್ತಿರುವಂಥದ್ದು. ಸಿನಿಮಾವನ್ನೇ ಉಸಿರಾಗಿಸಿಕೊಂಡಿದ್ದ ಬಾಲಣ್ಣ ಚಿತ್ರರಂಗದಲ್ಲಿ ದುಡಿದ ಹಣವನ್ನೆಲ್ಲ ಸ್ಟುಡಿಯೋ ನಿರ್ಮಿಸಲು ಹೋಗಿ ಕೈಸುಟ್ಟುಕೊಂಡರು. ಸಾಲದ ಸುಳಿಯಲ್ಲಿ ಸಿಲುಕಿ ಕೊನೆಕೊನೆಗೆ ಅವರಿವರ ಬಳಿ ಕೈಚಾಚುವ ಹಂತಕ್ಕೆ ತಲುಪಿದ್ದರು. ಅವರ ಕನಸಿನ ಸ್ಟುಡಿಯೋ ಅವರ ಜೀವವಿರುವ ತನಕ ಅವರನ್ನು ಬೇತಾಳದಂತೆ ಕಾಡಿತು.

ತನ್ನ ಕುಬ್ಜ ದೇಹ ಮತ್ತು ನವಿರು ಹಾಸ್ಯದಿಂದ ಪ್ರೇಕ್ಷಕರನ್ನು ನಕ್ಕು ನಗಿಸಿದ್ದ ವಾದಿರಾಜ್ ಮೂಲತಃ ಚಿತ್ರ ನಿರ್ಮಾಪಕ. ಡಾ. ರಾಜ್‌ರಂಥ ನಟರು ಅಷ್ಟು ಎತ್ತರಕ್ಕೆ ಬೆಳೆದಿದ್ದರಲ್ಲಿ ವಾದಿರಾಜ್ ನಿರ್ಮಾಣದ ಸಿನಿಮಾಗಳ ಕೊಡುಗೆಯೂ ಇದೆ. ಆದರೆ ವಾದಿರಾಜ್ ಇಂದಿಗೂ ಜನರ ಮನಸ್ಸಿನಲ್ಲಿ ನೆಲೆಸಿರುವುದು ಹಾಸ್ಯನಟರಾಗಿ. ಇಂಥ ವಾದಿರಾಜ್ ಕೂಡಾ ತಮ್ಮ ಜೀವನದ ಕೊನೆಯ ದಿನಗಳಲ್ಲಿ ಔಷಧಿ, ಮಾತ್ರೆಗಳನ್ನು ಕೊಳ್ಳಲೂ ಕಾಸಿಲ್ಲದೆ ಒದ್ದಾಡಿದ್ದರು.

ಕನ್ನಡದ ಕುಳ್ಳ ದ್ವಾರಕೀಶ್ ಪರಿಸ್ಥಿತಿಯೂ ಹೀಗೇ ಹದಗೆಟ್ಟಿತ್ತು ಅವರು ನಿರ್ಮಿಸಿದ ಚಿತ್ರಗಳು ಒಂದೇ ಸಮನೆ ನೆಲಕಚ್ಚಿ, ವಿಧಿ ಇಲ್ಲದೆ ದ್ವಾರಕೀಶ್ ತಮ್ಮ ಇದ್ದಬದ್ದ ಆಸ್ತಿಯನ್ನೆಲ್ಲಾ ಮಾರಿದ್ದರು. ಅವರ ಪುಣ್ಯಕ್ಕೆ 'ಆಪ್ತಮಿತ್ರ' ಹಿಟ್ ಆಗಿ ಅವರ ಪರಿಸ್ಥಿತಿ ಈಗ ಬದಲಾಗಿದೆ.

ಕುಡಿತಕ್ಕೆ ದಾಸರಾದವರು

ಇನ್ನು ಮುಸುರಿ ಕೃಷ್ಣಮೂರ್ತಿ, ದಿನೇಶ್‌ರಂಥ ಹಾಸ್ಯನಟರು ಕೂಡಾ ತಮ್ಮ ಪ್ರತಿಭೆಗೆ ತಕ್ಕ ಪ್ರತಿಫಲವಿಲ್ಲದೆ ಬಡತನದಲ್ಲೇ ಸೊರಗಿ ಜೀವಬಿಟ್ಟವರು. 'ಅಯ್ಯಯ್ಯಪ್ಪೋ... ಕಿಲಕಿಲಾ...' ಎಂಬ ಡೈಲಾಗು ಹೇಳುತ್ತಾ, ಉಮಾಶ್ರೀಯೊಂದಿಗೆ ಚಕ್ಕಂದವಾಡುತ್ತಾ, ಡಬಲ್ ಮೀನಿಂಗ್ ಮಾತುಗಳನ್ನಾಡಿಕೊಂಡು ತಮ್ಮದೇ ಆದ ಮ್ಯಾನರಿಸಂ ಹೊಂದಿದ್ದ ಎನ್.ಎಸ್.ರಾವ್ ಕುಡಿದು ಕುಡಿದೇ ಸತ್ತರು. ಕುಡಿತಕ್ಕೆ ಈ ಮನುಷ್ಯ ಅದ್ಯಾವ ಪರಿ ದಾಸರಾಗಿದ್ದರೆಂದರೆ, ಕುಡಿದರೆ ಮಾತ್ರ ಇವರಲ್ಲಿನ ನಟನೆ ಹೊರಬರುತ್ತಿತ್ತು. ಇವರಿಗೆ ಬರುತ್ತಿದ್ದ ಸಂಭಾವನೆ ಇವರ ಕುಡಿತಕ್ಕೂ ಸಾಲುತ್ತಿರಲಿಲ್ಲ, ಇನ್ನು ನೆಮ್ಮದಿಯ ಜೀವನವನ್ನು ಸಾಗಿಸುವುದಾದರೂ ಹೇಗೆ?

ಒಂದೆರಡು ಚಿತ್ರಗಳಲ್ಲಿ ಉತ್ತಮ ಹಾಸ್ಯ ಪಾತ್ರ ಮಾಡಿ ಹೊಸ ಭರವಸೆ ಮೂಡಿಸಿದ್ದ ಗಾಯಕ ರಾಜು ಅನಂತಸ್ವಾಮಿ ಕೂಡ ಸಂಪೂರ್ಣವಾಗಿ ಕುಡಿತಕ್ಕೆ ದಾಸನಾಗಿ ಆತ ಬದುಕುಳಿಯುವುದೇ ಕಷ್ಟ ಎಂಬಂತಾಗಿತ್ತು, ಈತನ ಅದೃಷ್ಟವೋ ಏನೋ, ಈಗ ಕುಡಿತಕ್ಕೆ ಗುಡ್‌ಬೈ ಹೇಳಿರುವ ರಾಜು ಆರೋಗ್ಯ ಚೇತರಿಸಿಕೊಳ್ಳುತ್ತಿದೆ. ಆದರೆ ಕುಡಿತದಿಂದಾಗಿ ನಟನೆಗೆ ಹಾಕಿರುವ ಅಲ್ಪವಿರಾಮ ಅದ್ಯಾವಾಗ ಅಂತ್ಯಗೊಳ್ಳುತ್ತೋ ಗೊತ್ತಿಲ್ಲ.

ಮೈಸೂರು ಲೋಕೇಶ್‌ನಂಥ ಹಾಸ್ಯನಟನ ಬದುಕು ಮತ್ತು ಸಾವು ಎರಡೂ ದೊಡ್ಡ ದುರಂತಗಳು. ಡಿಂಗ್ರಿ ನಾಗರಾಜ್ ಪತ್ನಿ ಸರ್ವಮಂಗಳಾಳೊಂದಿಗೆ ಪ್ರೇಮಕ್ಕೆ ಬಿದ್ದ ಮೈಸೂರು ಲೋಕೇಶ್ ಆಕೆಯೊಂದಿಗೆ ಜಂಟಿ ಆತ್ಮಹತ್ಯೆ ಯತ್ನಕ್ಕೆ ಮುಂದಾದ. ಆದರೆ ಕಂಠದಾನ ಕಲಾವಿದೆಯಾಗಿದ್ದ ಸರ್ವಮಂಗಳಾಳ ಗಂಟಲಿನಲ್ಲಿ ಸಿಕ್ಕಿಹಾಕಿಕೊಂಡ ವಿಷ ಆಕೆಯನ್ನು ಪಾರು ಮಾಡಿತ್ತು. ಮೈಸೂರು ಲೋಕೇಶ್‌ಗೆ ಆ ಅದೃಷ್ಟ ಇರಲಿಲ್ಲ, ವಿಷ ಆತನ ಬದುಕನ್ನೇ ಬಲಿ ತೆಗೆದುಕೊಂಡಿತು.

ಇನ್ನು ಸಿನಿಮಾ ಜೊತೆ ವೃತ್ತಿ ರಂಗಭೂಮಿಯಲ್ಲೂ ತೊಡಗಿಕೊಂಡು ಅಷ್ಟಿಷ್ಟು ಕಾಸು ಮಾಡಿಕೊಂಡಿರುವ ಟೆನ್ನಿಸ್ ಕೃಷ್ಣನಾದರೂ ತನ್ನ ಹೆಂಡತಿ ಮಕ್ಕಳೊಂದಿಗೆ ನೆಮ್ಮದಿಯಾಗಿರಬಹುದಿತ್ತು, ಆದರೆ ಆತ ಅದ್ಯಾವುದೋ ನಾಟಕದ ಹೆಂಗಸಿನ ತೆಕ್ಕೆಗೆ ಬಿದ್ದು ಬದುಕನ್ನೇ ಅವಾಂತರ ಮಾಡಿಕೊಂಡಿದ್ದಾನೆ. ಬೆಳೆದು ನಿಂತ ಮಕ್ಕಳ ಎದುರೇ ಮತ್ತೊಂದು ಮದುವೆಯನ್ನೂ ಮಾಡಿಕೊಂಡು ಯಡವಟ್ಟು ಮಾಡಿಕೊಂಡಿದ್ದಾನೆ. ಇಬ್ಬರ ಹೆಂಡಿರ ಗಂಡನಾದ ಈತನ ಬದುಕಿನಲ್ಲಿ ನೆಮ್ಮದಿ ಎಲ್ಲಿಂದ ಬಂದೀತು? ಇತ್ತೀಚೆಗೆ ಈತ ಕೂಡ ಕುಡಿತದ ದಾಸನಾಗಿದ್ದಾನೆ ಎಂಬ ಸುದ್ದಿ ಇದೆ.

ಬ್ಯಾಂಕ್ ಜನಾರ್ದನ್ ಎಂಬ ನಟ ಸಿನಿಮಾದ ವ್ಯಾಮೋಹಕ್ಕೆ ಬಿದ್ದು ಕೈಲಿದ್ದ ಬ್ಯಾಂಕ್ ನೌಕರಿಗೇ ರಾಜಿನಾಮೆ ನೀಡಿದರು. ಆದರೆ ಅವರು ನಿರೀಕ್ಷಿಸಿದ್ದಷ್ಟು ಅವಕಾಶಗಳು ಸಿನಿಮಾರಂಗದಲ್ಲಿ ಸಿಗಲಿಲ್ಲ, ಇತ್ತ ಸಿನಿಮಾಗಳೂ ಇಲ್ಲ, ಅತ್ತ ಕೆಲಸವೂ ಇಲ್ಲದೆ ಅವರು ಒದ್ದಾಡುವಂತಾಗಿದೆ. ಡಾ. ರಾಜ್ ಕುಟುಂಬದ ಬ್ಯಾನರಿನ ಬಹುತೇಕ ಎಲ್ಲ ಚಿತ್ರಗಳಲ್ಲಿ ದುಡಿದಿರುವ ಹೊನ್ನವಳ್ಳಿ ಕೃಷ್ಣರ ಪರಿಸ್ಥಿತಿಯೂ ಅರಕ್ಕೇರದೆ, ಮೂರಕ್ಕಿಳಿಯದೆ ಎಲ್ಲೂ ಸಲ್ಲದಂತಹ ಜೀವನವಾಗಿದೆ.

ಹಾಸ್ಯ ನಟಿಯರು

ನರಸಿಂಹರಾಜು ಜೋಡಿಯಾಗಿ ಅವರ ಬಹುತೇಕ ಎಲ್ಲ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಎಂ.ಎನ್. ಲಕ್ಷ್ಮೀದೇವಿಯಂತಹ ನಟಿಯ ಬದುಕು ಇಂದಿಗೂ ಕಗ್ಗತ್ತಲಿನಿಂದ ಕೂಡಿದೆ. ತನ್ನ ಗಜಗಾತ್ರದ ದೇಹದಿಂದಲೇ ಹಾಸ್ಯದ ಹೊನಲನ್ನು ಹರಿಸುತ್ತಿದ್ದ ಮಂಜುಮಾಲಿನಿಯಂತ ನಟಿ ಕೊನೆಕೊನೆಗೆ ಮನೆ ಬಾಡಿಗೆ ಕಟ್ಟಲೂ ಕಾಸಿಲ್ಲದೆ, ಕಾಯಿಲೆಗೆ ಬಿದ್ದು ಮೊನ್ನೆ ತಾನೆ ಜೀವಬಿಟ್ಟಳು. ನಟಿ ರೇಖಾದಾಸ್‌ಳ ವೈಯಕ್ತಿಕ ಬದುಕಂತೂ ಛಿದ್ರಛಿದ್ರವಾಗಿದೆ.










ಇದ್ದುದರಲ್ಲಿ ಉಮಾಶ್ರೀ ಜೀವನವೇ ಪರವಾಗಿಲ್ಲ, ವೈವಾಹಿಕ ಜೀವನದಲ್ಲಿ ನೆಮ್ಮದಿ ಕಾಣದಿದ್ದಾಗ ಆಕೆ ಕಷ್ಟಪಟ್ಟು ಡ್ರಾಮಾಗಳಲ್ಲಿ, ಆನಂತರ ಸಿನಿಮಾಗಳಲ್ಲಿ ಅಭಿನಯಿಸುತ್ತಾ, ಮಕ್ಕಳನ್ನು ವಿದ್ಯಾವಂತರನ್ನಾಗಿಸಿ, ರಾಜಕಾರಣಿಯೂ ಆಗಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.

ನಾಯಕರಾದ ಹಾಸ್ಯನಟರು

ಸಿಕ್ಕ ಸಣ್ಣಪುಟ್ಟ ಹಾಸ್ಯಪಾತ್ರಗಳಲ್ಲಿ ಮಿಂಚುತ್ತಿದ್ದ ಟೆನ್ನಿಸ್ ಕೃಷ್ಣ, ಮಂಡ್ಯ ರಮೇಶ್, ಸಾಧು ಕೋಕಿಲಾ, ಶರಣ್‌ರಂಥ ನಟರು ನಾಯಕರಾಗಲು ಹೋಗಿ ಇದ್ದಬದ್ದ ಅವಕಾಶಗಳಿಗೂ ಕೊಡಲಿ ಪೆಟ್ಟು ಹಾಕಿಕೊಂಡರು. ಇವರುಗಳು ನಾಯಕರಾದ ಯಾವ ಚಿತ್ರಗಳೂ ಗಟ್ಟಿಯಾಗಿ ನಿಂತಿಲ್ಲ. ಮಂಡ್ಯ ರಮೇಶ್‌ನ 'ಕಲರ್ಸ್' ಆತನ ವೃತ್ತಿಬದುಕಿನ ಬಣ್ಣವನ್ನೇ ಮಂಕಾಗಿಸಿದರೆ, ಸಾಧು ಕೋಕಿಲಾನ 'ತಿಮ್ಮರಾಯಿ' ಈತನನ್ನು ಅಪಹಾಸ್ಯಕ್ಕೆ ಈಡು ಮಾಡಿತು. ಇನ್ನು ಶರಣ್ ನಟಿಸಿರುವ 'ಸುಂದರಿ ಗಂಡ ಸದಾನಂದ' ಚಿತ್ರ ಡಬ್ಬಾದಲ್ಲೇ ಕುಳಿತಿದೆ. ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ನಾಯಕನಾಗುವ ಹುಂಬತನಕ್ಕೆ ಕೈಹಾಕದೇ, ಇದ್ದ ಅವಕಾಶಗಳಲ್ಲೇ ಒಳ್ಳೆಯ ನಟನೆ ನೀಡಿ ಮಿಂಚುತ್ತಿರುವ ನಟ ಕೋಮಲ್. ಈಗ ಇರುವ ಹಾಸ್ಯ ನಟರಲ್ಲೇ ಹೆಚ್ಚು ಸಂಭಾವನೆ ಪಡೆಯುವ ಹೆಗ್ಗಳಿಕೆಯೂ ಕೋಮಲ್‌ಗೆ ಸಲ್ಲುತ್ತದೆ. ಈ ಮಧ್ಯೆ ಹಾಸ್ಯ ನಾಯಕ ನಟರಾಗಿ ಕನ್ನಡದಲ್ಲಿ ಹೆಸರು ಮಾಡಿದವರು ಇಬ್ಬರು ಮಾತ್ರ: ಕಾಶಿನಾಥ್ ಮತ್ತು ಜಗ್ಗೇಶ್.





ತಮಿಳು, ತೆಲುಗಿನ ಪರಿಸ್ಥಿತಿಯೇ ಬೇರೆ

ತಮಿಳು ಚಿತ್ರರಂಗದಲ್ಲಿ ಹಾಸ್ಯ ನಟರಿಗೆ ಸ್ಟಾರ್ ವ್ಯಾಲ್ಯೂ ಇದೆ. ಸೆಂದಿಲ್, ಗೌಂಡಮಣಿ, ವಿವೇಕ್‌ರಂಥ ನಟರುಗಳು ಇದ್ದರೆ ಆ ಚಿತ್ರಕ್ಕೆ ಒಂದು ಕಸುವು ಇದ್ದಂತೆ. ಈ ಕಾರಣಕ್ಕಾಗಿ ಈ ಹಾಸ್ಯನಟರ ಕಾಲ್‌ಶೀಟ್‌ಗಾಗಿ ಹಲವಾರು ಹಿರಿ ತಲೆಗಳೂ ಕಾಯುತ್ತಾರೆ. ಅಷ್ಟೇ ಅಲ್ಲ, ಥಿಯೇಟರುಗಳ ಮುಂದೆ ಹೀರೋಗಳಂತೆ ಇವರ ಬೃಹದಾಕಾರದ ಕಟೌಟುಗಳನ್ನೂ ನಿಲ್ಲಿಸುತ್ತಾರೆ.

ನೋಡಲು ಕಣ್ಣಿಗೆ ವಿಚಿತ್ರವಾಗಿರುವ ವಡಿವೇಲುವಿನಂಥ ಹಾಸ್ಯ ನಟನ ಮೇಲೆ ಧೈರ್ಯವಾಗಿ ಹತ್ತಾರು ಕೋಟಿಗಳ ಬಂಡವಾಳವನ್ನು ಹೂಡುತ್ತಾರೆ. ವಡಿವೇಲು ನಟಿಸಿದ 'ಹಿಂಸೈ ಅರಸನ್ 23 ಪುಲಿಕೇಶಿ' ಚಿತ್ರ ದೊಡ್ಡ ನಾಯಕ ನಟರ ಸಿನಿಮಾಕ್ಕೆ ಸರಿಸಮನಾದ ಯಶಸ್ಸು ಮತ್ತು ಗಳಿಕೆಯನ್ನೂ ತಂದುಕೊಟ್ಟಿದೆ.

ಇನ್ನು ತೆಲುಗಿನ ಬ್ರಹ್ಮಾನಂದಂನ ಸ್ಟಾರ್‌ವ್ಯಾಲ್ಯೂ ಮತ್ತು ಆತನ ಬಗ್ಗೆ ಚಿತ್ರರಂಗದಲ್ಲಿನ ಕ್ರೇಜ್ ಎಲ್ಲರಿಗೂ ತಿಳಿದಿದ್ದೇ. ಈತ ಅತಿ ಹೆಚ್ಚು ಸಿನಿಮಾಗಳಲ್ಲಿ ನಟಿಸಿ ದಾಖಲೆಯನ್ನೂ ನಿರ್ಮಿಸಿದ್ದಾನೆ.

ಆದರೆ ಇದೆಲ್ಲದಕ್ಕೆ ವ್ಯತಿರಿಕ್ತವಾಗಿ ಕನ್ನಡದ ಹಾಸ್ಯನಟರು ಅತ್ತ ಸಾಕಷ್ಟು ಅವಕಾಶಗಳೂ ಇಲ್ಲದೆ, ಇತ್ತ ಸೂಕ್ತ ಸಂಭಾವನೆಯೂ ಇಲ್ಲದೆ ನರಳುವಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮನ್ನು ನಗಿಸುವ, ರಂಜಿಸುವ ನಟರೂ ನಗುತ್ತಾ ನೆಮ್ಮದಿಯ ಬದುಕನ್ನು ಕಾಣುವುದು ಹೇಗೆ ಸಾಧ್ಯ? ಈ ಕಾಮಿಡಿ ನಟರ ಟ್ರ್ಯಾಜಿಡಿ ಬದುಕಿಗೆ ಕೊನೆ ಯಾದರೂ ಎಂದು?

■ ಅರುಣ್.ಜಿ

ಎಲ್ಲಿಯ ಸುರ್ವೆ ಎಲ್ಲಿಯ ಎಸ್ಪಿ?



ಪ್ರಶಸ್ತಿ, ಸನ್ಮಾನಗಳಿಗೆ ಆಸೆ ಪಡುವ ಜನರಿಂದ ಅಷ್ಟೋ ಇಷ್ಟೋ ದುಡ್ಡು ಪೀಕಿ, ಅವರು ಕೊಟ್ಟ ದುಡ್ಡಿಗೆ ಕಲಾಕ್ಷೇತ್ರದಲ್ಲೊ ಅಥವಾ ಟೌನ್‌ಹಾಲಿನಲ್ಲೋ ಒಂದು ಪ್ರೋಗ್ರಾಂ ಮಾಡಿ 'ಸನ್ಮಾನಿತರಿಗೆ' ಶಿಲ್ಕು ಹಾರ, ಶಾಲುಗಳನ್ನು ಮಾರುತ್ತಾ ಅವರನ್ನೂ ತೃಪ್ತಿಪಡಿಸುತ್ತಾ ತಾನೂ ಒಂದಿಷ್ಟು ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದ ರಮೇಶ್ ಸುರ್ವೆ ಎಂಬ ಆಸಾಮಿ. ಈತ ಇತ್ತೀಚೆಗೆ ಅದು ಹೇಗೋ ಶ್ರೀನಿವಾಸ್‌ರಂಥ ದುಡ್ಡಿನ ಮನುಷ್ಯನನ್ನು ತನ್ನ ಬುಟ್ಟಿಗೆ ಹಾಕಿಕೊಂಡು ರಾತ್ರೋ ರಾತ್ರಿ 'ಮಂದಾಕಿನಿ' ಎಂಬ ಚಿತ್ರಕ್ಕೆ ನಿರ್ದೇಶಕನಾದ ವಿಷಯ ಹಳೇದು ಬಿಡಿ.

ಇಂಥ ಸುರ್ವೆ ಈಗ ಮತ್ತೆ ಸುದ್ದಿ ಮಾಡಿದ್ದಾನೆ. "ಎಸ್. ಜಾನಕಿ, ಎಸ್.ಪಿ.ಬಾಲಸುಬ್ರಮಣ್ಯಂರಂಥ ಹಿರಿಯ ಗಾಯಕರುಗಳು ನನ್ನ ಚಿತ್ರದಲ್ಲಿ ಹಾಡಿದ್ದಾರೆ. ಆದರೆ ಅವರು ಹಾಡಿದ ಹಾಡುಗಳನ್ನು ನಾನು ಅಷ್ಟು ಸುಲಭವಾಗಿ ಒಪ್ಪದೇ ಮತ್ತೆ ಮತ್ತೆ ಹಾಡಿಸಿ ಅವರಿಗೆ ಬೆವರಿಳಿಸಿದ್ದೇನೆ" ಎಂಬ ಆಭಾಸದ ಮಾತನ್ನು ಈತ ಆಡಿ ಈಗ ನಗೆಪಾಟಲಿಗೀಡಾಗಿದ್ದಾನೆ.

ಮೂವತ್ತು ಮೂವತ್ತೈದು ಸಾವಿರ ಹಾಡುಗಳನ್ನು ಹಾಡಿರುವ ಎಸ್ಪಿ-ಜಾನಕಿಯಂಥವರೆಲ್ಲಿ? ತನ್ನ ಜೀವನದ ಮಹಾನ್ ಸಾಧನೆ ಎಂಬಂತೆ ಈಗತಾನೆ ನಿರ್ದೇಶಕನಾಗಿರುವ ಈ ಸುರ್ವೆ ಎಲ್ಲಿ?

ಚಿತ್ರ ಬಿಡುಗಡೆಯಾದ ನಂತರ ಪ್ರೇಕ್ಷಕ ಮಹಾಪ್ರಭು ಸುರ್ವೆಗೇ ಬೆವರಿಳಿಸಬಹುದೆಂಬುದನ್ನು ಆತ ಆದಷ್ಟು ಬೇಗ ಅರಿತರೆ ಆತನಿಗೇ ಒಳ್ಳೆಯದು.

ಗೋಲ್ಡನ್ ಜಯಣ್ಣ ಈಗ ನಿರ್ಮಾಪಕ

ಹಂಚಿಕೆದಾರ ಜಯಣ್ಣ ಕಳೆದ ಮೂರು ವರ್ಷಗಳಲ್ಲಿ ಮುಟ್ಟಿದ್ದೆಲ್ಲಾ ಚಿನ್ನವಾಗಿದೆ. ಆದ್ದರಿಂದ ಇವರನ್ನು ಕೆಲವರು 'ಲಕ್ಕಿ' ಹಂಚಿಕೆದಾರ ಎಂದೂ, ಹಲವರು 'ಗೋಲ್ಡನ್ ಡಿಸ್ಟ್ರಿಬ್ಯೂಟರ್' ಎಂದೂ ಹೇಳುತ್ತಿದ್ದಾರೆ.

ಅಂತಹ ಜಯಣ್ಣ ಈಗ ನಿರ್ಮಾಪಕರಾಗಿದ್ದಾರೆ. ಅವರ ನಿರ್ಮಾಣದ 'ಅರ್ಜುನ್' ಚಿತ್ರಕ್ಕೆ ದರ್ಶನ್ ನಾಯಕರಾಗಿ ಆಯ್ಕೆಯಾಗಿದ್ದಾರೆ. ಇದು ಅಷ್ಟು ಅಚ್ಚರಿ ಹುಟ್ಟಿಸುವುದಿಲ್ಲ. ಯಾಕೆಂದರೆ ದರ್ಶನ್ ಹೇಳುವ ಪ್ರಕಾರವೇ ಅವರು ನಟಿಸಿರುವ ಸುಮಾರು ಮೂವತ್ತೈದು ಚಿತ್ರಗಳಲ್ಲಿ ಇಪ್ಪತ್ತೈದು ಚಿತ್ರಗಳನ್ನು ಜಯಣ್ಣ ಬಿಡುಗಡೆ ಮಾಡಿದ್ದಾರಂತೆ. ಅಂದರೆ ದರ್ಶನ್ ಸಿನಿಮಾ ರಿಲೀಜ್ ಮಾಡಿ ಜಯಣ್ಣ ಕೋಟ್ಯಂತರ ರೂಪಾಯಿ ಲಾಭ ಮಾಡಿದ್ದಾರೆ ಎಂದಾಯಿತು. ಈಗ ಆ ಲಾಭದಲ್ಲೇ ಒಂದು ಭಾಗವನ್ನು ಜಯಣ್ಣ ಮತ್ತೆ ದರ್ಶನ್ ಮೇಲೆ ಸುರಿಯುತ್ತಿದ್ದಾರೆ. ಈಗ ಬಿಡುಗಡೆಗೆ ತಯಾರಾಗಿರುವ 'ಗಜ', 'ಇಂದ್ರ' ಚಿತ್ರಗಳನ್ನು ಕೂಡಾ ಜಯಣ್ಣನವರೇ ಬಿಡುಗಡೆ ಮಾಡುತ್ತಿದ್ದಾರಂತೆ. ಅಲ್ಲಿಗೆ ಜಯಣ್ಣ ಮತ್ತು ದರ್ಶನ್ ಸ್ನೇಹದ ಒಂದು ಹೊಸ ಅಧ್ಯಾಯ ಆರಂಭವಾದಂತೆ.

R B P LANKESH, Kannada Weekly Price Rs. 10/- 26-12-2007 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4

ಸ್ಲಮ್ ಬಾಲನಾಗಿ ವಿಜಯ್



'ಆ ದಿನಗಳು' ಚಿತ್ರದಲ್ಲಿ ರೌಡಿ ಜೈರಾಜ್, ಭೂಗತ ದೊರೆ ಕೊತ್ವಾಲ್ ಮತ್ತು ಆಯಿಲ್ ಕುಮ್ಮಾರನನ್ನು ತೋರಿಸಿದ್ದಾಯಿತು. ಈಗ ಅದೇ ತಂಡ ಮತ್ತೊಬ್ಬ ರೌಡಿ ಸ್ಲಮ್ ಬಾಲ ಎಂಬಾತನ ಕತೆಯನ್ನು ಬೆಳ್ಳಿತರೆಗೆ ತರಲು ಸಿದ್ಧತೆ ನಡೆಸಿದೆ. ಒಂದೇ ಒಂದು ವ್ಯತ್ಯಾಸವೆಂದರೆ ನಿರ್ದೇಶಕ ಚೈತನ್ಯನ ಬದಲಾಗಿ ಸುಮನಾ ಕಿತ್ತೂರು ಎಂಬಾಕೆ ಇವರ ನಿರ್ದೇಶಕಿಯಾಗಿದ್ದಾಳೆ.

ಬಹುಶಃ ಇತರರು ಗಾಂಧಿ, ಅಂಬೇಡ್ಕರ್, ಭಗತ್‌ರ ಜೀವನ ಕತೆಗಳನ್ನು ಚಿತ್ರವಾಗಿಸುವ ರೀತಿ ಈ ತಂಡ ಬೆಂಗಳೂರಿನ ಭೂಗತ ಜೀವಿಗಳನ್ನು ಒಬ್ಬರ ನಂತರ ಒಬ್ಬರನ್ನು ತೆರೆಗೆ ಕರೆತರಬಹುದು! ಮತ್ತು 'ಆ ದಿನಗಳು' ಚಿತ್ರದಲ್ಲಿ ತೋರಿಸಿದ್ದಂತೆ ಕೊಲೆ ಮಾಡಿದರೂ ಬಚಾವಾಗುವುದು ಹೇಗೆ, ಡಬಲ್ ಕ್ರಾಸ್ ಮಾಡುತ್ತಾ ಭೂಗತ ಜಗತ್ತಲ್ಲಿ ಗೆಲ್ಲುವುದು ಹೇಗೆ ಎಂಬಂತಹ 'ಉತ್ತಮ' ನೀತಿ, ಮೌಲ್ಯ, ನಿಯಮಗಳ ಪಾಠಗಳೂ ಇರುತ್ತವೇನೋ.

ಅಂದಹಾಗೆ ಈ ಚಿತ್ರದಲ್ಲಿ ಸ್ಲಂ ಬಾಲನಾಗಿ 'ದುನಿಯಾ' ವಿಜಯ್ ಅಭಿನಯಿಸುತ್ತಿದ್ದಾನೆ. ನಾಯಕಿಯಾಗಿ ತೆಲುಗಿನ ಶ್ರದ್ಧಾ ಆರ್ಯ ಆಯ್ಕೆಯಾಗಿದ್ದಾಳಂತೆ. ಈಕೆ ಪುನೀತ್‌ನ ಹೊಸ ಚಿತ್ರ 'ಮಯೂರ'ದಲ್ಲೂ ನಟಿಸುತ್ತಿದ್ದಾಳೆ.

'ನತದೃಷ್ಟ'ನಿಗೆ ಐದು ಚಿತ್ರಗಳ ಅದೃಷ್ಟ



ಯುವ ನಾಯಕನಟರಲ್ಲಿ 'ನತದೃಷ್ಟ' ಎಂಬ ಹಣೆಪಟ್ಟಿ ಆದಿತ್ಯನಿಗೆ ಅಂಟಿಕೊಂಡಿದೆ. ಇಲ್ಲಿಯವರೆಗೆ ಈತ ನಟಿಸಿರುವ ಯಾವ ಚಿತ್ರವೂ ಹಿಟ್ ಆಗಿಲ್ಲ ಮಾತ್ರವಲ್ಲ, ಈತ ದರ್ಶನ್ ಜೊತೆ ನಟಿಸಿದ 'ಸ್ನೇಹಾನಾ ಪ್ರೀತಿನಾ' ಕೂಡ ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದ ನಂತರ ಆತನನ್ನು ಗಾಂಧಿನಗರದಲ್ಲಿ ಕೇಳುವವರೇ ಇಲ್ಲದಂತಾಗಿದೆ.

ಆದರೆ ಈ ಸೋಲುಗಳಿಂದ ಆದಿತ್ಯ ಧೃತಿಗೆಟ್ಟಿಲ್ಲ. ಸುಮಾರು ಎಂಟು ಕೇಜಿ ತೂಕ ಇಳಿಸಿಕೊಂಡಿರುವ ಆದಿತ್ಯ ಈಗ ಹೊಸ ಹುಮ್ಮಸ್ಸಿನಲ್ಲಿದ್ದಾರೆ. ಬರುವ ಜನವರಿ 14 ಮಕರ ಸಂಕ್ರಾಂತಿ ದಿನದಂದು ಈತ ನಟಿಸುತ್ತಿರುವ ಐದು ಹೊಸ ಚಿತ್ರಗಳು ಸೆಟ್ಟೇರಲಿವೆಯಂತೆ. ಹೀಗೆ ಐದು ಚಿತ್ರಗಳನ್ನು ಒಂದೇ ದಿನ ಆರಂಭಿಸುವ ಮುಖಾಂತರ ದೊಡ್ಡ ರೀತಿಯಲ್ಲಿ ಗಾಂಧಿನಗರವನ್ನು ಮರುಪ್ರವೇಶ ಮಾಡಲು ಆದಿತ್ಯ ತಯಾರಾಗಿದ್ದಾನೆ. ಆ ಐದರಲ್ಲಿ ಒಂದು 'ದೆಡ್ಲಿ ಸೋಮ ಭಾಗ-2'. ಆದಿತ್ಯನ ಎರಡನೆ ಇನ್ನಿಂಗ್ಸ್ ಯಶಸ್ವಿಯಾಗುತ್ತದೋ ಎಂದು ನೋಡಬೇಕಷ್ಟೆ.



ರಾಜ್ ಪುತ್ರರ ಸ ಮಾ ಗ ಮ

ರಾಜ್ ಮಕ್ಕಳಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಮೊದಲ ಬಾರಿಗೆ ಒಂದೇ ಚಿತ್ರದಲ್ಲಿ ನಟಿಸಲಿದ್ದಾರೆ. ಕವಿತಾ ಲಂಕೇಶ್ ನಿರ್ದೇಶನದ 'ಅವ್ವ' ಚಿತ್ರದ ಮುಖಾಂತರ ಕನ್ನಡಕ್ಕೆ ಕಾಲಿರಿಸಿದ ಪಿರಮಿಡ್ ಸಾಯಿಮಿರಾ ಸಂಸ್ಥೆ ಈ ತ್ರಿಮೂರ್ತಿಗಳ 'ಓಂ' ಚಿತ್ರವನ್ನು ನಿರ್ಮಿಸಲಿದೆ.

ಈ ಸಹೋದರರ ಸಮಾಗಮ ಸಂತೋಷ ತರುವ ವಿಷಯವಾದರೂ ಈ ಚಿತ್ರವನ್ನು ರವಿ ಶ್ರೀವತ್ಸ ಎಂಬಾತ ನಿರ್ದೇಶಿಸುತ್ತಿರುವುದು ಅಷ್ಟು ಹಿತಕರವಾದ ಸುದ್ದಿಯಲ್ಲ. ಯಾಕೆಂದರೆ ಈತ ಇಲ್ಲಿಯವರೆಗೂ ನಿರ್ದೇಶಿಸಿರುವ ಚಿತ್ರಗಳಾದ 'ಗಂಡ ಹೆಂಡತಿ', 'ರಾಜೀವ್ ಗಾಂಧಿ ಅಲ್ಲ' ಎಂಬ ಚಿತ್ರಗಳು ಎಲ್ಲಾ ರೀತಿಯಲ್ಲೂ ಅಸಭ್ಯವಾಗಿದ್ದವು. ಇದ್ದದ್ದರಲ್ಲಿ 'ದೆಡ್ಲಿ ಸೋಮ' ಪರವಾಗಿರಲಿಲ್ಲ. ರಾಜ್‌ರ ಮೂರು ಪುತ್ರರನ್ನು ಹಾಕಿಕೊಂಡು



ಸಿನಿಮಾ ಮಾಡಲು ಈತನಿಗಿಂತ ಹೆಚ್ಚು ಸಾಮರ್ಥ್ಯವಿರುವ ನಿರ್ದೇಶಕರಿದ್ದರೂ ಪಿರಮಿಡ್ ಸಂಸ್ಥೆಯವರು ಈತನನ್ನು ಯಾಕೆ ಆಯ್ಕೆ ಮಾಡಿಕೊಂಡರೆಂಬುದು ನಿಗೂಢವಾಗಿದೆ.

ಸದ್ಯಕ್ಕೆ ರಾಘವೇಂದ್ರ ರಾಜ್‌ಕುಮಾರ್ ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲ ಎಂಬಂತಿದ್ದರೂ ಶಿವು ಮತ್ತು ಪುನೀತ್ ಬಾಕ್ಸ್ ಆಫೀಸಿನಲ್ಲಿ ಗೆಲ್ಲುವ ಕುದುರೆಗಳಾಗಿರುವುದರಿಂದ ಗಾಂಧಿನಗರದ ಹಂಚಿಕೆದಾರರು ಈಗಾಗಲೇ ಲೆಕ್ಕಾಚಾರದಲ್ಲಿ ಮುಳುಗಿದ್ದಾರೆ.

ವಾಕರಿಕೆ ಹುಟ್ಟಿಸುವ 'ಲವ-ಕುಶ'



ಸುಮಾರು ಆರು ವರ್ಷಗಳ ನಂತರ ಉಪೇಂದ್ರ ಮತ್ತು ಶಿವರಾಜ್‌ಕುಮಾರ್ 'ಲವ-ಕುಶ'ದಲ್ಲಿ ಜೊತೆಯಾಗಿ ನಟಿಸಿದ್ದರೂ, ಈ ಚಿತ್ರಕ್ಕೆ ನಿರ್ಮಾಪಕ ಪ್ರಭಾಕರ್ ಏಳು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದರೂ, ನಿರ್ದೇಶಕ ಸಾಯಿಪ್ರಕಾಶ್ ಅದನ್ನು ಅಪ್ಪಟ ಕಮರ್ಷಿಯಲ್ ಚಿತ್ರವಾಗಿ ನಿರೂಪಿಸಿದ್ದರೂ, ಚಿತ್ರ ಮಾತ್ರ ಕೆಟ್ಟದಾಗಿದೆ ಎನ್ನದೆ ವಿಧಿ ಇಲ್ಲ. ಲಾಜಿಕ್ ಇಲ್ಲದ ಕತೆ ವಾಕರಿಕೆ ಹುಟ್ಟಿಸುತ್ತದೆ. 'ಆ್ಯಪಲ್ ಆ್ಯಪಲ್' ಹಾಡು ನಿರ್ದೇಶಕರ ಕ್ರಿಯೇಟಿವಿಟಿಯ ದಿವಾಳಿತನವನ್ನು ತೋರಿಸಿದರೆ, ಸಾರೇ ಜಹಾನ್ಸೆ ಅಚ್ಛಾ ಎಂಬ ಹಾಡನ್ನು ರಾಷ್ಟ್ರಗೀತೆ ಎಂದು ತೋರಿಸಿದ್ದು ಅವರ ಅಜ್ಞಾನವನ್ನು ಬಹಿರಂಗಗೊಳಿಸುತ್ತದೆ. ಚಿತ್ರದ ಹಾಡುಗಳ ಎಡಿಟಿಂಗ್ ಮತ್ತು ರೀ ಮಿಕ್ಸಿಂಗ್ ಅಂತೂ ಕಣ್ಣಿಗೆ ತ್ರಾಸ ನೀಡುತ್ತವೆ.

ಇಷ್ಟಲ್ಲದೆ ಈ ಚಿತ್ರದ ಬಗ್ಗೆ ಹೇಳಲು ಇನ್ನೇನು ಇಲ್ಲ ಎಂದರೆ ಸಾಕೆನಿಸುತ್ತದೆ.



'ಗಜ' ಚಿತ್ರದಲ್ಲಿ ವಿಕ್ಕಾ ಕೋಸ್ಲಾ

ಸೈಲೆಂಟ್ ರಾಕ್

ಡಿಸೆಂಬರ್ ತಿಂಗಳ ಮೊದಲೆರಡು ವಾರಗಳಲ್ಲಿ ಗಾಂಧಿನಗರ ಸಖತ್ ಬಿಜಿಯಾಗಿತ್ತು. ಆ ಹದಿನೈದು ದಿನಗಳಲ್ಲಿ ಒಟ್ಟು ಹದಿನಾರು ಹೊಸ ಚಿತ್ರಗಳು ಸೆಟ್ಟೇರಿದವು. ಕೆಲವೊಮ್ಮೆ ಎರಡು, ಮೂರು ಚಿತ್ರಗಳ ಮುಹೂರ್ತ ಒಂದೇ ದಿನ ನಡೆದವು. ಅವುಗಳಲ್ಲಿ ಪುನೀತ್ ರಾಜ್‌ಕುಮಾರ್ ಅಭಿನಯದ 'ಮಯೂರ', ದರ್ಶನ್ ಅಭಿನಯದ 'ಅರ್ಜುನ್', ಅಜಯ್ ಅಭಿನಯದ 'ತಾಜ್‌ಮಹಲ್' ಪ್ರಮುಖ.

ಇವೆಲ್ಲ ಚಿತ್ರಗಳು ಅತ್ಯಂತ ಅದ್ದೂರಿಯಾಗಿ ಭಾರೀ ಪ್ರಚಾರದೊಂದಿಗೆ ಆರಂಭವಾದರೆ, ರಾಕ್‌ಲೈನ್ ವೆಂಕಟೇಶ್ ನಿರ್ಮಾಣದ ಹೊಸ ಚಿತ್ರವೊಂದು ಸದ್ದು ಗದ್ದಲವಿಲ್ಲದೇ ಆರಂಭವಾಯಿತು. ಆ ಚಿತ್ರದ ನಾಯಕ ಗಣೇಶ್, ನಿರ್ದೇಶಕ ದಿ. ರಾಜೇಂದ್ರ ಬಾಬು.

ರಾಮ... ಪ್ರಸಾದ... ಅಪ್ಪಬ... ತಂ...



ಹ್ಯಾಪೆ ಮುಖದ ಕಾಶೀನಾಥ್ ನಟಿಸಿರುವ 'ಅ... ಚಿತ್ರ ಪ್ರತಿಷ್ಠೆಯ ಕಪಾಲಿ ಥಿಯೇಟರಿನಲ್ಲಿ ಬಿಡುಗಡೆಯ... ಆದರೆ ಶಿವರಾಜ್‌ಕುಮಾರ್ ಮತ್ತು ಉಪೇಂದ್ರ ನಟ... ಅದ್ದೂರಿ ಚಿತ್ರ 'ಲವ-ಕುಶ'ಕ್ಕೆ ಥಿಯೇಟರ್ ಸಮಸ್ಯೆ ಎದ... ಕೊನೆ ಕ್ಷಣದಲ್ಲಿ ಅದು ಮೇನಕಾದಲ್ಲಿ ತೆರೆಕಂಡಿದೆ.

ಕಾಶೀನಾಥ್ ಚಿತ್ರಕ್ಕೆ 'ಕಪಾಲಿ' ಹೇಗೆ ದೊರೆಯಿ... ಎಂಬ ಪ್ರಶ್ನೆಗೆ ಉತ್ತರ ಅಶ್ವಿನಿ ರಾಮ್‌ಪ್ರಸಾ... ಕಾರ್ಯತಂತ್ರ!

ವಿಷಯವಿಷ್ಟೇ. ಪ್ರೇಮ್ ನಿರ್ದೇಶನದ 'ಕರಿ... 'ಎಕ್ಸ್‌ಕ್ಯೂಸ್‌ಮಿ', 'ಜೋಗಿ' ಈ ಮೂರೂ ಚಿತ್ರ... ಕಪಾಲಿಯಲ್ಲೇ ಬಿಡುಗಡೆಗೊಂಡಿದ್ದವು ಮತ್ತು ಹಿಟ್ ಆಗಿ... ಹೀಗಾಗಿ ಪ್ರೇಮ್‌ಗೂ, ಕಪಾಲಿಗೂ ಎಲ್ಲಿಲ್ಲದ ನಂ... ಸೆಂಟಿಮೆಂಟು. "ನನ್ನ ಚಿತ್ರ 'ಪ್ರೀತಿಭೂಮೇ' ಹಿಟ್... ಬೇಕಾದರೆ ಏನಾದರೂ ಮಾಡಿ ಕಪಾಲಿಯನ್ನೇ ಕಸಿಯ... ಎಂದು ಪ್ರೇಂ ಹಠ ಹಿಡಿದಿದ್ದರಂತೆ. ಇದಕ್ಕಾಗಿ 'ಲವ-ಕು... ಯಾವುದೇ ಕಾರಣಕ್ಕೂ ಕಪಾಲಿ ಸಿಗದಂತೆ ಪ್ಲಾನ್... ಕಾಶಿನಾಥ್ ಚಿತ್ರಕ್ಕೆ ದಾರಿ ಮಾಡಿಕೊಟ್ಟಿದ್ದಾರೆ. ಹೇಗಿ... 'ಅಪ್ಪಬ್ಬೆ' ಒಂದು ಅಥವಾ ಎರಡು ವಾರಗಳಲ್ಲಿ ಎ... ಯಾಗುತ್ತದೆ, ಆಗ 'ಪ್ರೀತಿಭೂಮೇ' ಚಿತ್ರವನ್ನು ಬಿಡುಗಡೆ ಮಾಡಿದರಾಯಿತು ಎಂಬುದು ರಾಮ್‌ಪ್ರ... ಲೆಕ್ಕಾಚಾರ.

ಒಂದು ವೇಳೆ 'ಅಪ್ಪಬ್ಬೆ'ಯೇನಾದರೂ ಅಪ್ಪಿತಪ್ಪಿ... ಕಪಾಲಿಯಲ್ಲೇ ಕಚ್ಚಿಕೊಂಡುಬಿಟ್ಟರೆ ರಾಮ್ ಪ್ರ... ಲೆಕ್ಕಾಚಾರ ಕೈಕೊಟ್ಟಂತೆಯೇ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4